ಹೇಗೆ ಸಾಧ್ಯ? ಆದುದರಿಂದ ಕನ್ನಡ ಬಡ್ಜೆಟ್ ಪ್ರತಿಗಳನ್ನೂ ಸದಸ್ಯರಿಗೆ ಒದಗಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Statement laid on the Table.

Sri T. MARIAPPA (Home Minister).—Sir, I beg leave to lay on the Table of this House Ordinance No. 1 of 1950, the Mysore Village Panchayet (Amendment) Ordinance, 1950.

RESOLUTIONS.

Mr. SPEAKER.—Resolutions may be taken up now.

Resolution No. 1.

Sri M. N. JOIS (Mysore District—General).—Sir, in view of the covenants entered into by the Government of India with the Maharaja of Mysore in relation to his properties and the consequent action that is being taken by the Government of Mysore, I do not propose to move the resolution standing in my name and which reads thus:

"This Assembly is of the opinion that a Committee of five should be constituted by the Government of Mysore to scrutinise the rights, title and interest of the immovable properties in the possession of the Palace, *i.e.*, Rajpramukh of Mysore."

Sri H. M. CHANNABASAPPA (Mysore District—General).—On a point of information, Mr. Speaker. Can a member make a statement when he withdraws the resolution?

Mr. SPEAKER.—I thought he was moving his resolution. Honourable Member is not moving his resolution.

Next resolution: Mr. S. Kariappa.

Resolution No. 2.

Free Technical advice to private persons for constructing small dams, anecuts, etc.

*ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ನಾನು ಸಭೆಯ ಮುಂದೆ ಮಂಡಿಸಬೇಕೆಂದಿರುವ ನಿರ್ಣಯ ಈ ರೀತಿ ಇದೆ :

"This Assembly is of the opinion that the Government of Mysore should take effective step by giving free technical guidance to private persons in the construction of small dams, anecuts, pick up-weirs, etc., of their own, so that the much-talked-of "Grow More Food" scheme may become more fruitful."

ಸ್ವಾಮಿ, ಈಗ ದೇಶದಲ್ಲಿ ಆಹಾರದ ಕೊರತೆ ಎಷ್ಟು ಮಟ್ಟಿಗಿದೆಯೆಂಬುದು ಎಲ್ಲರಿಗೂ ಗೊತ್ತಿರುವ ವಿಚಾರ. ಈಗಿರತಕ್ಕ ಈ ಕೊರತೆಯನ್ನು ನಿವಾರಣೆ ಮಾಡಬೇಕಾದರೆ ಕೈಗೊಳ್ಳಬೇಕಾದ ಮಾರ್ಗಗಳನ್ನು ಒಂದೆರಡಲ್ಲ ಅನೇಕ ಮಾರ್ಗಗಳನ್ನು ಅನುಸರಿಸಬೇಕಾಗಿದೆ. ಈಗಾಗಲೇ ಸರ್ಕಾರದವರು ಈ ವಿಷಯದಲ್ಲಿ ಅನೇಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಇದು ಎಲ್ಲರಿಗೂ ಗೊತ್ತಿರುವ ವಿಚಾರವಾದುದರಿಂದ ನಾನೇನೂ ಹೇಳಬೇಕಾಗಿಲ್ಲ. ಆದರೆ ಇಷ್ಟೇ ಸಾಕೆ ಎಂಬ ಪ್ರಶ್ನೆ ಏಳುತ್ತದೆ. ಸರ್ಕಾರದ ಪ್ರಯತ್ನಗಳಲ್ಲದೆ ಇನ್ನು ಬೇರೆ ಯಾವ ಯಾವ ಪ್ರಯತ್ನಗಳಿವೆ, ಆಹಾರ ಪದಾರ್ಥಗಳನ್ನು ಹೆಚ್ಚು ಪ್ರಮಾಣದಲ್ಲಿ ಉತ್ಪತ್ತಿ ಮಾಡುವುದಕ್ಕೆ ಸಾಧ್ಯವಾದ ಯಾವ ಯಾವ ಪ್ರಯತ್ನಗಳಿವೆ, ಎಂಬುದನ್ನು ಯೋಚನೆ ಮಾಡಿ, ಅಂತಹ ಎಲ್ಲಾ ಕಾರ್ಯಕ್ರಮಗಳನ್ನೂ ಕೈಕೊಳ್ಳಬೇಕಾದುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವಾಗಿದೆ. ಇಂತಹ ಪ್ರಯತ್ನಗಳಲ್ಲಿ ನಾನು ಇಲ್ಲಿ ಸೂಚಿಸಿರುವುದು ಒಂದಾಗಿದೆ ಎಂಬುದನ್ನು ಈ ಸಭೆಯ ಮುಂದೆ ತಿಳಿಸಲಿಚ್ಛಿಸುತ್ತೇನೆ.

ಜನಗಳು ತಮ್ಮ ತಮ್ಮ ಜಮೀನುಗಳ ಹತ್ತಿರ ಸಣ್ಣ ಸಣ್ಣ ಕೆರೆಗಳನ್ನು ಕಟ್ಟಿಕೊಳ್ಳುವುದಕ್ಕೆ ಸಾಧ್ಯವಿದ್ದರೆ ಮತ್ತು ಹಾಗೆ ಕಟ್ಟಿಕೊಳ್ಳಲು ಅವರಿಗೆ ಅಭಿಲಾಷೆಯಿದ್ದರೆ, ಹಾಗೆ ಕಟ್ಟಿಕೊಳ್ಳಲು ಮುಂದೆ ಬರುವುದಾದರೆ, ಸರ್ಕಾರದವರು ಅಂಥವರಿಗೆ ಕೆಲವು ಸಹಾಯ ಸೌಕರ್ಯಗಳನ್ನು ಕೊಡುವುದಕ್ಕೆ ಒಂದು ಅವಕಾಶವಿರಬೇಕು. ಈ ರೀತಿ ಒಂದು ಅವಕಾಶವನ್ನು ಸರ್ಕಾರದವರು ಕಲ್ಪಿಸಿಕೊಡಬೇಕೆಂಬುದು ಈ ನಿರ್ಣಯದ ಉದ್ದೇಶವಾಗಿದೆ. ಪ್ರಕೃತ ಸ್ಥಿತಿಯಲ್ಲಿ ಇಂತಹ ಒಂದು ಆವಶ್ಯಕತೆಯೇನಿದೆ ಎಂಬ ಬಗ್ಗೆ ಕೆಲವು ಅಂಶಗಳನ್ನು ಈ ಸಭೆಯ ಗಮನಕ್ಕೆ ತರಬೇಕೆಂದು ಬಯಸುತ್ತೇನೆ. ದೇಶದಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಸರಾಸರಿ ಮೂರೂವರೆ ಎಕರೆಗಳಷ್ಟು ಜಮೀನಾದರೂ ಇರಬೇಕಾದುದು ಅವಶ್ಯಕವೆಂಬುದು ಕೆಲವು ಪ್ರವೀಣರು ಹೇಳಿರತಕ್ಕ ಅಭಿಪ್ರಾಯ. ಅಂತರರಾಷ್ಟ್ರೀಯ ಮಟ್ಟ, ಅಂದರೆ international standard ನ ಪ್ರಕಾರ ಪ್ರತಿಯೊಬ್ಬ ಮನುಷ್ಯನಿಗೂ ಎರಡೂವರೆ ಎಕರೆಗೆ ಕಡಿಮೆಯಿಲ್ಲದಷ್ಟು ಜಮೀನು ಇರಬೇಕು. ಈ ದಿವಸ ಒಂದು ಪ್ರಶ್ನೆಗೆ ಸರ್ಕಾರದವರು ಕೊಟ್ಟಿರುವ ಉತ್ತರದ ಪ್ರಕಾರ ಬತ್ತ, ರಾಗಿ, ಜೋಳ ಮುಂತಾದ ಆಹಾರ ಧಾನ್ಯಗಳನ್ನು ಬೆಳೆಯತಕ್ಕ ಜಮೀನಿನ ವಿಸ್ತೀರ್ಣ ಕೇವಲ ಸುಮಾರು 33 ಲಕ್ಷ ಎಕರೆ. ನಮ್ಮ ಸಂಸ್ಥಾನದಲ್ಲಿ 80 ಲಕ್ಷ ಜನಸಂಖ್ಯೆಯಿರುವಾಗ ಕೇವಲ 33 ಲಕ್ಷ ಎಕರೆ ಜಮೀನಿನ ಬೆಳೆಯಿಂದ ಇಷ್ಟು ಜನರಿಗೆ ಆಹಾರ ಧಾನ್ಯವನ್ನೊದಗಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ಯೋಚಿಸಿ ನೋಡಬೇಕಾಗಿದೆ. ಈ ಸಮಯದಲ್ಲಿ ಮತ್ತೊಂದು ವಿಚಾರವನ್ನು ಪರ್ಯಾಲೋಚಿಸುವುದು ಅವಶ್ಯಕ. ಬೇರೆ ಹಲವಾರು ಪ್ರಾಂತಗಳಲ್ಲಿ ವ್ಯವಸಾಯವಾಗುವ ತರೀ ಜಮೀನಿನ ವಿಸ್ತೀರ್ಣವನ್ನು ನೋಡಬೇಕಾಗಿದೆ. ಬಿಹಾರಿನಲ್ಲಿರತಕ್ಕ ವ್ಯವಸಾಯ ಪ್ರದೇಶದಲ್ಲಿ ಶೇಕಡ 40 ರಷ್ಟು ತರೀ ಜಮೀನು, ಸಂಯುಕ್ತ ಪ್ರಾಂತದಲ್ಲಿ ಶೇಕಡ 40ರಷ್ಟು ತರೀ ಜಮೀನು, ಬೊಂಬಾಯಿ ಪ್ರಾಂತದಲ್ಲಿ ಶೇಕಡ 4ರಷ್ಟು ಮಾತ್ರ ತರೀ ಜಮೀನು, ಮೈಸೂರು ದೇಶದಲ್ಲಿ ಶೇಕಡ 8ರಷ್ಟು ತರಿ ಜಮೀನಿದೆ. ಹೀಗಿರುವಾಗ ಇಷ್ಟು ಜನರಿಗೆ ಆಹಾರವನ್ನೊದಗಿಸುತ್ತೇವೆಂದು ಹೇಳಿದರೆ ಅದು ಯಾರಾದರೂ ಒಪ್ಪತಕ್ಕ ಮಾತೆ ! ಆದಕಾರಣ ನಾವು

ಹೊಸಮಾರ್ಗಗಳನ್ನು ಹುಡುಕಿ, ಸರಿಯಾದ ಕಾರ್ಯಕ್ರಮಗಳನ್ನು ಕೈಕೊಳ್ಳದೇ ಹೋದರೆ ನಮ್ಮ ಆಹಾರಾಭಾವ ಹೀಗೆಯೇ ಉಳಿಯುವುದರಲ್ಲಿ ಯಾವ ಅನುಮಾನವೂ ಇಲ್ಲ. ದವಸವನ್ನು ಬೆಳೆಯಲು ಹೆಚ್ಚು ಹೆಚ್ಚು ಸೌಕರ್ಯಗಳನ್ನೂ, ಹೊಸ ಹೊಸ ಮಾರ್ಗಗಳನ್ನು ಕಲ್ಪಿಸುವುದೂ ಅತ್ಯಾವಶ್ಯಕ. ಅಲ್ಲದೆ ವ್ಯವಸಾಯ ಮಾಡಲು ಇರುವ ಜಮೀನು ಸಾಲದೆ ಅನೇಕ ಕಡೆ ಅರಣ್ಯ ಪ್ರದೇಶದಲ್ಲಿ ಜಮೀನು ವ್ಯವಸಾಯ ಮಾಡುವುದಕ್ಕೆ ಪ್ರಾರಂಭಿಸಿದ್ದಾರೆ. ಬಗರ್ ಹುಕುಂನಲ್ಲಿದ್ದ ಗೋಮಾಳಗಳನ್ನು ಕೂಡ ಉಳುವುದಕ್ಕೆ ಪ್ರಾರಂಭಿಸಿದ್ದಾರೆ. ಇಂತಹ ಪರಿಸ್ಥಿತಿ ಬಂದಿರುವಾಗ ನಾವು ಹೊಸ ಮಾರ್ಗಗಳಲ್ಲಿ ಮುಂದುವರಿದು ತರಿ ವ್ಯವಸಾಯದ ಪ್ರದೇಶವನ್ನು ಹೆಚ್ಚಿಸಲು ಪ್ರಯತ್ನ ಮಾಡದೇಯಿದ್ದರೆ ನಮ್ಮ ಅನ್ನಾಭಾವವನ್ನು ಪರಿಹಾರ ಮಾಡುವುದಕ್ಕೆ ಸಾಧ್ಯವಿಲ್ಲವೆಂಬ ವಿಚಾರವನ್ನು ಸಭೆಯ ಮುಂದೆ ಮಂಡಿಸುತ್ತಿದ್ದೇನೆ.

ಮತ್ತೊಂದಂಶವನ್ನು ಕೂಡ ಈ ಸಭೆಯ ಗಮನಕ್ಕೆ ತರಬೇಕೆಂಬುದು ನನ್ನ ಆಶಯವಾಗಿದೆ. ಜನಸಂದಣಿಯಿಲ್ಲದಿರುವ ಪ್ರದೇಶಗಳಲ್ಲಿ ನೀರಾವರಿ ಕಾಮಗಾರಿಗಳನ್ನು ಮಾಡಿಸಿದರೆ ಪ್ರಯೋಜನವಿಲ್ಲ. ಉದಾಹರಣೆಗೆ ಬೋರನ ಕಣಿವೆ ಕಟ್ಟಲು ಲಕ್ಷಾಂತರ ರೂಪಾಯಿ ಖರ್ಚು ಮಾಡಿದಾಗೂ ಕೂಡ ಅಲ್ಲಿ ಎಷ್ಟೋ ಜಮೀನು ವ್ಯವಸಾಯವಿಲ್ಲದೆ ಪಾಳುಬಿದ್ದಿದೆ. ಕೃಷ್ಣರಾಜಸಾಗರ ಜಲಾಶಯದ ಕೆಳಗೆ ಸುಮಾರು ಹತ್ತುಸಾವಿರ ಎಕರೆಯಷ್ಟು ಜಮೀನು ವ್ಯವಸಾಯ ಮಾಡುವವರೇ ದಿಕ್ಕಿಲ್ಲದೆ ಪಾಳುಬಿದ್ದಿದೆ. ಅಷ್ಟು ದೂರ ಹೋಗಬೇಕಾಗಿಲ್ಲ. ಇಲ್ಲಿಗೆ ಸಮೀಪದಲ್ಲಿರುವ ಬೈರಮಂಗಲದ ಕೆರೆ ಕೆಳಗೆ ವ್ಯವಸಾಯ ಮಾಡುವವರೇ ದಿಕ್ಕಿಲ್ಲವೆ 500–600 ಎಕರೆ ಜಮೀನು ಪಾಳುಬಿದ್ದಿದೆ. ಹೀಗೆ ಎಲ್ಲಿ ಬೇಸಾಯ ಮಾಡಲು ಜನರಿಲ್ಲವೋ ಅಲ್ಲಿ ಸೌಕರ್ಯ ಕಲ್ಪಿಸುವುದಕ್ಕೆ ಬದಲು, ರೈತನಿರುವ ಕಡೆ ಅವನ ಜಮೀನಿನ ಹತ್ತಿರ ಹಳ್ಳ ಅಥವಾ ಕೋಡಿಯ ನೀರು ಹರಿಯುತ್ತಿದ್ದರೆ, ಅಂತಹ ಸ್ಥಳದಲ್ಲಿ ಸೌಕರ್ಯವನ್ನು ಕಲ್ಪಿಸಿದರೆ ಸರ್ಕಾರಕ್ಕೆ ಹೆಚ್ಚಿನ ವೆಚ್ಚವಿರುವುದಿಲ್ಲ. ಸಂಬಂಧಪಟ್ಟ ಸರ್ಕಾರದ ಅಧಿಕಾರಿಗಳು ಹೋಗಿ ಸಲಹೆ ಕೊಟ್ಟು ಸಹಾಯಮಾಡಿದರೆ ಅದರಿಂದ ಸರ್ಕಾರಕ್ಕೆ ಹೆಚ್ಚು ಹೊರೆಯಿಲ್ಲದೆ ರೈತನಿಗೆ ಅನುಕೂಲಪಡಿಸಬಹುದಾಗಿದೆ.

ಇದರಿಂದ ಸರ್ಕಾರಕ್ಕೂ ತೊಂದರೆ ಇಲ್ಲದೆ, ರೈತನಿಗೂ ಕೂಡ ಅನುಕೂಲವಾಗುವಂತಹ ರೀತಿಯಲ್ಲಿ ನಾವು ಏರ್ಪಡಿಸಬಹುದಾಗಿದೆ. ನಮ್ಮ ದೇಶದಲ್ಲಿ ಸುಮಾರು 21,000 ಮೈನರ್ ಕೆರೆಗಳಿವೆ. ಆದರೆ ಅವುಗಳಲ್ಲಿರುವ ನೀರು ಎಷ್ಟು ಎಕರೆಗಳಿಗೆ ಬರುತ್ತದೆ ಎಂಬುದನ್ನು ನೋಡುವುದಾದರೆ ನಿಜವಾಗಿಯೂ ಯಾರೇ ಆಗಲಿ ಬಹಳ ವಿಷಾದಪಡಬೇಕಾದ ವಿಷಯವಾಗಿದೆ. ಈಗಿರತಕ್ಕ 21,000 ಕೆರೆಗಳಲ್ಲಿ ಕಾಲು ಭಾಗದ ಕೆರೆಗಳೂ ಕೂಡ ದುರಸ್ತಿನಲ್ಲಿಲ್ಲ. ಎಂದರೆ ಮುಕ್ಕಾಲು ಭಾಗ ಕೆರೆಗಳು ನಾದುರಸ್ತಿನಲ್ಲಿವೆ. ಇದರಿಂದ ಜನಗಳಿಗೆ ಉತ್ಸಾಹವಿಲ್ಲ. ಯಾವ ರೈತನಿಗೆ ಇದು ತನ್ನ ಕೆರೆ, ಸ್ವಂತದ್ದು ಎಂಬ ಭಾವನೆ ಇರುತ್ತದೆಯೋ ಅವನು ಅದನ್ನು ಮುತುವರ್ಜಿಯಿಂದ ನೋಡಿಕೊಳ್ಳುತ್ತಾನೆ. ಸರ್ಕಾರದವರು ಎಲ್ಲವನ್ನೂ ಮಾಡಿಸಿಕೊಡುತ್ತೇವೆ ಎಂದು ಹೇಳಿದರೂ ಕೂಡ ರೈತನ ಗಮನ ಅಂಥ ವಿಚಾರಕ್ಕೆ ಹೆಚ್ಚು ಬೀಳುವುದಿಲ್ಲ. ಕೆರೆಯಲ್ಲಿ ಹೂಳು ಬೀಳುವುದನ್ನು ತಪ್ಪಿಸಬೇಕು. ಅದನ್ನು ತಪ್ಪಿಸುವುದಕ್ಕೆ ಹೂಳು ಬರತಕ್ಕಕಡೆ ಕೆರೆಗೆ ಅಡ್ಡಕಟ್ಟುವುದು ಅಥವಾ ಹೊಂಗೆಗಿಡ ಹಾಕುವುದು—ಇದನ್ನೆಲ್ಲಾ ಮಾಡಬೇಕು. ಇದೆಲ್ಲಾ ಇಲ್ಲದೆ ಎಷ್ಟುದಿನ ಬರುತ್ತದೆಯೋ ಅಷ್ಟುದಿನ ಮಾಡೋಣ ಎಂಬುದಾಗಿ ರೈತ ಪ್ರಯತ್ನಪಡುತ್ತಾನೆ. ಇದೇ ಕೆಲಸವನ್ನು ರೈತನಿಗೇ ಬಿಟ್ಟರೆ ಬಹಳ ಅಚ್ಚುಕಟ್ಟಾಗಿ ಮಾಡಿಕೊಳ್ಳುತ್ತಾನೆ. ಅಂಥ ಸೌಕರ್ಯಗಳನ್ನು ಕಲ್ಪಿಸಿಕೊಳ್ಳುವುದಕ್ಕೆ ನಿಜವಾಗಿಯೂ ಆತನಿಗೆ ತಕ್ಕಷ್ಟು ಪ್ರೋತ್ಸಾಹವಿಲ್ಲ. ಜನಗಳು ಸರ್ಕಾರದವರಿಗೆ ಅರ್ಜಿ ಹಾಕಿ ಸುಸ್ತಾಗುತ್ತಾ ಇದ್ದಾರೆ. ರೈತರು ಎಷ್ಟೇ ಸಹಾಯ ಕೇಳಿದರೂ ಕೂಡ ಕೇವಲ ಒಂದೆರಡು ಎಕರೆಗಳಿಗೆ ಸಹಾಯವಾಗುವಂಥ ಅನುಕೂಲಗಳನ್ನೂ ಮಾಡುವುದಿಲ್ಲ. ಯಾವುದಾದರೂ ಅರ್ಜಿ ಬಂದರೆ ತಕ್ಷಣ ಅದಕ್ಕೆ ಸಂಬಂಧಪಟ್ಟವರು ಹೋಗಿ ಸೂಕ್ತ ಸಲಹೆ ಕೊಟ್ಟರೆ ಆ ಕೆಲಸವನ್ನು ಅವರೇ ಚೆನ್ನಾಗಿ ಮಾಡಿಕೊಳ್ಳುತ್ತಾರೆ. ಆ ದೃಷ್ಟಿಯಿಂದ ನಾನು ಈ ನಿರ್ಣಯವನ್ನು ಸಭೆಯ ಮುಂದೆ ಮಂಡಿಸಿದ್ದೇನೆ. ಇದಕ್ಕೆ ಸಭೆಯವರು ತಮ್ಮ ಒಪ್ಪಿಗೆಯನ್ನು ಕೊಡುತ್ತಾರೆಂದು ನಂಬಿದ್ದೇನೆ.

Mr. SPEAKER.—Resolution moved:

"This Assembly is of the opinion that the Government of Mysore should take effective steps by giving free technical guidance to private persons in the construction of small dams, anekats, pick-up weirs, etc., of their own so that the much-talked-of "Grow More Food" scheme may become more fruitful."

ನಿರ್ಣಯಗಳ ಮೇಲೆ ಚರ್ಚೆ ಮಾಡಬೇಕಾದರೆ, ಕಾಲ ನಿಯಮವನ್ನು ಗೊತ್ತು ಮಾಡಿದರೆ ಉತ್ತಮವೆಂದು ತೋರುತ್ತದೆ. ನಿರ್ಣಯದ ಸೂಚಕರಿಗೆ 15 ನಿಮಿಷ, ಉಳಿದವರಿಗೆ 10 ನಿಮಿಷ ಆದರೆ ಸಾಕೆಂದು ಕಾಣುತ್ತದೆ. ಈ ಸಲಹೆಗೆ ತಾವುಗಳು ಒಪ್ಪುವುದಾದರೆ ಆ ರೀತಿ ಮಾಡಬಹುದು.

The House agreed to the suggestion.

Mr. SPEAKER.—Sri T. Madiah Gowda will move his amendment.

Sri T. MADIAH GOWDA (Bangalore District—General).—Sir, I beg to move:

"That in the Resolution the words 'much talked of' be omitted."

'Much talked of' ಎಂಬ ಪದಗಳನ್ನು ಬಿಟ್ಟುಬಿಡುವುದು ಸರಿಯಾದುದು ಎಂಬುದಾಗಿ ನನಗೆ ತೋರಿಬಂದು ಈ ತಿದ್ದುಪಡಿಯನ್ನು ತಂದಿದ್ದೇನೆ.

ಶ್ರೀ ಎಂ. ಎನ್. ಜೋಯಿಸರು (ಮೈಸೂರು ಜಿಲ್ಲೆ).—'Talked much of' ಎಂಬುದಾಗಿ ಅವರ ಅಭಿಪ್ರಾಯವೆಂದು ಕಾಣುತ್ತದೆ.

*ಶ್ರೀ ಟಿ. ಮಾದಯ್ಯಗೌಡರು.—ಹೇಗಾದರೂ ಇರಲಿ. ಈ ನಿರ್ಣಯದ ಒಂದು ಉದ್ದೇಶವೇನಿದೆಯೋ ಅದು ಸಾರ್ಥಕವಾಗಬೇಕಾದರೆ ಈ ಮಾತಿನಿಂದ ನಿಜವಾಗಿಯೂ ಆಗಲಾರದೆಂದು ನನಗೆ ತೋರಿತು. ಅಲ್ಲದೆ ಹೆಚ್ಚು ಆಹಾರಧಾನ್ಯ ಬೆಳೆಸಬೇಕೆಂಬ ಒಂದು ಯೋಜನೆ ಸರ್ಕಾರದವರ ಮುಂದೆ ಏನಿದೆಯೋ ಅದು ನಿಜವಾಗಿಯೂ ಗುರುತರವಾದದ್ದು. ಅದನ್ನು ನೆರವೇರಿಸುವುದಕ್ಕೆ ಸರ್ಕಾರದವರು ಎಲ್ಲಾ ಪ್ರಯತ್ನಗಳನ್ನೂ ಎಷ್ಟು ಸಾಧ್ಯವೋ ಅಷ್ಟನ್ನೂ ಕೈಕೊಂಡಿದ್ದಾರೆ. ಆದ್ದರಿಂದ "much talked of" ಎಂದು ಹೇಳಿ ಕೇವಲ "ಮಾತಿನಲ್ಲಿ ಪರಿಣಾಮವಾಗತಕ್ಕ ಯೋಜನೆ" ಎಂದು ಹೇಳುವುದು ಸರಿಯಲ್ಲವೆಂದು ನನಗೆ ಅನ್ನಿಸುತ್ತದೆ. ನೆನ್ನೆ ಮಾನ್ಯ ಹಣಕಾಸಿನ ಸಚಿವರು ಈ ಸಭೆಯ ಮುಂದಿಟ್ಟಿರತಕ್ಕ ಭಾಷಣದಲ್ಲಿ ಹೆಚ್ಚು ಆಹಾರ ಬೆಳೆ ಬೆಳೆಯುವ ವಿಚಾರವನ್ನು ಬಹಳ ವಿಶದವಾಗಿ ಪ್ರಸ್ತಾಪ ಮಾಡಿದ್ದಾರೆ.

Sri K. PUTTASWAMY (Mandya District—General).—Sir, I rise to a point of order. According to rule 43(*c*):

"it shall not contain.........ironical expressions . ..." The phrase "much talked of" amounts to an ironical expression. As such the resolution itself will have to be ruled as being out of order.

***Mushir-ul-Mulk J. MAHOMED IMAM** (Chitaldrug *cum* Tumkur—Muslim).—I do not think the Hon'ble Member Sri Puttaswamy is right in calling it as ironical; on the other hand I call it golden because it is a fact that at present the "Grow More Food" campaign is being talked of everywhere. The Hon'ble Minister himself talks much more than anybody else.

Mr. SPEAKER.—Does the Hon'ble Member say that there is no point of order?

Janab J. MAHOMED IMAM.—Yes, there is no point of order. It is not an ironical statement; it is a very good statement. Hon'ble Member Sri Kariappa has given the exact state of affairs.

Mr. SPEAKER.—Hon'ble Member Sri Madiah Gowda will continue.

ಶ್ರೀ ಟಿ. ಮಾದಯ್ಯಗೌಡರು.—ಸ್ವಾಮಿ, ಹೆಚ್ಚು ಬೆಳೆ ಬೆಳೆಯತಕ್ಕ ವಿಚಾರದಲ್ಲಿ ಈಗಿನ ಸರ್ಕಾರದವರು ಕೈಕೊಂಡಿರತಕ್ಕಷ್ಟು ಯೋಜನೆಗಳನ್ನು ಬಹುಶಃ ಇನ್ನಾವ ಪ್ರಾಂತೀಯ ಸರ್ಕಾರಗಳವರೂ ಕೈಕೊಂಡಿರಲಾರರೆಂದು ನನಗೆ ಅನ್ನಿಸುತ್ತದೆ. ಆದರೆ ಇನ್ನೂ ಹೆಚ್ಚುಹೆಚ್ಚು ಫಲದಾಯಕವಾಗುವ ಯೋಜನೆಗಳು ಇರಬಹುದು ಎಂದು ಅನೇಕರು ಅಂದುಕೊಂಡಿದ್ದೇವೆ. ಅಂಥ ಯೋಜನೆಗಳನ್ನು ಮಾಡಬೇಕಾದ್ದು ಅಗತ್ಯ ಮತ್ತು ಅಂಥ ಯೋಜನೆಗಳನ್ನು ಸರ್ಕಾರದವರು ಕೈಕೊಳ್ಳಬೇಕಾದುದೂ ಅಗತ್ಯ ಎಂದು ನಮಗೆ ಅನ್ನಿಸುತ್ತದೆ. ಆದರೆ ರೈತನಿಗೆ ಇರಬೇಕಾದ ಒಂದು ಧೋರಣೆ, ಒಂದು ಮನೋಧಾರ್ಢ್ಯ ಬರುವವರೆಗೂ—ಎಂದರೆ, ಈಗಿರುವುದು ಬದಲಾವಣೆ ಆಗುವವರೆಗೂ—ಆ ವಿಚಾರದಲ್ಲಿ ಹೆಚ್ಚು ಪ್ರತಿಫಲ ಆಗಲಾರದು ಎಂದು ನಾವು ಅಂದುಕೊಂಡಿದ್ದೇವೆ. ಹಾಗೆಂದ ಮಾತ್ರಕ್ಕೇ ಸರಿಯಾದ ಯೋಜನೆಗಳಿಲ್ಲ ಅಥವಾ ಇರತಕ್ಕ ಯೋಜನೆಗಳು ಕೇವಲ ಮಾತಿನಲ್ಲೇ ಪರಿಣಾಮಗೊಳ್ಳುತ್ತವೆ ಎಂದು ಅಭಿಪ್ರಾಯಪಡುವುದಾದರೆ, ನಾನು ಅದನ್ನು ಒಪ್ಪಲಾರೆ. ಆದ್ದರಿಂದ ಈ ಮಾತುಗಳು ಅನಾವಶ್ಯಕ, ಇವುಗಳನ್ನು ಈ ನಿರ್ಣಯದಿಂದ ತೊಡೆದುಹಾಕಬೇಕಾದ್ದು ಅಗತ್ಯವೆಂದು ನನಗೆ ಅನ್ನಿಸುತ್ತದೆ. ಇಷ್ಟು ವಿಚಾರ ಹೇಳಿ, ಈ ನನ್ನ ತಿದ್ದುಪಡಿಯನ್ನು ಸೂಚಿಸಿ, ತಾವು ಅನುಮತಿ ಕೊಡುವುದಾದರೆ ಈ ಸಭೆಯ ಮುಂದಿರತಕ್ಕ ಈ ನಿರ್ಣಯದ ವಿಚಾರವಾಗಿಯೂ ಕೂಡ ಒಂದೆರಡು ಮಾತುಗಳನ್ನು ಹೇಳಬೇಕೆಂದು ಇಚ್ಛಿಸುತ್ತೇನೆ.

ಈ ನಿರ್ಣಯದ ಸೂಚಕರು ಏನು ಅಭಿಪ್ರಾಯವನ್ನು ತಮ್ಮ ನಿರ್ಣಯದಲ್ಲಿಯೂ ಮತ್ತು ಭಾಷಣದಲ್ಲಿಯೂ ವ್ಯಕ್ತಪಡಿಸಿದ್ದಾರೆಂದರೆ, ಯಾರಾದರೂ ಖಾಸಗೀ ಜನರು ತಮ್ಮ ಜಮೀನುಗಳಲ್ಲಿ ಯಾವುದಾದರೂ ಅಣೆಕಟ್ಟನ್ನು ಕಟ್ಟಿ ತನ್ಮೂಲಕ ನೀರಿನ ಸೌಕರ್ಯವನ್ನು ಜಾಸ್ತಿ ಮಾಡಿಕೊಂಡು ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶ ಪಡೆಯುವ ಇರಾದೆಯುಳ್ಳವರಾಗಿದ್ದರೆ, ಅಂಥವರಿಗೆ ಸರ್ಕಾರದವರು ಯಾವ ರುಸುಮತ್ತೂ ಇಲ್ಲದೆ ತಮ್ಮಲ್ಲಿರುವಂಥ ಪರಿಣತರ ಅಭಿಪ್ರಾಯವನ್ನೂ ಮತ್ತು ಸಲಹೆಗಳನ್ನೂ ನೀಡಲಿ ಎಂದು. ಸರ್ಕಾರದವರಾದರೂ ಇದನ್ನು ಒಪ್ಪಿಕೊಳ್ಳುವುದಕ್ಕೆ ಯಾವ ಅಭ್ಯಂತರವೂ ಇದ್ದಂತೆ ಕಾಣುತ್ತಿಲ್ಲ. ಅದಕ್ಕೆ ಕಾರಣವಿಷ್ಟೆ: ದೇಶದ ಎಲ್ಲಾ ರೈತರುಗಳ ಹಿತಚಿಂತನೆಯೂ ಸರ್ಕಾರದವರಿಗೆ ಸೇರಿರುತ್ತೆ. ಇದು ಅವರ ಪ್ರಥಮ ಕರ್ತವ್ಯ. ಆದುದರಿಂದ ಸರ್ಕಾರದವರು ತಮ್ಮ ಆಧೀನದಲ್ಲಿರುವ ಪಾರಂಗತ ಅಧಿಕಾರಿಗಳ ಸಲಹೆಯನ್ನು ರೈತನಿಗೆ ಒದಗಿಸಿ, ಆತನು ತನ್ನ ಜಮೀನುಗಳಲ್ಲಿ ಹೆಚ್ಚಿನ ಫಾಯಿದೆ ಹೊಂದುವಂತೆ ಅನುಕೂಲಗಳನ್ನು ಕಲ್ಪಿಸಿಕೊಡುವುದು ಸಾಧುವಾದುದೇ ಹೊರತು, ಹಾಗೆ ಮಾಡದೆ, ಅವರ ಅಹವಾಲುಗಳನ್ನು ತಳ್ಳಿಹಾಕಿ, "ನಾವು ನಿಮಗೆ ಯಾವ ಸಲಹೆಗಳನ್ನೂ ಕೊಡುವುದಕ್ಕಾಗುವುದಿಲ್ಲ" ಎಂಬ ಮನೋಭಾವವುಳ್ಳ ಅಧಿಕಾರಿಗಳ್ಯಾರಾದರೂ ಇದ್ದ ಪಕ್ಷದಲ್ಲಿ, ಸರ್ಕಾರದವರು ಅಂಥಾ ಮನೋಭಾವವುಳ್ಳವರಿಗೆ ಅವರು ಹೊಂದಿರುವ ಅಭಿಪ್ರಾಯ ತಪ್ಪೆಂದು ತಿಳಿಸಿ, ಅದನ್ನು ಸರಿಪಡಿಸತಕ್ಕದ್ದೂ ಕೂಡ ಅವರ ಪವಿತ್ರ ಕರ್ತವ್ಯವಾಗಿದೆ. ಸರ್ಕಾರಿ ಅಧಿಕಾರಿಗಳ ಮನೋಭಾವವಾದರೂ ಹೇಗಿರಬೇಕೆಂದರೆ—"ರೈತನಿಗೆ ನಾನೊಂದು ಅನುಕೂಲವನ್ನು ಹೇಗೆ ಮಾಡಬಲ್ಲೆ; ಆತನಿಗೆ ನನ್ನಿಂದ ಯಾವ ಸಹಾಯ ಒದಗೀತು; ನಾನು ಅಧಿಕಾರದಲ್ಲಿದ್ದು ರೈತನಿಗೆ ಪ್ರಯೋಜನ ಹೇಗೆ ಕಲ್ಪಿಸುವುದು" ಎಂಬ ಭಾವನೆಗಳನ್ನೊಳಗೊಂಡಂಥ ಅಧಿಕಾರಿಗಳು ಇರುವುದು ಉತ್ತಮವಾದುದು. ಹೀಗೆ ಉಪಕಾರ ಮಾಡತಕ್ಕದ್ದು ನ್ಯಾಯ ಮತ್ತು ಧರ್ಮ. ಇದು ಅವರ ಮುಖ್ಯ ಕರ್ತವ್ಯಗಳಲ್ಲಿ ಒಂದಾಗಿರುತ್ತೆ. ಈ ಸಂದರ್ಭದಲ್ಲಿ ನನಗಾದರೂ ಅನ್ನಿಸುತ್ತದೆ, ಅಂಥಾ ಮನೋಭಿಪ್ರಾಯವುಳ್ಳ ಅಧಿಕಾರಿಗಳು ಯಾರಾದರೂ ಇದ್ದರೆ, ಸರ್ಕಾರದವರ ಗಮನಕ್ಕೆ ಅದನ್ನು ತಂದು, ಸರಿಪಡಿಸಲು ಇದರಿಂದ ಒಂದು ಅವಕಾಶ ಕಲ್ಪಿಸಿದಂತಾಗುತ್ತದೆ. ಸರ್ಕಾರದವರೂ ಸಹ ಇದನ್ನು ಅನುಮೋದಿಸುತ್ತಾರೆಂದು ನಾನು ನಂಬಿದ್ದೇನೆ.

ಸಾಮಾನ್ಯವಾಗಿ ಒಂದು ಅಣೆಕಟ್ಟನ್ನು ಹಾಕತಕ್ಕ ವಿಚಾರದಲ್ಲಿ ಸರ್ಕಾರದವರು ರೈತನಿಗೆ ಸಹಾಯ ನೀಡಬೇಕಾದುದು ಅತ್ಯಾವಶ್ಯಕ. ರೈತನೇ ಮುಂದೆ ಬಂದು, "ನಾನು ನನ್ನ ಸ್ವಂತ ದುಡ್ಡಿನಿಂದ ಹೀಗೆ ಒಂದು ಏರ್ಪಾಡನ್ನು ಮಾಡಿಕೊಳ್ಳಬೇಕೆಂದಿದ್ದೇನೆ, ಹಾಗೆ ಮಾಡುವುದರಿಂದ ಸರ್ಕಾರದವರಿಗೆ, ಇದರಿಂದ ಏನಾದರೂ ತೊಂದರೆ ಇದೆಯೇ, ಅನಾನುಕೂಲವಾಗುತ್ತದೆಯೇ, ಹಾಗೆ ಆ ನೀರನ್ನು ತಡೆಗಟ್ಟುವುದರಿಂದ ಮುಂದಿನ ಕೆರೆಗೇನಾದರೂ ತೊಂದರೆಯುಂಟೇ" ಎಂಬ ಇತ್ಯಾದಿ ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತಂದಾಗ, ಅವರು ತಮ್ಮ ಪರಿಣತರ ಅಭಿಪ್ರಾಯವನ್ನು ಆದಷ್ಟು ಜಾಗ್ರತೆ ಕೊಟ್ಟು ಇರಬಹುದಾದ ತೊಂದರೆಗಳನ್ನು ನಿವಾರಣೆ ಮಾಡುವುದರಿಂದ ಕ್ಷೇತ್ರರಿಗೆ ತುಂಬಾ ಅನುಕೂಲವಾಗುತ್ತದೆ. ಹೀಗೆ ಮಾಡುವುದಕ್ಕೆ ಪ್ರತಿಯಾಗಿ, ಆತನ ಅಹವಾಲನ್ನೂ ತಿರಸ್ಕರಿಸಿ, ಆತನಿಗೆ ಯಾವ ತಿಳಿವಳಿಕೆಯನ್ನೂ ಕೊಡದೆ, ಆತನು

ಮುಂದುವರಿದು ಮಾಡುವ ಕೆಲಸಕ್ಕಾಗಿ ಆತನಿಗೆ ಶಿಕ್ಷೆ, ಜುಲ್ಮಾನೆ ವಗೈರೆಗಳನ್ನು ಹಾಕತಕ್ಕದ್ದು ತೀರಾ ಅನ್ಯಾಯವಾದುದು. ಇಂಥಾದ್ದಕ್ಕೆ ಸರ್ಕಾರದವರು ಖಂಡಿತ ದಾರಿ ಕೊಡಬಾರದು. ಈ ಅಂಶವನ್ನು ಸರ್ಕಾರದವರು ಮುಖ್ಯವಾಗಿ ಪರಿಗಣಿಸಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಈ ಎಲ್ಲಾ ಕಾರಣಗಳಿಂದಲೂ ಈ ನಿರ್ಣಯ ಸಾಧು ವಾದುದಾಗಿದೆ. ಆದುದರಿಂದ ಸರ್ಕಾರದವರು ಇದನ್ನು ಒಪ್ಪಿಕೊಳ್ಳಬೇಕೆಂದು ತಿಳಿಸಿ ನಾನು ಸಂಪೂರ್ಣವಾಗಿ ಅದನ್ನು ಅನುಮೋದಿಸುತ್ತೇನೆ.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕ ಮಗಳೂರು ಜಿಲ್ಲೆ).—ಈ ಮಾನ್ಯ ಸದಸ್ಯರು ತಿದ್ದು ಪಡಿಯ ಮೇಲೆ ಮಾತನಾಡಿದರೋ ಅಥವಾ ಮೂಲ ನಿರ್ಣಯದ ಮೇಲೆ ಮಾತನಾಡಿದರೋ ಅದು ತಿಳಿಯ ಲಿಲ್ಲ!

Mr. SPEAKER.—Amendment moved :

"That in the Resolution the words 'much talked of' be omitted."

ಈಗ ಶ್ರೀ ಕೆ. ಸುಬ್ಬರಾಯರು ಮಾತನಾಡಬಹುದು. ಅವರು ಮೂಲ ನಿರ್ಣಯ ಮತ್ತು ತಿದ್ದುಪಡಿ—ಈ ಎರಡರ ಮೇಲೂ ತಮ್ಮ ಅಭಿಪ್ರಾಯವನ್ನು ವ್ಯಕ್ತ ಪಡಿಸಬಹುದು.

ಶ್ರೀ ಕೆ. ಸುಬ್ಬರಾಯರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಈ ನಿರ್ಣಯದಲ್ಲಿ ಸೂಚಕರು "much talked of" ಎಂಬ ಪದವನ್ನು ಉಪಯೋಗಿಸಿರು ವುದು ಕೊಂಚ ವ್ಯಂಗ್ಯಾರ್ಥವನ್ನು ಉಂಟುಮಾಡು ವಂತೆ ಕಾಣುತ್ತಿದೆ. ಈ ನಿರ್ಣಯವನ್ನು ಕಳುಹಿಸಿರತಕ್ಕ ವರೇ, ಸರ್ಕಾರದವರು ಹೆಚ್ಚು ಆಹಾರ ಬೆಳೆಯಬೇಕೆಂಬ ಉತ್ತೇಜನ ಕೊಡಬೇಕೆಂದು ನಾನಾ ಕೆಲಸಕಾರ್ಯಗ ಳನ್ನು ಕೈಗೊಂಡಿರುತ್ತಾರೆಂದು ಅವರ ಭಾಷಣದಲ್ಲೇ ವ್ಯಕ್ತಪಡಿಸಿದ್ದಾರೆ. ಹೀಗೆ ಅವರ ವಾದ ಸರಣಿಯಿಂ ದಲೇ ಇದು "much-talked-of" ಅಲ್ಲವೆಂಬುದು ಸಂಪೂರ್ಣವಾಗಿ ವ್ಯಕ್ತಪಡುತ್ತಿದೆ. "Much talked of" ಎಂದರೆ ಯಾರ ಬಾಯಿನಲ್ಲಿ ನೋಡಿ ದರೂ ಇದೇ ಮಾತು. ವಿದ್ಯಾವಂತರಾಗಲಿ, ಅವಿ ದ್ಯಾವಂತರಾಗಲಿ, ಅನುಭವಶಾಲಿಗಳಾಗಲೀ, ಅನನು ಭವಶಾಲಿಗಳೇ ಆಗಲಿ, ಎಲ್ಲರ ಬಾಯಿನಲ್ಲಿ "ಹೆಚ್ಚು ಆಹಾರ ಬೆಳೆಯಬೇಕು" ಎಂಬ ಕೂಗು ಕೇಳಿಬರು ತ್ತಿದೆ. ಇದರ ಅಭಿಪ್ರಾಯ ಒಟ್ಟಿನಲ್ಲಿ ಇಷ್ಟೇ! ಹೆಚ್ಚು ಆಹಾರ ಬೆಳೆಯಲೇಬೇಕು ಎಂಬುದು ಆ ಪ್ರಶ್ನೆ ಯಲ್ಲಿ ಅಡಕವಾಗಿದೆ. ಅದಕ್ಕೆ ಸರ್ಕಾರದವರು ಎಲ್ಲಾ ಪ್ರಯತ್ನಗಳನ್ನೂ ಪಡುತ್ತಿದ್ದಾರೆ. ಅದರಲ್ಲಿ ಯಾವ ವ್ಯಂಗ್ಯಾರ್ಥಕ್ಕೂ ಅವಕಾಶವಿಲ್ಲ. ಆದಕಾರಣ ಆ ಪದ ಗಳನ್ನು ಇದರಲ್ಲಿ ಸೇರಿಸದಿರಲು ಸಾಕಷ್ಟು ಸಮರ್ಥನೆ ಇದೆಯೆಂದು ಹೇಳುವುದಕ್ಕಾಗುವುದಿಲ್ಲ. ಇನ್ನು ಮೂಲ ನಿರ್ಣಯದ ಪರವಾಗಿ ಅಷ್ಟೇನೂ ಹೆಚ್ಚಾಗಿ ಹೇಳಬೇ ಕಾದ ಅವಶ್ಯಕತೆಯಿಲ್ಲವೆಂದು ನನಗೆ ಕಾಣುತ್ತದೆ. ಸಾಧಾರಣವಾಗಿ ಸರ್ಕಾರದವರು ಇಲ್ಲಿಯವರೆಗೂ ಒಂದು ತತ್ವವನ್ನು ಅನುಸರಿಸಿಕೊಂಡು ಬಂದಿದ್ದಾರೆ. ಅದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲವೆಂದು ನಾನು ಭಾವಿಸುತ್ತೇನೆ. ಆದರೆ ಅದರ ಜೊತೆಗೆ ಇದನ್ನೂ ನಡೆಸಿಕೊಂಡು ಹೋಗುವುದರಲ್ಲಿ ಯಾವ ಬಾಧಕವೂ ಅವರಿಗೆ ಇರಲಾರದು.

ಸ್ವಲ್ಪ ನಾನು ಒರಟು ಮಾತುಗಳಲ್ಲಿ ಹೇಳಬೇಕೆಂ ದರೆ, ಅನೇಕ ಸಂದರ್ಭಗಳಲ್ಲಿ ಕೆಲವು ದೊಡ್ಡದೊಡ್ಡ ಹಳ್ಳಗಳಲ್ಲಿ ವ್ಯರ್ಥವಾಗಿ ನೀರು ಬಿದ್ದು ಹರಿದುಹೋಗು ತ್ತಿರುವುದನ್ನು ನೋಡಿ ನನಗೆ ಎಷ್ಟೋ ಸಂದರ್ಭಗಳಲ್ಲಿ ಹೊಟ್ಟೆ ಉರಿದುಹೋಗಿದೆ. ಅದಕ್ಕೆ ಕಾರಣವಾದರೂ ಇಷ್ಟೆ: ನೀರು ಸುಮ್ಮನೆ ಯಾರಿಗೂ ಪ್ರಯೋಜನಕ್ಕೆ ಸಿಕ್ಕದಂತೆ ದಂಡವಾಗಿ ಸಮುದ್ರಕ್ಕೆ ಹೋಗಿ ಸೇರುತ್ತ ದಲ್ಲಾ ಎಂಬುದು. ಕೇವಲ ಸಣ್ಣ ಕಟ್ಟೆಗಳನ್ನೇ ಅಲ್ಲಲ್ಲೆ ಹಾಕಿದ್ದರೆ ಅದರಿಂದ ಖುಷ್ಕಿ ಜಮೀನಿಗಾಗಲೀ, ತರಿ ಜಮೀನುಗಳಿಗಾಗಲೀ, ಇಲ್ಲವೇ ಭಾಗಾಯ್ತು ಇತ್ಯಾದಿ ಜಮೀನುಗಳಿಗೆ ಆ ನೀರಿನಿಂದ ಎಷ್ಟೋ ಉಪಯುಕ್ತತೆ ಗಳನ್ನು ಪಡೆದುಕೊಳ್ಳಬಹುದಾಗಿತ್ತು. ಆದರೆ ಇಂಥಾ ಸಂದರ್ಭಗಳಲ್ಲಿ ಸರ್ಕಾರದವರು ಜನರಿಗೆ ಉಪಕಾರ ಮಾಡುವುದನ್ನು ನಿಲ್ಲಿಸುವುದು ಸಾಧ್ಯವಿಲ್ಲ. ನೀರು ತೆರಿಗೆ ಇತ್ಯಾದಿ ಸುಂಕಗಳನ್ನು ಪಡೆಯುತ್ತಿರುವ ಸರ್ಕಾ ರದವರು ರೈತರ ಅನುಕೂಲಕ್ಕಾಗಿ ಇಂಥವುಗಳನ್ನು ಮಾಡಲೇಬೇಕು. ಆದರೆ ಕೆಲವು ಸಂದರ್ಭಗಳಲ್ಲಿ ಸಾಧಕಬಾಧಕಗಳೆರಡೂ ಇರಬಹುದು. ಹಾಗೆ ಹೆಚ್ಚು ನೀರು ಸರಬರಾಯಿಯಿದ್ದ ಮಾತ್ರಕ್ಕೇ ಎಲ್ಲಾ ಹಳ್ಳಗ ಳಿಗೂ ಅಥವಾ ನಾಲೆಗಳಿಗೂ ಕಟ್ಟೆ ಹಾಕಲು ಸಾಧ್ಯ ವಿಲ್ಲ. ಅದರಲ್ಲಿ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ. ಆದರೆ ಅಂಥಾ ಕ್ಲಿಷ್ಟಕರವಾದ ಸಮಸ್ಯೆಗಳು ಇಲ್ಲದಿ ರುವ ಸಂದರ್ಭಗಳೂ ಕೂಡ ನಮ್ಮಲ್ಲಿ ಅನೇಕವಿರು ತ್ತವೆ. ಕೆರೆಯ ಅಚ್ಚುಕಟ್ಟುದಾರರಿಗೆ ಯಾವ ತೊಂದ ರೆಯೂ ಆಗದಂತೆ, ಹೆಚ್ಚು ನೀರನ್ನು ಬಳಸಬಹುದು. ಇಷ್ಟೇ ಅಲ್ಲದೆ ಯಾರಿಗೂ, ಯಾವ ರೀತಿಯಲ್ಲೂ ಉಪ ಯೋಗಕ್ಕೆ ಸಿಕ್ಕದೆ ನೇರವಾಗಿ ಕೆಲವು ಹಳ್ಳಗಳ ನೀರು ಸಮುದ್ರಕ್ಕೆ ಹೋಗಿ ಸೇರುತ್ತದೆ. ಅಂಥಾ ಹಳ್ಳಗಳಿಗೆ ಅಲ್ಲಲ್ಲೇ ಸಣ್ಣಸಣ್ಣ ಕಟ್ಟೆಗಳನ್ನು ಹಾಕುವುದರಿಂದ ಎಷ್ಟು ಉಪಯೋಗವಾಗುತ್ತದೆಂಬುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾದ್ದಿಲ್ಲ. ಇದು ಸರ್ವರಿಗೂ ಮತ್ತು ಮಾನ್ಯ ಮಂತ್ರಿಗಳೆಲ್ಲರಿಗೂ ತಿಳಿದಿರುವ ಅಂಶವೇ ಆಗಿರುತ್ತೆ. ಉದಾಹರಣೆಗೆ, ಕೆಂಗೇರಿಗೆ ಹೋಗುವ ಮೊದಲು ಮೈಸೂರು ರೋಡಿನ ಪಕ್ಕದಲ್ಲಿ ರುವ ಒಂದೆರಡು ಸಣ್ಣಸಣ್ಣ ಇಂಥಾ ಕಟ್ಟೆಗಳನ್ನು ನೋಡಿದರೆ ಎಷ್ಟು ಚೆನ್ನಾಗಿ ಅದರ ಅಕ್ಕಪಕ್ಕದಲ್ಲಿರುವ ಜಮೀನುಗಳು ತಂಪಾಗಿ ಬೆಳೆಯಿಡಲು ಅನುಕೂಲವಾ ಗಿರುತ್ತೆಂಬುದನ್ನು ತಾವೆಲ್ಲರೂ ಕಣ್ಣಾರೆ ನೋಡಬಹು ದಾಗಿದೆ. ಇದರಿಂದ ಸರ್ಕಾರದವರಿಗೂ ಸಹ ಅಷ್ಟು ಹೆಚ್ಚಿನ ಹಣ ಖರ್ಚಾಗುವುದಿಲ್ಲ. ಕೇವಲ 3-4 ಎಕರೆ ಗಳಿಗೆ ಸಾಕಾಗುವಷ್ಟರಮಟ್ಟಿಗೆ ಕಟ್ಟೆಗಳನ್ನು ಹಾಕಿಸಿ ದರೆ ಸಾಕಾಗಿದೆ. ಅಂಥ ಪ್ರಕೃತಿದತ್ತವಾದ ಅನುಕೂಲ ವಾದ ಸ್ಥಳಗಳು ನಮ್ಮ ದೇಶದಲ್ಲಿ ಅನೇಕವಿರುತ್ತವೆ. ಹೀಗೆ ಮಾಡಿದರೆ ದೇಶದಲ್ಲಿ ತರಿ ಸಾಗುವಳಿ ಹೆಚ್ಚಾಗಲು ತುಂಬಾ ಅನುಕೂಲಗಳನ್ನುಂಟುಮಾಡಿ ದಂತಾಗುತ್ತದೆ. ಹಾಗೆ ಯಾವ ಕಾನೂನುಗಳ ತೊಡಕು ತೊಂದರೆಗಳಿಲ್ಲದ ಸಂದರ್ಭಗಳಲ್ಲಿ ರೈತ ರುಗಳಿಂದ ಅರ್ಜಿಗಳೇನಾದರೂ ಬಂದರೆ ಅಂಥಾ ಸಂದರ್ಭದಲ್ಲಿ ಅಧಿಕಾರಿಗಳು ನೇರವಾಗಿ ತಮ್ಮ ಅಭಿ ಪ್ರಾಯವನ್ನು ಕೊಡತಕ್ಕದ್ದು ಉಚಿತವಾದುದು. ಅಧಿ ಕಾರಿಗಳಲ್ಲಿ ಅಂಥಾ ಒಳ್ಳೆಯ ಮನೋಭಾವ ಬರು ವಂತೆ ಮಾಡತಕ್ಕದ್ದು ಉತ್ತಮ. ನನಗೆ ತಿಳಿದಿರುವ ಹಾಗೆ ಸಾವಿರಾರು ಜನರು ಅರ್ಜಿ ಹಾಕಿಕೊಂಡಿದ್ದರಲ್ಲಿ ಸರ್ಕಾರದವರು ಅನೇಕರಿಗೆ ಜಮೀನುಗಳನ್ನು ಕೊಟ್ಟಿ ದ್ದಾರೆ. ಹಾಗೆ ಜಮೀನುಗಳನ್ನು ಪಡೆದಿರುವವರ ಪೈಕಿ ಕೆಲವರು ತಾವಾಗಿಯೇ ಮುಂದೆ ತಮ್ಮ ಸ್ವಂತ ಖರ್ಚಿ ನಿಂದ ಕಟ್ಟೆಗಳನ್ನು ಕಟ್ಟಿಸಿಕೊಳ್ಳುತ್ತೇವೆಂದು ಅರ್ಜಿ ಹಾಕಿಕೊಂಡಾಗ, ಇಂಜಿನಿಯರಿಂಗ್ ಇಲಾಖೆಯವರು ಅದಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟಮೇಲೂ ಕೂಡ, ಅನೇಕ ಸಂದರ್ಭಗಳಲ್ಲಿ ರೆವೆನ್ಯೂ ಇಲಾಖೆಯವರು, ಇಂಜಿನಿಯರಿಂಗ್ ಇಲಾಖೆಯವರು ಕೊಟ್ಟಿರತಕ್ಕ ಒಪ್ಪಿ

ಗೆಯನ್ನೂ ನಿರಾಕರಿಸಿ, ಅವರಿಗೆ ದಂಡವನ್ನು ವಿಧಿಸಿರು ವಂಥಾ ನಿದರ್ಶನಗಳು ಒಂದಲ್ಲ ಹತ್ತಾರು, ನೂರಾರು, ನನ್ನ ಸ್ವಂತ ಅನುಭವದಲ್ಲಿವೆ. ಹೋಗಲಿ ಸ್ವಾಮಿ, ದಂಡಾ ತೆಗೆದುಕೊಂಡ ಮೇಲಾದರೂ ನಮಗೆ ಕಂದಾ ಯವನ್ನಾದರೂ ದಾಖಲು ಮಾಡಿಸಿಕೊಡಿ ಎಂದು ಕೇಳಿ ಕೊಂಡರೂ ಕೂಡ ತೀರ್ಮಾನವಾಗದೆ, ಅಮಾನತ್ತಿನಲ್ಲಿ ರುವ ಅನೇಕ ಕೇಸುಗಳು ನನಗೆ ಗೊತ್ತಿದೆ. ಸರ್ಕಾರದ ವರೇ ಹೀಗೆ ಮಾಡಿದರೆ ರೈತನಿಗೆ ಇದರಿಂದ ಒಂದು ಉದಾಸೀನ ಮನೋಭಾವ ಬೆಳೆಯಲು ಅವಕಾಶವನ್ನು ತಾವಾಗಿಯೇ ಕಲ್ಪಿಸಿಕೊಟ್ಟ ಹಾಗಾಗುತ್ತದೆ. ಇನ್ನೂ ತಿಳಿಸಬೇಕೆಂದರೆ ಇಂಥಾದ್ದು ಅನೇಕವಿವೆ.

ಇನ್ನೊಂದು ವಿಚಾರವೇನಂದರೆ ನಮ್ಮಲ್ಲಿರುವ ಅನೇಕ ಕೆರೆಗಳಿಗೆ ತೂಬೇ ಇಲ್ಲದೆ, ಕೆರೆಯಲ್ಲಿ ನೀರಿದ್ದರೂ ಅದನ್ನು ಉಪಯೋಗಿಸಲು ಅವಕಾಶವಿಲ್ಲದೆ ಇರುತ್ತೆ. ಅಲ್ಲಿ ವ್ಯವಸಾಯಕ್ಕೆ ಬೇಕಾದಷ್ಟು ಜಮೀನಿರುತ್ತೆ. ಈಗ ಅಲ್ಲಿ ಪರಿಸ್ಥಿತಿ ಏನಾಗಿದೆಯೆಂದರೆ, ನೂರಾರು ರೂಪಾಯಿಗಳನ್ನು ಖರ್ಚು ಮಾಡಿ, ಮಾಡಿಸಬೇಕಾದ ಕೆಲಸವಾವುದೂ ಇರುವುದಿಲ್ಲ. ಸಾಧಾರಣವಾಗಿ ಕೆಲವು ದೊಡ್ಡ ದೊಡ್ಡ ಹೆಂಚುಗಳನ್ನು ಇಟ್ಟುಕೊಂಡು, ನೀರು ಹಾಯಿಸಿಕೊಂಡು ಈ ಮೂರು ನಾಲ್ಕು ಎಕರೆ ಗಳನ್ನು ಸಾಗುಮಾಡಬಹುದಾಗಿರುತ್ತದೆ. ಇವುಗಳಿಂದ ಈಗ ಅಷ್ಟಾಗಿ ಹೆಚ್ಚು ಪ್ರಯೋಜನ ಲಭಿಸುತ್ತಿಲ್ಲ. ಇಂಥ ಉದಾಹರಣೆಗಳನ್ನು ಬೇಕಾದಷ್ಟು ಕೊಡಬಹುದು. ಇವುಗಳಿಗಾಗಿ ನಾವು ಮಾಡಬೇಕಾದ ಖರ್ಚು ಕಡಿಮೆ. ಮಾಡುವುದರಲ್ಲೂ ಅನಾನುಕೂಲ ಕಡಿಮೆ, ಪ್ರತಿಫಲ ವಾದರೋ ಜಾಸ್ತಿ ಎಂದು ಧಾರಳವಾಗಿ ಹೇಳಬ ಹುದು. ಆದ್ದರಿಂದ ಇಂಥವುಗಳಿಗೆ ಸರ್ಕಾರದವರು ಅನುಮತಿ ಕೊಡುವುದರಿಂದ ಅವರಿಗೇನೂ ಖರ್ಚಾಗು ವುದಿಲ್ಲ.

ಎರಡನೆಯದಾಗಿ, ದೊಡ್ಡ ದೊಡ್ಡ ಕಾಮಗಾರಿ ಗಳನ್ನು ಕೈಕೊಂಡು ಕೊನೆಗೆ ಅವುಗಳ ದೆಸೆಯಿಂದ ಜನಗಳು ಅನುಭವಿಸಬೇಕಾಗಿ ಬರಬಹುದಾದ ಮಲೇ ರಿಯಾ ಮುಂತಾದ ಉಪದ್ರವಗಳ ಹಾವಳಿಯಿರುವು ದಿಲ್ಲ. ಅಲ್ಲದೆ ಸಾವಿರಾರು ಎಕರೆಗಳನ್ನು ಕಟ್ಟಿಕೊಂಡು ಅನೇಕ ಜಮೀನುಗಳನ್ನುಸಾಗುವಳಿದಾರರಿಲ್ಲದೆ ಪಾಳು ಬಿಟ್ಟಿರುವುದಕ್ಕೆ ಬದಲು ಕೇವಲ ಒಂದೆರಡು ಎಕರೆಗಳ ನ್ನಿಟ್ಟುಕೊಂಡು ವ್ಯವಸಾಯಮಾಡಿದರೆ ಎಷ್ಟೋ ಚೆನ್ನಾಗಿ ಬೆಳೆಯಾಗುತ್ತದೆ. ಭೂಮಿಗೂ ಬೇಕಾದಷ್ಟು ಹಸರು ಗೊಬ್ಬರವನ್ನು ಒದಗಿಸಲು ಸಾಧ್ಯವಿರುತ್ತದೆ. ಈಗ ರೈತರೂ ಹೆಚ್ಚು ಶ್ರದ್ಧೆಯಿಂದ ಕೆಲಸಮಾಡಿ 6-8 ಪಲ್ಲ ಬೆಳೆಯುವ ಕಡೆ ಇನ್ನೂ ಇಮ್ಮಡಿಯಾಗಿ ಬೆಳೆಯು ತ್ತಾರೆ. ನೋಡುವುದಕ್ಕೇನೋ ಈ ಸೂಚನೆ ಸ್ವಲ್ಪ ವಾಕ್ಯದಾಗಿ ಕಂಡರೂ ಇದರಿಂದ ಲಭಿಸಬಹುದಾದ ಫಲ ಬಹಳ ಒಳ್ಳೆಯದಾಗಿರುತ್ತದೆ. ಆದ್ದರಿಂದ ಸರ್ಕಾರ ದವರು ದೊಡ್ಡ ಮನಸ್ಸು ಮಾಡಿ ಈಗಿನ ನೂತನ ಸನ್ನಿ ವೇಶಕ್ಕೆ ತಕ್ಕಂತೆ ಕೆಳಗಿನ ಅಧಿಕಾರಿಗಳಿಗೆ ಸೂಕ್ತ ಸಲಹೆ ಗಳನ್ನು ಕೊಟ್ಟು ಇದಕ್ಕೆ ಏರ್ಪಾಡುಮಾಡಿ ಕೊಟ್ಟರೆ, ಜನರು ನಿಜವಾಗಿಯೂ ಬಹಳ ಕೃತಜ್ಞರಾಗಿರುತ್ತಾರೆ. ಸರ್ಕಾರದವರಿಗೂ ಬಹಳ ವಿಧಗಳಲ್ಲಿ ಅನುಕೂಲವಾಗು ತ್ತದೆಂದು ಹೇಳುತ್ತೇನೆ. ಈ ವಿಷಯದಲ್ಲಿ ಶ್ರೀ ಮಾದಯ್ಯಗೌಡರ ತಿದ್ದುಪಡಿಯು ಅನಾವಶ್ಯಕವೆಂದು ಹೇಳಿ ಮೂಲ ನಿರ್ಣಯವನ್ನು ಈಗಿರತಕ್ಕ ರೀತಿಯಲ್ಲೇ ಸಂಪೂರ್ಣವಾಗಿ ಸಮರ್ಥನೆಮಾಡುತ್ತೇನೆ.

Sri. L. SIDDAPPA (Shimoga District–General).—May we have the views of the Government before further discussion takes place?

ಶ್ರೀ ಟಿ. ಮರಿಯಪ್ಪನವರು (ಒಳಾಡಿತ ಸಚಿವರು).— ಆಖೈರಾಗಿ ಉತ್ತರ ಹೇಳುವುದೇ ಉತ್ತಮ. After all the matter is not controversal.

Sri M. GOVINDA REDDY (Chitaldrug District—General).—Sir, I rise to give my full support to the resolution. The resolution is of great import to our peasantry. The advice that is sought to be provided for the peasantry may not look to be very important for people who live in areas with full irrigational facilities, because irrigation projects cannot be undertaken by private individuals. On account of the cost and on account of other difficulties it is not within the scope of many raiyats to take advantage of construction of irrigation projects. From this aspect it may be said that this resolution may not be of much use to persons living in areas where there are full irrigational facilities. But I am addressing myself to the other aspect, the aspect of the raiyats living in dry areas.

I come from a dry district where raiyats own extensive areas and particularly areas which abound in cotton soil. Almost every raiyat will have in his land a bund opposite to a brook. The brook will be running right across the land along and against it the brook. For want of technical skill, these raiyats will heap mud across the brook, and it so happens that if there is in any particular year more rainfall than the average, then the bunds will be washed out. The bund of my own land, although we did not receive very heavy rain, was washed out twice. That was on account of the technical defect. That bund was constructed without the advice of technicians. It may be realised that if a bund is washed out once, it costs to the raiyat not hundreds but thousands of rupees; if the bund running right along the brook is washed out, the damage will be very serious and heavy. All the bunds down the course of a brook will be washed out if one bund on the upper reach gives way. Such damages occur almost every year where there is slightly more rainfall than the average. If this is realised the full import of this resolution will be understood.

It is within my experience that the damage done during the past ten years to the land-owners in my district will certainly amount to not less than five lakhs of rupees, if we take into account of only the bunds washed out. If proper technical advice is given to the raiyats in the construction of the bunds it will be very helpful; it will save them money.

In furnishing advice, I desire to point out that expert advice must be given. There are Irrigation Engineers who are not experts in this matter. It is my experience and within the experience of the Hon'ble Minister for Public Works that the Sangenahalli Tank Project estimated at about six lakhs of rupees was washed away twice, causing a loss of several lakhs of rupees to the Government. Such things should not be repeated. I wish to emphasize that proper advice of experienced technicians should be given. This will prove a great help to the peasantry and therefore I extend my full support to this resolution.

Janab MOHAMED HANIEF (Bangalore—Muslim).—The resolution itself admits that "Grow More Food" scheme is really a fruitful scheme. The Government are trying their very best to make this scheme successful. (Hear, hear). I want only to stress that some more help may be rendered to private initiative or the small farmer. I think the Government will not hesitate to give the advice of the technicians available. I feel that if only people approach their respective engineers, such of those in charge of particular irrigation projects, the help will be forthcoming. When such is the case, I cannot understand why there should be these words "much talked of" in the resolution. The Hon'ble mover has said that it might admit of different interpretations. If it is so, is it not better to omit those words? I do not think that the Hon'ble mover had any intention or intended to insinuate when he included those words in the resolution. The spirit of the resolution is exactly what the Government is attempting to carry on. Then where is the necessity of using the words "much talked of?" If these words are retained in the resolution, it may mean that the "Grow More Food" scheme is a useless scheme and that it is only a 'talked-of' scheme. I think that that is not the intention of the Hon'ble mover of the resolution and I hope he will accept the amendment.

Apart from all that, here is a resolution where an attempt is being made to make the raiyat stand on his own legs in the matter of growing more food. Government must view the question from this point of view and agree to give the raiyat all the help that he seeks.

*ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಈ ಠರಾವನ್ನು ಸಂಪೂರ್ಣವಾಗಿ ಅನುಮೋದಿಸುತ್ತಾ ಒಂದು ವಿಚಾರವನ್ನು ಮಾತ್ರ ಸ್ವಲ್ಪ ವಿಶದೀಕರಿಸಬೇಕೆಂದು ಈಗ ನಿಂತಿದ್ದೇನೆ. ಆಫೀಸರುಗಳು ಟೆಕ್ನಿಕಲ್ ವಿಚಾರದಲ್ಲಿ ಉಚಿತವಾಗಿ ತಿಳಿವಳಿಕೆ ಕೊಡಬೇಕೆಂದು ಕೇಳುವ ಕಾಲದಲ್ಲಿ ಅದಕ್ಕೆ ತಕ್ಕಹಾಗೆ ಸಲಹೆ ನೀಡಬೇಕಾದ್ದು ಅತ್ಯಗತ್ಯವಾಗಿದೆ. ಇದನ್ನು ಎಷ್ಟೋ ಸಲ ಹೇಳಿದೆ. ಈ ತರಹ ಒಂದು ಅಣೆಕಟ್ಟು ಕಟ್ಟುವುದಕ್ಕೆ ಅಥವಾ ಸಣ್ಣ ಕೋಡಿಯನ್ನು ಎತ್ತರಿಸುವುದಕ್ಕೆ ತಿಳಿವಳಿಕೆ ಕೊಡಬೇಕೆಂದು ಬುದ್ಧಿವಂತರ ಬಳಿ ಹೋದರೆ ಅವರು ಒಂದಕ್ಕೆ ಹತ್ತರಷ್ಟು ಹೇಳಿ ಗಾಬರಿಪಡಿಸುತ್ತಾರೆ. ಆ ರೀತಿ ಇರುವುದನ್ನು ತಪ್ಪಿಸಿ ಸಾಧಾರಣವಾಗಿ ಬೇಕಾದ ಕೆಲಸವೂ ಆಗಬೇಕು, ರೈತರಿಗೂ ಉಪಕಾರವಾಗಬೇಕು, ಅಂಥ ಟೆಕ್ನಿಕಲ್ ಬುದ್ಧಿವಾದವನ್ನು ಕೊಟ್ಟು ಜನರಿಗೆ ಅನುಕೂಲವಾಗುವಂತೆ ಮಾನ್ಯ ಸಚಿವರು ಏರ್ಪಾಡಿಸುತ್ತಾರೆಂದು ನಂಬಿ ನನ್ನ ಭಾಷಣ ಮುಕ್ತಾಯ ಮಾಡುತ್ತೇನೆ.

*ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಸ್ವಾಮಿ, ಶ್ರೀ ಎಸ್. ಕರಿಯಪ್ಪನವರು ಸಭೆಯ ಮುಂದೆ ಮಂಡಿಸಿರತಕ್ಕಂಥ ಈ ನಿರ್ಣಯದಲ್ಲಿ ಅಡಕವಾಗಿರತಕ್ಕ ಸೂಚನೆಯನ್ನು ನಾನು ಒಪ್ಪಿಕೊಳ್ಳುತ್ತೇನೆ. ದೇಶದಲ್ಲಿ ಆಹಾರದ ಅಭಾವವು ತಲೆದೋರಿರುವುದು ಈ ದಿವಸವಲ್ಲ. ಬಹಳ ಕಾಲದಿಂದಲೂ ಮೈಸೂರು ದೇಶದಲ್ಲಿ ಅಕ್ಕಿಯ ಅಭಾವವಿತ್ತು. ಹೊರಗಿನಿಂದ ಅದು ಬರುತ್ತಿದ್ದುದರಿಂದ ಜನರಿಗೆ ಅದರ ಬಿಸಿ ತಟ್ಟಿರಲಿಲ್ಲ. ಯುದ್ಧ ಪ್ರಾಪ್ತವಾದ ಮೇಲೆ ಬರ್ಮ ಮತ್ತು ಇತರ ಪ್ರದೇಶಗಳಿಂದ ಭಾರತಕ್ಕೆ ಅಕ್ಕಿ ಬರುವುದು ನಿಂತ ಮೇಲೆ, ಮೈಸೂರು ದೇಶಕ್ಕೆ ಹೊರಗಿನಿಂದ ಬರುವ ಅಕ್ಕಿ ನಿಂತ ಮೇಲೆ ಅದರ ಬಿಸಿ ಹೆಚ್ಚಾಗಿ ಮೈಸೂರು ದೇಶಕ್ಕೆ ತಟ್ಟಿದೆ. ಸುಮಾರು 60ರಿಂದ 70 ಸಾವಿರ ಟನ್ ವರೆಗೆ ಅಕ್ಕಿ ಅಭಾವ ಮೈಸೂರು ದೇಶದಲ್ಲಿದೆ. ಮೈಸೂರಿನಲ್ಲಿ ಸದ್ಯಕ್ಕೆ ರಾಗಿ, ಜೋಳಕ್ಕೆ ಕೊರತೆ ಇಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ. 1943—44ರಲ್ಲಿ ಈ ಆಹಾರಾಭಾವವು ದೇಶದಲ್ಲೆಲ್ಲಾ ಕಂಡ ಮೇಲೆ ಭಾರತ ಸರ್ಕಾರವು ಎಲ್ಲಾ ಪ್ರಾಂತಗಳ ಸರ್ಕಾರಗಳಿಗೂ ಸೂಚನೆ ಕೊಟ್ಟಿತು. ಆದ್ದರಿಂದ 1943—44ರಿಂದಲೇ ಒಂದು ಗೊತ್ತಾದ ಕಾರ್ಯಕ್ರಮವನ್ನು ಭಾರತ ದೇಶದಲ್ಲಿ ಅಥವಾ ಮೈಸೂರು ಸಂಸ್ಥಾನದಲ್ಲಿ ಏರ್ಪಡಿಸಿದ್ದರೆ ಈ ದಿವಸ ಇಷ್ಟು ಪರಿಹಾರ ಮಾಡಬೇಕಾಗಿರಲಿಲ್ಲ ಮತ್ತು ನಮ್ಮ ಮಾನ್ಯ ಮಿತ್ರರಾದ ಜನಾಬ್ ಮಹಮದ್ ಇಮಾಂರವರು ಮೊದಲಿಸಿ ಮಾತನಾಡುವುದಕ್ಕೂ ಅವ

ಕಾಶವಿರಲಲ್ಲ. 1943ರಲ್ಲೇ ಈ ಅಭಾವ ತಲೆದೋರಿತು. ಆಗ ಗೊತ್ತು ಗುರಿಯಿಲ್ಲದೆ ಆಹಾರದ ಬೆಳೆಯನ್ನು ಬೆಳೆಯಬೇಕೆಂದು ಪ್ರಾರಂಭಿಸಿದರೂ ನಿರ್ದಿಷ್ಟ ಯೋಜನೆ ಅದಕ್ಕೆ ಮಾಡಿರುವುದು 1949ರಲ್ಲೇ ಎಂಬುದನ್ನು ಸದಸ್ಯರು ಜ್ಞಾಪಕ ಮಾಡಿಕೊಳ್ಳಬೇಕು. ಭಾರತ ಸರ್ಕಾರದವರು ಕೂಲಂಕಷವಾಗಿ ಯೋಚನೆಮಾಡಿ, 1943—44ರಲ್ಲೇ ಯೋಚನೆ ಮಾಡಿ, ಎಷ್ಟು ನಿರೀಕ್ಷೆಯಿತ್ತೋ ಅಷ್ಟು ಬರಲಿಲ್ಲವೆಂದು ಮನಗಂಡು ಈ ಒಂದು ಗೊತ್ತುಗುರಿಯಿಲ್ಲದಿರುವ ಯೋಜನೆಯಿಂದ ಪ್ರಯೋಜನವಿಲ್ಲ, ಇದಕ್ಕೆ ಏನು ದಾರಿಮಾಡಿಕೊಳ್ಳಬೇಕು, ಯಾವ ಕಾರ್ಯಕ್ರಮ ಕೈಕೊಂಡರೆ ದೇಶಕ್ಕೆ ಶಾಶ್ವತವಾದ ಪ್ರಯೋಜನವಾಗುತ್ತದೆ, ರೈತರಿಗೆ ಸರಿಯಾದ ಪ್ರಯೋಜನವಾಗುತ್ತದೆ, ಎಂಬುದನ್ನು ತಿಳಿಸಿದ್ದಾರೆ. ಆದ್ದರಿಂದ ನಿರ್ದಿಷ್ಟ ಯೋಜನೆ 1948-49 ರಿಂದ ಪ್ರಾರಂಭವಾಗಿ ಭಾರತ ಸರ್ಕಾರದಿಂದ ನಮಗೆ ಬರುತ್ತಿರುವುದು 1949—50ರಿಂದ. ಈ ವಿಷಯ ಇಡೀ ದೇಶಕ್ಕೇ ಸಂಬಂಧಪಟ್ಟಿರುವುದು. ನಮ್ಮ ಭವಿಷ್ಯ ಅದರ ಮೇಲೆ ಹೊಂದಿಕೊಂಡಿದೆ. ಯಾರೇ ಆಗಲಿ ಇದನ್ನು ಸಂಪೂರ್ಣವಾಗಿ ಮನಗಾಣದೆ ಬೇರೆ ಭಾವನೆಯಿಂದ ಮಾತನಾಡಿದರೆ ಅದು ದೇಶದ್ರೋಹವಾಗುತ್ತದೆ. ದೇಶ ಉಳಿಯಬೇಕೆಂಬ ಭಾವನೆಯಿಂದ ಇದಕ್ಕೆ ಎಲ್ಲರೂ ಪ್ರಯತ್ನಪಟ್ಟೇತೀರಬೇಕು, ಈ ವಿಚಾರದಲ್ಲಿ ಬೇರೆ ಅರ್ಥಮಾಡಿಕೊಳ್ಳುವುದಕ್ಕೆ ಅವಕಾಶವೇ ಇಲ್ಲ. ಆದ್ದರಿಂದಲೇ ಕೇಂದ್ರ ಸರ್ಕಾರದವರು ವಿಶೇಷ ತೊಂದರೆಯಿರುವ ಪ್ರದೇಶಗಳಿಂದಲೂ ಮತ್ತು ನಮ್ಮ ದೇಶದಿಂದಲೂ ಸಲಹೆ ತೆಗೆದುಕೊಂಡು ಒಂದು ಏರ್ಪಾಡು ಮಾಡಿದ್ದಾರೆ. ಇಂಟೆನ್ಸಿವ್ ಕಲ್ಟಿವೇಷನ್ ಮತ್ತು ಎಕ್ಸ್‌ಟೆನ್ಸಿವ್ ಕಲ್ಟಿವೇಷನ್ ಎಂದು ಎರಡು ಭಾಗ ಮಾಡಿದ್ದಾರೆ. ಅದರಂತೆ ನಿಪುಣರ ಸಲಹೆ ಪಡೆದು ಇರುವ ಅಡ್ಡಿ ಆತಂಕವನ್ನು ಹೋಗಲಾಡಿಸಿ ರೈತರಿಗೆ ಹೆಚ್ಚು ಸೌಲಭ್ಯವನ್ನು ದೊರಕಿಸಿಕೊಡಬೇಕು ಅದು ಇಂಟೆನ್ಸಿವ್ ಕಲ್ಟಿವೇಷನ್, ಇನ್ನೊಂದು ಎಕ್ಸ್‌ಟೆನ್ಸಿವ್ ಕಲ್ಟಿವೇಷನ್. ಅದರ ಪ್ರಕಾರ ಎಲ್ಲಿ ಸೌಲಭ್ಯವಿದೆಯೋ ಅಲ್ಲಿ ಜಾಸ್ತಿ ಜಮೀನನ್ನು ವ್ಯವಸಾಯಕ್ಕೆ ರೈತರು ತರುವಂತೆ ಮಾಡಬೇಕು. ಸರ್ಕಾರದವರೂ ಟ್ರಾಕ್ಟರು ಮುಂತಾದುವನ್ನು ಸಾಕಷ್ಟು ಒದಗಿಸಿ ಅನುಕೂಲಪಡಿಸಬೇಕು. ಅದರಲ್ಲೂ ಇಂಟೆನ್ಸಿವ್ ಕಲ್ಟಿವೇಷನ್‌ಗೆ ಹೆಚ್ಚು ಪ್ರಯತ್ನಪಡಬೇಕೆಂದು ಹೇಳಿದ್ದಾರೆ. ಹೀಗೆ ನಿರ್ದಿಷ್ಟವಾಗಿ ಇಂಥ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೆಂದು ಹೇಳಿದ್ದಾರೆ.

ಆಮೇಲೆ ನಮ್ಮ ದೇಶದಲ್ಲಿರುವ ಕೆರೆಗಳನ್ನು ಹಿಂದಿನಿಂದ ಸರಿಯಾಗಿ ರಿಪೇರಿಮಾಡಿಸಿಕೊಂಡು ಬಂದಿದ್ದರೆ ಈ ದಿವಸ ಆಹಾರದ ಅಭಾವವೇ ನಮ್ಮ ದೇಶದಲ್ಲಿರುತ್ತಿರಲಿಲ್ಲವೆಂದು ಶ್ರೀ ಕರಿಯಪ್ಪನವರು ಹೇಳಿದರು. ಹಣಕಾಸಿನ ಸಚಿವರು ಅಪ್ಪಣೆಕೊಡಿಸಿದ ಹಾಗೆ ಸುಮಾರು 21 ಅಥವಾ 22 ಸಾವಿರ ಕೆರೆಗಳು ರಿಪೇರಿಯಾಗಿಲ್ಲ. ಇತ್ತೀಚೆಗೆ ಸಣ್ಣಕೆರೆಗಳ ಜೀರ್ಣೋದ್ಧಾರ ಕಾರ್ಯಕ್ರಮವನ್ನು ಕೈಕೊಂಡಿದೆ. ಜೊತೆಗೆ 1943—44 ರಿಂದ ಪಬ್ಲಿಕ್‌ವರ್ಕ್ಸ್ ಇಲಾಖೆಯವರು ದೀರ್ಘಕಾಲಾವಧಿಯ ಪ್ರಾಜೆಕ್ಟುಗಳಿಗೇ ಪ್ರಾಶಸ್ತ್ಯ ಕೊಟ್ಟು ಅಲ್ಪಕಾಲಾವಧಿಯ ಪ್ರಾಜೆಕ್ಟುಗಳನ್ನು ಹೆಚ್ಚಾಗಿ ನಿಗಾದಲ್ಲಿಡಲಿಲ್ಲ. ಶ್ರೀ ಕರಿಯಪ್ಪನವರು ಹೇಳಿರುವಂತೆ ಅಲ್ಪ ಕಾಲಾವಧಿಯ ಪ್ರಾಜೆಕ್ಟುಗಳನ್ನು ಹೆಚ್ಚಾಗಿ ತೆಗೆದುಕೊಳ್ಳಬೇಕಾಗಿದೆ. ಇದರ ಜೊತೆಗೆ ರೈತರೂ ಮುಂದೆ ಬಂದರೆ ಟೆಕ್ನಿಕಲ್ ಬುದ್ಧಿವಾದವನ್ನು ಕೊಟ್ಟು ಸಹಾಯ ಮಾಡಬೇಕೆಂದು ಹೇಳಿದ್ದಾರೆ. ಇವುಗಳಲ್ಲಿ ಒಂದಕ್ಕೊಂದಕ್ಕೆ ವಿರೋಧವಿಲ್ಲ. ಸರ್ಕಾರದವರು ಕೈಕೊಳ್ಳುವುದು ನಿಧಾನವಾದರೆ, ರೈತರು ತೆಗೆದುಕೊಳ್ಳಬೇಕಾದರೆ ಉತ್ತೇಜನ ಕೊಡಬೇಕೆಂದು ಹೇಳಿದ್ದಾರೆ. ಆದರೆ ಈ ವಿಷಯವನ್ನು ಹಾಗೆಯೇ ಒಪ್ಪುವುದಕ್ಕಾಗುವುದಿಲ್ಲ. ಎಲ್ಲಿ ತೊಂದರೆಯಿದೆಯೆಂಬುದನ್ನು ನೋಡಿ ಯಾವ ವಿಧವಾದ ಈತಿಬಾಧೆಯೂ ಇಲ್ಲದೇ ಇರುವಾಗ ರೈತರಿಗೆ ಹೊಸದಾಗಿ ಅಣೆಕಟ್ಟುವುದಕ್ಕೆ ಅಥವಾ pick-up well ಹಾಕುವುದಕ್ಕೆ ಆವಶ್ಯಕತೆಯಿದ್ದರೆ ಅದಕ್ಕೆ ಸಂಪೂರ್ಣ ಸಹಾಯವನ್ನು ಸರ್ಕಾರದವರು ಮಾಡುತ್ತಾರೆ. ಉದಾಹರಣೆಗೆ ಇತ್ತೀಚೆಗೆ ಎರಡು ಪ್ರದೇಶಗಳಲ್ಲಿ ಅವಕಾಶ ಕೊಟ್ಟಿದ್ದಾರೆ. ಎಕ್ಸಿಕ್ಯೂಟಿವ್ ಇಂಜನಿಯರಿಗೆ ಸ್ಥಳ ನೋಡಿ ಪ್ಲಾನು, ಅಂದಾಜುಮಾಡಿಕೊಡಿ ಎಂದು ಹೇಳಿದೆ. ಆದರೆ ಅಂಥ ಸಂದರ್ಭಗಳಲ್ಲಿ ಸರ್ಕಾರಕ್ಕೆ ವಾಟರ್ ರೇಟ್ ಕೊಡಬೇಕಾಗುತ್ತದೆ. ನಾವೇ ಕಟ್ಟಿಸಿದರೆ ಕಾಂಟ್ರಿಬ್ಯೂಷನ್ ಸಹ ಕೊಡಬೇಕಾಗುತ್ತದೆ. ಆದ್ದರಿಂದ ವಾಟರ್ ರೇಟ್ ಸರ್ಕಾರದವರು ವಿಧಾಯಕಮಾಡುವ ರೀತಿಯಲ್ಲಿ ಕೊಡಬೇಕೆಂಬ ನಿಬಂಧನೆಗೆ ಒಳಪಡಬೇಕು. ಹಾಗೆ ಕೊಟ್ಟು ಉಪಯೋಗಿಸಿಕೊಳ್ಳಬಹುದು.

ಆಮೇಲೆ ಇಂಥ ಯೋಜನೆಗಳು ಅನೇಕವಾಗಿವೆಯೆಂದು ಸಲಹೆ ಮಾಡಿದ್ದಾರೆ. ಅದಕ್ಕೆ ಸಲಹೆ ನೀಡಲು ದಕ್ಷರಾದ ಇಂಜನಿಯರುಗಳಿದ್ದಾರೆ. ಅಂಥ ಸಂದರ್ಭಗಳಲ್ಲಿ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಬೆಂಬಲ ಕೊಡುವುದಕ್ಕೆ ತಯಾರಾಗಿದ್ದೇವೆ. ಪಕ್ಕದ ಜಮೀನಿಗೆ ಅಥವಾ ಬೇರೆ ವಿಧವಾಗಿ ತೊಂದರೆಯಿಲ್ಲದಿದ್ದರೆ ತಕ್ಕ ಸಹಾಯಮಾಡಲು ಸರ್ಕಾರದವರು ಸಿದ್ಧವಾಗಿದ್ದಾರೆ. ಆದರೆ ರೈತರು ಸಹಕಾರ ಮಾಡುವುದಕ್ಕೆ ಪ್ರಯತ್ನಮಾಡಿದರೆ ಸರ್ಕಾರದವರೂ ಸಹಕಾರ ನೀಡಲು ಪ್ರಯತ್ನಮಾಡುತ್ತಾರೆ. ಈ ವಿಚಾರದಲ್ಲಿ ಸಹಕಾರವು ಅತ್ಯಗತ್ಯ. ತನ್ಮೂಲಕ ಧಾನ್ಯ ಹೆಚ್ಚು ಉತ್ಪತ್ತಿಯಾಗಬೇಕು. ಅದರಿಂದ ದೇಶೋನ್ನತಿಯಾಗಬೇಕು. ಮೊದಲೇ ಹೇಳಿದಂತೆ ರೈತರಿಗೆ ತೊಂದರೆಯಿಲ್ಲದಿದ್ದರೆ, ವ್ಯಾಜ್ಯಕ್ಕೆ ಆಸ್ಪದವಾಗದಿದ್ದರೆ ಅಂಥ ಸಂದರ್ಭಗಳಲ್ಲಿ ಸಂಪೂರ್ಣ ಅನುಮತಿಯನ್ನೂ ಟೆಕ್ನಿಕಲ್ ಸಹಾಯವನ್ನೂ ಖಂಡಿತವಾಗಿಯೂ ಕೊಡುತ್ತೇವೆ.

ಶ್ರೀ ಟಿ. ಮಾದಯ್ಯಗೌಡರು ಮಂಡಿಸಿರುವ ತಿದ್ದುಪಡಿಯು ಸೌಜನ್ಯಯುತವಾಗಿರುವುದರಿಂದ ಅದನ್ನು ಒಪ್ಪಿಕೊಳ್ಳಬೇಕಾಗಿದೆ. ಏಕೆಂದರೆ ನಿರ್ಣಯದಲ್ಲಿ ಹೆಚ್ಚು ಆಹಾರ ಧಾನ್ಯವನ್ನು ಬೆಳೆಯಬೇಕೆಂದು ಯೋಜನೆಮಾಡಿರುವುದು ಅಗತ್ಯವೆಂದು ಹೇಳಿದ್ದಾರೆ. ಆದರೆ ವಿರೋಧಿಗಳು ಇದಕ್ಕೆ ಅಪಾರ್ಥ ಕಲ್ಪಿಸದಿರಲೆಂದು ಪ್ರಾರ್ಥನೆ ಮಾಡಿ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ).—ಒಂದು ವಿಚಾರವನ್ನು ನಾನು ತಿಳಿದುಕೊಳ್ಳಬೇಕಾಗಿದೆ. ಅದೇನೆಂದರೆ, ಪಾರಿಭಾಷಿಕ ಸಲಹೆ ಮತ್ತು ಸಹಾಯದ ಜೊತೆಗೆ ಸರ್ಕಾರದವರು ಸಹಾಯದ್ರವ್ಯವನ್ನು ಕೊಡುತ್ತಾರೆಯೆ ?

ಶ್ರೀ ಟಿ. ಮರಿಯಪ್ಪನವರು.—ಬಾವಿಗಳಿಗೆ ಸಹಾಯದ್ರವ್ಯವನ್ನು ಕೊಡುತ್ತೇವೆ, ಬಾಕಿಯದಕ್ಕೆ ಇಲ್ಲ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಜನಗಳೇ ಕಟ್ಟಿಕೊಂಡರೆ, ತರಿ ಕಂದಾಯದಲ್ಲಿ ಏನಾದರೂ ರಿಯಾಯಿತಿಯನ್ನು ಸರ್ಕಾರದವರು ಕೊಡುತ್ತಾರೆಯೆ ?

ಶ್ರೀ ಟಿ. ಮರಿಯಪ್ಪನವರು.—ತಮ್ಮ ಸ್ವಂತ ಜಮೀನಿನಲ್ಲಿ ತಾವೇ ಕಟ್ಟತಕ್ಕ ಕಟ್ಟೆ ಅಥವಾ ಕೆರೆಗಳ ಏನಾ

ಆಣೆಗಳು ಮತ್ತು ಪಿಕ್‌ಅಪ್‌ಗಳಿಗೆ ನಾನು ಹೇಳಿದ್ದು ಅನ್ವಯಿಸುವುದಿಲ್ಲ.

Mr. SPEAKER.—The question is :

"That in the Resolution the words 'much talked of' be omitted."

The amendment was adopted.

ಶ್ರೀ ಎಸ್. ಕರಿಯಪ್ಪನವರು.—ಈಗ ತಾನೇ ಮಾನ್ಯ ಸಚಿವರು ಬಹಳ ಸಹಾನುಭೂತಿಯಿಂದ ಕೊಟ್ಟ ಆಶ್ವಾಸನವು ನನಗೆ ಮಾತ್ರವಲ್ಲದೆ ಈ ಸಭೆಗೇ ಸಮರ್ಪಕವಾಗಿದೆಯೆಂದು ಭಾವಿಸುತ್ತೇನೆ: ಆದಕಾರಣ ನನ್ನ ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಏನೂ ಅಡ್ಡಿಯಿಲ್ಲ. ಆದರೆ ವಾಪಸ್ಸು ತೆಗೆದುಕೊಳ್ಳುವುದಕ್ಕೆ ಮುಂಚೆ ನಾನು ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ.

Mr SPEAKER.—If the Hon'ble Member wants to withdraw his resolution he need not make any speech.

Sri K. CHENGALARAYA REDDY (Leader of the House).—May I submit to the Chair that it may not be out of order if the Member chooses to exercise the right of reply and say at the end that he does not want to press the resolution. Perhaps it will be in accordance with the rules. I would like the Hon'ble Chair to give a ruling in the matter.

Mr. SPEAKER.—I think I committed a mistake. I should have called upon the Hon'ble Mover of the resolution, Sri Kariappa, to reply before the Hon'ble Home Minister's reply.

ಶ್ರೀ ಎಸ್. ಕರಿಯಪ್ಪನವರು.—ಸ್ವಾಮಿ, ಸರ್ಕಾರದವರೇನೋ ಇದರ ತತ್ವವನ್ನೊಪ್ಪಿಕೊಂಡಿದ್ದಾರೆ. ಇಂತಹ ಸಂದರ್ಭಗಳಲ್ಲಿ ಸಾಕಷ್ಟು ಸಹಕಾರವನ್ನೂ ಸಲಹೆಯನ್ನೂ ಕೊಡಲು ಸರ್ಕಾರಿ ಸಿಬ್ಬಂದಿ ತಯಾರಾಗಿದೆಯೆಂದು ಹೇಳಿದ್ದಾರೆ. ಆದರೆ ಮಧ್ಯೆ ರೆವೆನ್ಯೂ ಇಲಾಖೆಯಿದೆ. ಇಂತಹ ಸೌಕರ್ಯವನ್ನು ಜನರು ಪಡೆಯಬೇಕಾದರೆ ಈ ಇಲಾಖೆಯವರ ಅನುಮತಿ ದೊರೆಯಬೇಕಾದುದು ಅಗತ್ಯ. ಒಂದು ವಿಚಾರ ನಾನು ಹೇಳಿದರೆ ಅದು ಖಂಡನೆಯೆಂದು ಯಾರೂ ಭಾವಿಸಬಾರದು. ರೆವೆನ್ಯೂ ಇಲಾಖೆಗೆ ಒಂದು ಕಾಗದ ಹೋದರೆ ಅದು ಈಚೆಗೆ ಬರುತ್ತದೆಯೋ ಇಲ್ಲವೋ ಎಂದು ಅನುಮಾನವಾಗುತ್ತದೆ. ಅಲ್ಲಿ ಬೇಗ ಕೆಲಸ ನಡೆಯಬೇಕಾದ್ದು ಅವಶ್ಯಕ. ಇಂತಹ ವ್ಯವಸ್ಥೆ ಸರಿಯಾಗಿ ನಡೆದರೆ ಅದರಿಂದ ಬಹಳ ಪ್ರಯೋಜನವಾಗುತ್ತದೆ. ಈಗಾಗಲೇ ಈ ವಿಚಾರದಲ್ಲಿ ಮಾನ್ಯಮಂತ್ರಿಗಳು ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿ ಆಶ್ವಾಸನವನ್ನು ಕೊಟ್ಟಿದ್ದಾರೆ. ಆದುದರಿಂದ ನಾನು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲಿಚ್ಛಿಸುತ್ತೇನೆ.

ಅಧ್ಯಕ್ಷರು.—ನಿರ್ಣಯವನ್ನು ವಾಪಸು ತೆಗೆದುಕೊಳ್ಳಲು ಸಭೆಯ ಅನುಮತಿ ಇದೆಯೆ?

The resolution was, by leave of the Assembly, withdrawn.

Resolution No. 3.

Legislation to put down Black-marketing.

ಶ್ರೀ ಎಂ. ವಿ. ಕೃಷ್ಣಪ್ಪನವರು (ಕೋಲಾರ ಜಿಲ್ಲೆ).—ಸ್ವಾಮಿ, ನನ್ನ ನಿರ್ಣಯ ಈ ರೀತಿ ಇದೆ.—

"This Assembly is of the opinion that suitable legislation should be enacted immediately to put an end to black-marketing with deterrent punishment such as public whipping, taking the offender in public procession on a donkey, etc."

ಸ್ವಾಮಿ, ಈ ನಿರ್ಣಯವನ್ನು ತರುವುದರಲ್ಲಿ ನನ್ನ ಉದ್ದೇಶವಿಷ್ಟೆ: ಈ ಬ್ಲಾಕ್‌ಮಾರ್ಕೆಟಿಂಗ್ ಅಥವಾ ಕಾಳಸಂತೆ ವ್ಯಾಪಾರದ ವಿಷಯದಲ್ಲಿ ನಾನು ಹೆಚ್ಚೇನೂ ಹೇಳಬೇಕಾದ ಅವಶ್ಯಕತೆಯಿಲ್ಲ. ಜನಜೀವನದಲ್ಲಿ ಎಲ್ಲರಿಗೂ ಇದರ ಅನುಭವವಿದೆ. ಇದರ ವಿಷಯದಲ್ಲಿ ಬೇಕಾದರೆ ಗಂಟೆ ಗಟ್ಟಲೆ ವ್ಯಾಖ್ಯಾನಮಾಡುವಷ್ಟು ವಿಷಯಗಳನ್ನು ನಾನು ಸಂಗ್ರಹಮಾಡಿದ್ದೇನೆ. ಆದರೆ ಅದೆಲ್ಲವನ್ನೂ ಹೇಳಿ ಈ ಸಭೆಯ ಕಾಲವನ್ನು ವ್ಯರ್ಥ ಮಾಡದೇ ಸಾಧ್ಯವಾದಷ್ಟು ಸಂಕ್ಷೇಪವಾಗಿ ಕೆಲವು ವಿಷಯಗಳನ್ನು ಮಾತ್ರ ಹೇಳುತ್ತೇನೆ. ಈ ಕಾಳಸಂತೆಯ ವ್ಯಾಪಾರದ ದೆಸೆಯಿಂದ ಅದರಲ್ಲಿಯೂ ಯುದ್ಧಪರಿಸ್ಥಿತಿ ಆರಂಭವಾದ ಮೇಲಂತೂ ಜನಜೀವನದಲ್ಲಿ ಸಾಮಾನ್ಯ ಪ್ರಜೆಗಳು ತಮ್ಮ ಜೀವನವನ್ನು ಸುಗಮವಾಗಿ ನಡೆಸುವುದೇ ಕಷ್ಟವಾಗಿದೆ. ಈಗಿರುವ ಕಾನೂನುಗಳಿಂದ ಈ ಕಾಳಸಂತೆ ವ್ಯಾಪಾರವನ್ನು ಅಷ್ಟಾಗಿ ನಿಲ್ಲಿಸಲು ಸಾಧ್ಯವಾಗಿಲ್ಲ. ಏಕೆಂದರೆ ಒಂದು ವ್ಯವಸ್ಥಿತ ಕಾಳಸಂತೆಯ ವ್ಯಾಪಾರ ದೇಶದಲ್ಲಿ ನಡೆಯುತ್ತಿದೆ ಎಂದು ಅನೇಕರು ಮನಗಂಡಿದ್ದಾರೆ. ಸರ್ಕಾರದವರು ಸರ್ವ ಪ್ರಯತ್ನಗಳನ್ನು ಮಾಡಿದರೂ ಕೂಡ ಇದನ್ನು ನಿರ್ಮೂಲಮಾಡುವುದಕ್ಕೆ ಸಾಧ್ಯವಾಗಿಲ್ಲ. ಈ ಕಾಳಸಂತೆಯ ವ್ಯವಸ್ಥಾಪಕರು ಎಲ್ಲ ಸಂದರ್ಭಗಳಲ್ಲಿಯೂ ಒಂದು ಸಂಘಟನೆಯನ್ನು ಮಾಡಿಕೊಂಡು ದೇಶದ ಜನಜೀವನವನ್ನು ಕಲಕುತ್ತಿದ್ದಾರೆ. ಆದಕಾರಣ ಇದನ್ನು ಮುರಿದು ಜನಜೀವನ ಸುಗಮವಾಗಿ ನಡೆಯುವಂತೆ ಮಾಡಲು ದೇಶದಲ್ಲಿ ಈಗ ಜಾರಿಯಲ್ಲಿರುವ ಕಾನೂನುಗಳಿಂದ ಅಷ್ಟು ಪ್ರಯೋಜನವಾಗುತ್ತಿಲ್ಲ. ಈ ಕಾಳಸಂತೆಯನ್ನು ತಡೆಗಟ್ಟಲು ಈಗಿರುವ ಕಾನೂನುಗಳು ಅಷ್ಟು ಪರಿಣಾಮಕಾರಿಯಾಗಿ ಕೆಲಸಮಾಡುತ್ತಿಲ್ಲ. ಆದಕಾರಣ ಈ ಅನೀತಿಯ ವ್ಯಾಪಾರವನ್ನು ನಾಶಮಾಡಲು ಎರಡು ರೀತಿಯ ಶಿಕ್ಷೆಗಳನ್ನು ನಾನು ಈ ನಿರ್ಣಯದಲ್ಲಿ ಸೂಚಿಸಿದ್ದೇನೆ. ಮೊದಲನೆಯದು ಎಲ್ಲರೆದುರಿಗೂ ಛಡಿ ಏಟು ಕೊಡುವ ಶಿಕ್ಷೆ. ಇದು ನಮಗೇನೂ ಹೊಸದಲ್ಲ. ನಮ್ಮ ಕಾಂಗ್ರೆಸ್ಸಿನವರಿಗೆ ಹಿಂದಿನ ಸರ್ಕಾರದವರು ಜೈಲಿನಲ್ಲಿ ನಮಗೆ ಈ ಶಿಕ್ಷೆ ವಿಧಿಸಿದ್ದಾರೆ.

Sri L. SIDDAPPA (Shimoga District—General).—Does the Hon'ble Member want it to be repeated?

ಶ್ರೀ ಎಂ. ವಿ. ಕೃಷ್ಣಪ್ಪನನರು.—ಈಗಾಗಲೇ ಆ ಕಾನೂನು ರಿಪೀಲ್ ಆಗಿದೆ.

ಎರಡನೆಯ ಶಿಕ್ಷೆ ಕತ್ತೆ ಮುಂತಾದ ಪ್ರಾಣಿಗಳ ಮೇಲೆ ಕೂಡಿಸಿ ಮೆರವಣಿಗೆ ಮಾಡಿಸುವುದು. ಇದು ಹೊಸದೇನೂ ಅಲ್ಲ. ವೇದಗಳ ಕಾಲದಿಂದಲೂ ಈ ಶಿಕ್ಷೆ ಇದ್ದೇ ಇದೆ. ಮಹಾಭಾರತದಲ್ಲಿ ಕೂಡ ಹೇಳಿದೆ. ವಶಿಷ್ಠ ವಿಶ್ವಾಮಿತ್ರರಲ್ಲಿ ಒಂದು ವಿವಾದ ಬಂದು

ವಿಶ್ವಾಮಿತ್ರನು ತಾನು ಹರಿಶ್ಚಂದ್ರನಿಂದ ಅನೃತವನ್ನು ನುಡಿಸದಿದ್ದರೆ ಚಂಡಾಲನ ಕೈಲಿ ಊಟಮಾಡಿ ದಕ್ಷಿಣ ಮುಖವಾಗಿ ಕತ್ತೆಯಮೇಲೆ ಕುಳಿತುಹೋಗುವುದಾಗಿ ಹೇಳಿದನಂತೆ. ಈ ರೀತಿ ಒಂದು ಅಸಹ್ಯವಾದ ಶಿಕ್ಷೆಯನ್ನು ವಿಧಿಸಿದರೆ ಅದು ಬಹಳ ಪರಿಣಾಮಕಾರಿಯಾಗಿರುತ್ತದೆ; ಅದರಲ್ಲಿಯೂ ನಮ್ಮ ಭರತಖಂಡದಲ್ಲಿ ಎಲ್ಲಕ್ಕಿಂತಲೂ ಮಾನ ದೊಡ್ಡದೆಂದು ಜನ ತಿಳಿದುಕೊಂಡಿದ್ದಾರೆ. ಆದಕಾರಣ ಇಂತಹ ಒಂದು ಶಿಕ್ಷೆ ಜನತೆಯಲ್ಲಿ ಚೆನ್ನಾಗಿ ಪರಿಣಾಮವನ್ನುಂಟುಮಾಡುತ್ತದೆ. ಸಾಧಾರಣವಾಗಿ ನಮ್ಮ ದೇಶದಲ್ಲಿ ದಂಡ ಕೊಡುವುದು ಮುಂತಾದ ಶಿಕ್ಷೆಗಳನ್ನು ಸುಲಭವಾಗಿ ಅನುಭವಿಸಿಬಿಡುತ್ತಾರೆ. ಆದರೂ 'ಅಡಿಕೆ ಕದ್ದು ಹೋದ ಮಾನ ಆನೆ ಕೊಟ್ಟರೂ ಬರುವುದಿಲ್ಲ' ಎಂಬ ನಾಣ್ಣುಡಿಗೆ ನಾವೆಲ್ಲರೂ ತಲೆಬಾಗಬೇಕು. ಹುಡುಗರಾಗಿದ್ದಾಗ ನನ್ನ ಸ್ನೇಹಿತರು ಕೆಲವರು ಕದ್ದರೆ ಅಥವಾ ದೊಡ್ಡ ತಪ್ಪುಮಾಡಿದರೆ ಕತ್ತೆಯಮೇಲೆ ಕೂಡಿಸಿ ಮೆರವಣಿಗೆ ಮಾಡುತ್ತಿದ್ದರು. ಅಂತಹ ಶಿಕ್ಷೆ ಈಗ ಅಭಾಸವಾಗಿ ಕಂಡರೂ ಕೂಡ ಈ ಕಾಳಸಂತೆಯ ವ್ಯಾಪಾರದಿಂದ ಆಗುತ್ತಿರುವ ಅನ್ಯಾಯ, ಅನರ್ಥ ಮತ್ತು ಸಾಮಾನ್ಯ ಜನರಿಗೆ ಆಗುತ್ತಿರುವ ಕಷ್ಟನಷ್ಟಗಳನ್ನು ನೋಡಿದರೆ, ಇದೇನೂ ಅಷ್ಟು ಹಾಸ್ಯಾಸ್ಪದವಾದ ಶಿಕ್ಷೆಯೆಂದು ಕಾಣುವುದಿಲ್ಲ. ಇದನ್ನು ಜಾರಿಗೆ ತಂದರೆ ಮರಣದಂಡನೆಗಿಂತಲೂ ಹೆಚ್ಚು ಪರಿಣಾಮಕಾರಿಯಾಗುತ್ತದೆಂದು ನನ್ನ ಭಾವನೆ. ಒಬ್ಬ ದೊಡ್ಡ ವ್ಯಾಪಾರಿಗೆ ಹೀಗೆ ಕತ್ತೆಯಮೇಲೆ ಕೂಡಿಸಿ ಮೆರವಣಿಗೆ ಮಾಡಿಸುವ ಶಿಕ್ಷೆಯಾದರೆ ಮಿಕ್ಕವರಾರೂ ಮುಂದೆ ಈ ರೀತಿ ತಪ್ಪುಮಾಡುವುದಿಲ್ಲ. ಇದನ್ನು ಬಿಟ್ಟು ಸಾವಿರಾರು ರೂಪಾಯಿ ದಂಡ ಹಾಕಿದರೂ ಅವರು ಸುಲಭವಾಗಿ ಕೊಟ್ಟುಬಿಡುತ್ತಾರೆ. ಅಲ್ಲದೆ ಕೆಲವು ಲಾಯರುಗಳು ಹೋಗುವವರೆಗೂ ಈ ಕಾಳಸಂತೆ ವ್ಯಾಪಾರ ಹೋಗುವುದಿಲ್ಲವೆಂದು ಕಾಣುತ್ತದೆ.

ಜನಾಬ್ ಸೈಯದ್ ಅಬ್ದುರ್ ರಹಮಾನ್‌ರವರು (ಚಿಕ್ಕಮಗಳೂರು ಮತ್ತು ಶಿವಮೊಗ್ಗ—ಮುಸ್ಲಿಂ).—ಮೆರವಣಿಗೆ ಜೊತೆಯಲ್ಲಿ ಹೋಗುವವರ್ಯಾರು? (ನಗು!)

Sri K. T. BHASHYAM (Minister for Law and Labour).—My Hon'ble friend must withdraw his observations against lawyers. Lawyers as a class are very hon'ble people (Laughter!).

ಶ್ರೀ ಎಂ. ವಿ. ಕೃಷ್ಣಪ್ಪನವರು.—ನಾನು ಕೆಲವರು ಎಂದು ಹೇಳಿದೆ. ಅವರಿಗೇಕೆ ಕೋಪ?

Sri K. T. BHASHYAM.—Sir, I am not a lawyer myself.

ಶ್ರೀ ಎಂ. ವಿ. ಕೃಷ್ಣಪ್ಪನವರು.—ದೇಶದಲ್ಲಿ ಈ ರೀತಿಯ ಪರಿಸ್ಥಿತಿಗಳು ತಲೆದೋರಿ ಮೂಲಭೂತ ಹಕ್ಕುಗಳಿಗೂ ಮತ್ತು ನಾಗರಿಕ ಹಕ್ಕುಗಳಿಗೂ ಧಕ್ಕೆ ತಗಲುವ ಸಂದರ್ಭದಲ್ಲಿ ಇಂಥ ಶಿಕ್ಷೆಗಳನ್ನು ವಿಧಿಸುವುದರಿಂದ ಬಹಳ ಒಳ್ಳೆಯ ಪರಿಣಾಮವಾಗಬಹುದೆಂಬ ಒಂದು ಘನೋದ್ದೇಶದಿಂದ ಈ ನಿರ್ಣಯವನ್ನು ತಂದಿದ್ದೇನೆಯೇ ಹೊರತು, ನನ್ನ ಸ್ನೇಹಿತರು ತಿಳಿದುಕೊಂಡಿರುವ ಹಾಗೆ ತಮಾಷೆಯ ರೀತಿಯಲ್ಲಿ ತಂದಿಲ್ಲ. ನಾನು ಇದನ್ನು ನಿಶ್ಚಲ ಮನಸ್ಸಿನಿಂದ ಮತ್ತು ದೃಢಸಂಕಲ್ಪದಿಂದ ತಂದಿದ್ದೇನೆ. ಇದು ಸ್ವಲ್ಪ ಹಾಸ್ಯಾಸ್ಪದವಾಗಿ ಕಂಡರೂ ಇದನ್ನು ಒಪ್ಪಿಕೊಂಡು ಇಂಥ ಶಿಕ್ಷೆಗಳ ಮೂಲಕ ದೇಶದಲ್ಲಿ ತಾಂಡವವಾಡುತ್ತಿರುವ ಕಾಳಸಂತೆಯ ವ್ಯಾಪಾರವನ್ನು ನಿರ್ಮೂಲಮಾಡಲು ಅವಕಾಶವಾಗಬಹುದೆಂಬ ಉದ್ದೇಶದಿಂದ ತಂದಿದ್ದೇನೆ. ಇಷ್ಟು ಹೇಳಿ ಸರ್ಕಾರದವರು ಇದನ್ನು ಒಪ್ಪಿಕೊಳ್ಳಬೇಕೆಂದು ಪ್ರಾರ್ಥನೆಮಾಡುತ್ತೇನೆ.

Mr. SPEAKER.—Resolution moved:

"This Assembly is of the opinion that suitable legislation should be enacted immediately to put an end to black-marketing with deterrent punishment such as public whipping, taking the offender in public procession on a donkey, etc."

Sri T. Madiah Gowda has an amendment to move.

***Sri T. MADIAH GOWDA** (Bangalore District—General).—Sir, I beg to move:

"That in the Resolution the words 'such as public whipping, taking the offender in public procession on a donkey, etc.,' be omitted."

ಈ ನಿರ್ಣಯವನ್ನು ಮಂಡಿಸಿರತಕ್ಕಂಥ ನನ್ನ ಮಾನ್ಯ ಸ್ನೇಹಿತರಾದ ಶ್ರೀ ಎಂ. ವಿ. ಕೃಷ್ಣಪ್ಪನವರು ಎಷ್ಟು ಜವಾಬ್ದಾರಿಯಿಂದ ಈ ನಿರ್ಣಯವನ್ನು ತಂದಿದ್ದಾರೆಯೋ ಅಷ್ಟೇ ಜವಾಬ್ದಾರಿಯಿಂದ ನಾನು ಈ ಒಂದು ತಿದ್ದುಪಡಿಯನ್ನು ಸೂಚಿಸಿದ್ದೇನೆ. ಈ ಕಾಳಸಂತೆ ವ್ಯಾಪಾರವನ್ನು ಸಂಪೂರ್ಣವಾಗಿ ನಿರ್ಮೂಲಮಾಡಿದ ಹೊರತು ದೇಶಕ್ಕೆ ಕ್ಷೇಮವಿಲ್ಲ, ಸರ್ಕಾರಕ್ಕೆ ಕೀರ್ತಿ ಬರುವುದಿಲ್ಲ ಎಂಬುದನ್ನು ಎಲ್ಲರೂ ಚೆನ್ನಾಗಿ ಮನಗಂಡಿದ್ದಾರೆ. ಯತ್ನವಿಲ್ಲದೆ ಯುದ್ಧದ ಫಲವಾಗಿ ಹತೋಟಿ ಆಜ್ಞೆಗಳು ಹೊರಬಿದ್ದಮೇಲೆ ಕಾಳಸಂತೆ ವ್ಯಾಪಾರ, ಲಂಚಕೋರತನ, ಇತ್ಯಾದಿ, ದುರ್ನಡತೆಗಳು ದೇಶದಲ್ಲಿ ಹೆಚ್ಚು ಹೆಚ್ಚಾಗಿ ಆವರಿಸಿಕೊಂಡು ಎಲ್ಲೆಲ್ಲೂ ತಾಂಡವವಾಡುತ್ತಿದೆ ಎಂದರೂ ಬಹುಶಃ ತಪ್ಪಾಗಲಾರದು. ಯಾರು ದೇಶದಲ್ಲಿ ಸತ್ಯಸಂಧತೆಯಿಂದ ನಡೆದುಕೊಂಡು ಕೀರ್ತಿವಂತರಾಗಿರುತ್ತಿದ್ದರೋ ಅವರೆಲ್ಲರೂ ಕೂಡ ಈ ದಿನ ಕಾಳಸಂತೆ ವ್ಯಾಪಾರದಲ್ಲಿ ಆಸಕ್ತರಾಗಿದ್ದಾರೆಯೋ ಏನೋ ಎಂದು ಶಂಕೆಪಡುವ ರೀತಿಯಲ್ಲಿ ಇದು ಆಗಿದೆ. ಕೇವಲ ಒಂದು ಕಸಬನ್ನು ಮಾಡತಕ್ಕವರು ಮಾತ್ರವೇ ಅಲ್ಲ, ಯಾವ ಕಸಬನ್ನು ಮಾಡತಕ್ಕವರೇ ಆಗಲಿ, ಅವರಲ್ಲಿ ಈ ಒಂದು ದುರ್ನಡತೆ ಇಲ್ಲ ಎನ್ನುವುದಕ್ಕೆ ಆಸ್ಪದವಿಲ್ಲದ ರೀತಿಯಲ್ಲಿ ಇದು ಆಗಿದೆ. ಲಾಯರುಗಳು ಕೇವಲ ಒಂದು ಕಸಬನ್ನು ಅವಲಂಬಿಸಿ ತಮ್ಮ ಪುಷ್ಟಕ್ಕೆ ತಾವು ಇದ್ದಾರೆ. ಮಾನ್ಯ ಮಿತ್ರರು ಅವರಮೇಲೂ ಸಂಶಯಪಟ್ಟರು! ಹೀಗೆ ಹತೋಟಿ ಆಜ್ಞೆಗಳು ಪ್ರಾರಂಭವಾದ ಮೇಲೆ ಕಂಡುಬಂದಿರುವ ಈ ದುರ್ನಡತೆಗಳು ಯಾವ ಕಾಲಕ್ಕೆ ಅಳಿದುಹೋದೀತೋ, ಯಾವ ಕಾಲಕ್ಕೆ ಪುನಃ ರಾಜ್ಯದಲ್ಲಿ ಒಂದು ಧರ್ಮದ ನೀತಿಯನ್ನು ಅನುಸರಿಸಲು ಸಾಧ್ಯವಾದೀತೋ ಎನ್ನಿಸಿದೆ. ಅಲ್ಲದೆ, ಆ ರೀತಿ ಧರ್ಮದ ನೀತಿಯನ್ನನುಸರಿಸಲು ಸಾಧ್ಯವಾದೀತೇ ಎಂದು ಸಂಶಯಪಡುವ ರೀತಿಯಲ್ಲಿ ಈ ಕಾಳಸಂತೆ ವ್ಯಾಪಾರ ದೇಶದಲ್ಲಿ ಹರಡಿದೆ ಎಂದು ವಿಷಾದಪಡುತ್ತೇನೆ. ಹೀಗಿರತಕ್ಕ ಕಾಲದಲ್ಲಿ ಒಂದು ಕಟುತರವಾದ ನೀತಿಯನ್ನನುಸರಿಸಿ, ಸರ್ಕಾರದವರು ಬೇಕಾದ ಕಾನೂನುಗಳನ್ನು ಮಾಡಿ, ಯಾವ ಯಾವ ರೀತಿಯನ್ನನುಸರಿಸಿ ಇದನ್ನು ನಿರೋಧಿಸಬೇಕೋ ಅವುಗಳೆಲ್ಲವನ್ನೂ ಅನುಸರಿಸಿ ನಿರೋಧಿಸಬೇಕಾದ್ದು ಅತ್ಯಗತ್ಯ. ಆ ದೃಷ್ಟಿಯಿಂದ ಏನು ಮಾಡಬೇಕಾಗಿದೆಯೋ ಅದನ್ನು ಕಡ್ಡಾಯವಾಗಿ, ಖಚಿತವಾಗಿ ಮತ್ತು ಅತ್ಯಂತ ತ್ವರಿತವಾಗಿ ಸರ್ಕಾರದವರು ಮಾಡಬೇಕಾಗಿದೆ. ಬಹುಶಃ ಇದುವರೆಗೂ ಉಗ್ರವಾದ ಕಾನೂನುಮಾಡಲು ಪ್ರಯತ್ನಪಟ್ಟಿಲ್ಲವೇನೋ ಎಂದು

ನನಗೆ ಅನ್ನಿಸುತ್ತದೆ. ಆರೀತಿ ಕಾನೂನುಮಾಡಬೇಕಾಗಿರುವ ಕಾಲದಲ್ಲಿ ನಾವು ಸರ್ಕಾರದವರಿಗೆ ಮುಂಚಿತವಾಗಿಯೇ ಈ ಒಂದು ಕಾಳಸಂತೆ ವ್ಯಾಪಾರಮಾಡತಕ್ಕವರಿಗೆ ಇಂಥ ಶಿಕ್ಷೆಯನ್ನೇ ವಿಧಿಸಿ ಎಂದು ಈ ರೀತಿ ನಿರ್ಣಯದ ಮೂಲಕ ಹೇಳುವುದು ಅಷ್ಟು ಸಾಧುವಲ್ಲವೆಂದು ನನಗೆ ಅನ್ನಿಸಿತು. ಆದ್ದರಿಂದ ಇದಕ್ಕೆ ಒಂದು ತಿದ್ದುಪಡಿಯನ್ನು ಸಭೆಯ ಮುಂದಿಟ್ಟಿದ್ದೇನೆ. ಒಂದು ವೇಳೆ ಅನಿವಾರ್ಯವಾಗಿ ಕತ್ತೆಗಳ ಮೇಲೆ ಕಾಳಸಂತೆ ವ್ಯಾಪಾರ ನಡೆಸಿದವರನ್ನು ಕೂಡಿಸಿ ಮೆರವಣಿಗೆ ಮಾಡುವುದು ಸೂಕ್ತವಾಗಿದ್ದರೂ, ಮುಂದೆ ಸರ್ಕಾರದವರು ಮಾಡುವ ಒಂದು ನಿಬಂಧನೆಯಲ್ಲಿ ಆ ಅಂಶವನ್ನು ಅಡಕ ಮಾಡಲಿ. ಅದು ಬಿಟ್ಟು, ಹೀಗೆಯೇ ಮಾಡಬೇಕೆಂದು ಒಂದು ಸಲಹೆಯನ್ನು ಈ ನಿರ್ಣಯದ ಮೂಲಕ ಸರ್ಕಾರದವರಿಗೆ ಕೊಡುವುಧು ಸೂಕ್ತವಲ್ಲವೆಂದು ನನಗೆ ಅನ್ನಿಸಿತು. ಮತ್ತೊಂದು ಸಲ, ಪಾಪ ಬಡಕತ್ತೆಗಳಿಗೆ ಏಕೆ ಈ ತೊಂದರೆ ಕೊಡಬೇಕು, ಕಾಳಸಂತೆ ವ್ಯಾಪಾರ ಮಾಡಿ ಪುಷ್ಟಿವಂತರಾದವರನ್ನು ಈ ಬಡಕತ್ತೆಗಳು ಹೊರಬಲ್ಲವೇ ಎಂದೂ ಅನ್ನಿಸಿತು. ಆದ್ದರಿಂದ ಯಾವ ವಿಧವಾದ ಶಿಕ್ಷೆ ಇರಬೇಕೆಂಬುದನ್ನು ಸರ್ಕಾರದವರಿಗೆ ಬಿಡಬಹುದು ಅಥವಾ ಕಾನೂನು ಮಾಡುವವರಿಗೆ ಬಿಡಬಹುದು. ಈಗ ಛಡಿ ಏಟಿನ ಶಿಕ್ಷೆ ವಿಧಿಸುವುದಕ್ಕೆ ನಮ್ಮಲ್ಲಿ ಕಾನೂನು ಇದೆ. ಛಡಿ ಶಿಕ್ಷೆಯನ್ನು ವಿಧಿಸುವುದು ಈಗಿನ ಒಂದು ನಾಗರಿಕ ಸಮಾಜಕ್ಕೆ ಸರಿಯಾದ ಶಿಕ್ಷೆಯಲ್ಲ ಎಂಬುದಾಗಿ ಅದಕ್ಕೆ ಹಿಂದಿನ ನ್ಯಾಯವಿಧಾಯಕ ಸಭೆಯಲ್ಲಿ ಮತ್ತು ಇತರ ಸಭೆಗಳಲ್ಲಿ ಅನೇಕ ವಿಧವಾಗಿ ವಾದಿಸಿದ್ದಾರೆ. ಆಗಲೂ ಕೂಡ ಬೇರೆ ಬೇರೆ ಕಡೆಗಳಲ್ಲಿ ಛಡಿ ಶಿಕ್ಷೆಗೆ ಮತ್ತು ಇತರ ಶಿಕ್ಷೆಗಳ ವಿಚಾರ ನಾಗರಿಕ ಸಮಾಜಕ್ಕೆ ಯುಕ್ತವಾದ ಶಿಕ್ಷೆಯೇ ಅಥವಾ ಅಲ್ಲವೇ ಎಂಬುದನ್ನು ಚರ್ಚೆಮಾಡುತ್ತಾ ಇದ್ದರು. ಅಂಥಾದ್ದರಲ್ಲಿ ಕಾಳಸಂತೆ ವ್ಯಾಪಾರಸ್ಥರನ್ನು ಕತ್ತೆಯ ಮೇಲೆ ಮೆರವಣಿಗೆ ಮಾಡಿಸುವುದಕ್ಕಿಂತಲೂ ಹೆಚ್ಚಿನ ಪರಿಣಾಮಕಾರಿಯಾದಂಥ ಶಿಕ್ಷೆಯನ್ನು ವಿಧಿಸಲು ಯೋಚನೆಮಾಡುವುದಕ್ಕೆ ಸರ್ಕಾರದವರಿಗೆ ಬಿಡಬಹುದೇ ಒಳ್ಳೆಯದೆಂದು ನನಗೆ ಅನ್ನಿಸುತ್ತದೆ. 'ಪ್ರಾಣ ತೆಗೆದವನ ಪ್ರಾಣವನ್ನು ತೆಗೆದುಬಿಡಿ ಅಥವಾ ಕೈಯಿಂದ ತಪ್ಪು ಮಾಡಿದರೆ ಆ ಕೈಯನ್ನು ಕತ್ತರಿಸಿ ಅಥವಾ ಬಾಯಿಂದ ಸುಳ್ಳು ಹೇಳಿದರೆ ಅಂಥವರ ನಾಲಿಗೆಯನ್ನು ಕತ್ತರಿಸಿ' ಎಂಬ ಈ ವಿಧವಾದ ಶಿಕ್ಷೆ ಧರ್ಮಶಾಸ್ತ್ರದಲ್ಲಿ ಇತ್ತು ಎಂದು ಕೇಳಿದ್ದೇವೆ. ಕಾಳಸಂತೆ ವ್ಯಾಪಾರ ಆ ಕಾಲದಲ್ಲಿ ಇದ್ದಿಲ್ಲದೇ ಇರಬಹುದು. ಇದ್ದಿದ್ದರೆ ಯಾವ ಶಿಕ್ಷೆ ಮಾಡುತ್ತಿದ್ದರೋ ಏನೋ ಗೊತ್ತಿಲ್ಲ. ಈಗ ಹೊಸದಾಗಿ ಧರ್ಮಶಾಸ್ತ್ರ ಅಥವಾ ನ್ಯಾಯವಾದ ಒಂದು ಕಾನೂನನ್ನು ಮಾಡತಕ್ಕವರು ಈ ಕಾಳಸಂತೆ ವ್ಯಾಪಾರದಂಥ ಒಂದು ಅತ್ಯಂತ ಹೀನಾಯವಾದ ತಕ್ಸೀರಿಗೆ ಎಂಥ ಶಿಕ್ಷೆ ಸರಿಹೊಂದುತ್ತದೆ ಎಂಬುದನ್ನು ಬಹಳ ಚೆನ್ನಾಗಿ ಯೋಚನೆಮಾಡಬೇಕು. ಬಹುಶಃ ಯೋಚನೆ ಮಾಡಿದ್ದರಲ್ಲಿ ನಮ್ಮ ಮಿತ್ರರು ಸೂಚಿಸಿರತಕ್ಕ ಈ ಶಿಕ್ಷೆ ಸರಿಯಾಗಿದ್ದರೂ ಇರಬಹುದು. ಕಡ್ಡಾಯವಾಗಿ ಶಿಕ್ಷೆ ಇಂಥಾದ್ದೇ ಇರಬೇಕೆಂದು ನಾವು ಹೇಳುವುದಕ್ಕೆ ಬದಲಾಗಿ ಕಾಳಸಂತೆ ವ್ಯಾಪಾರಸ್ಥರನ್ನು ಶಿಕ್ಷೆ ಮಾಡಲು ಉಗ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿದರೆ ಸಾಕು. ಕಾಳಸಂತೆ ವ್ಯಾಪಾರಸ್ಥರನ್ನು ಕಠಿಣವಾಗಿ ಶಿಕ್ಷಿಸಬೇಕು, ಇಲ್ಲದಿದ್ದರೆ ದೇಶ ಅನಾಯಕವಾಗುತ್ತದೆ ಮತ್ತು ನಾಗರೀಕತೆಯ ಮಟ್ಟ ಕೆಳಗೆ ಹೋಗುತ್ತದೆ. ಅದನ್ನು ಎತ್ತಿ ಹಿಡಿಯಲು ಸಾಧ್ಯವಾಗಲಾರದು. ಆದ್ದರಿಂದ ಕಠಿಣವಾದ ಶಿಕ್ಷೆ ಇರಬೇಕೆಂಬುದನ್ನು ಮಾತ್ರ ನಾವು ಈ ನಿರ್ಣಯವನ್ನು ಸೂಚಿಸುತ್ತಾ ಹೇಳಿ ಇಲ್ಲಿ ನಮೂದಿಸಿರತಕ್ಕ ಶಿಕ್ಷೆ ಇರಬೇಕೆಂಬುದನ್ನು ಬಿಟ್ಟುಬಿಡಬೇಕೆಂಬುದಾಗಿ ನನ್ನ ಅಭಿಪ್ರಾಯವಾಗಿದೆ. ಒಟ್ಟಿನಲ್ಲಿ ಈ ಕಾಳಸಂತೆ ವ್ಯಾಪಾರಸ್ಥರಿಗೆ ಕಠಿಣವಾದ ಶಿಕ್ಷೆಯಾಗಬೇಕು, ಅದಕ್ಕೆ ತಕ್ಕ ಕಾನೂನು ಆಗಬೇಕು, ಮತ್ತು ಅತ್ಯಂತ ತ್ವರಿತವಾಗಿ ಆಗಬೇಕು. ಆದಷ್ಟು ಜಾಗ್ರತೆ ಇದನ್ನು ಸರಿಪಡಿಸಿ ದೇಶದಲ್ಲಿ ಯಾವ ಒಂದು ಹೊಸ ವಾತಾವರಣವನ್ನು ಕಲ್ಪಿಸಬೇಕೋ, ದೇಶದಲ್ಲಿರತಕ್ಕ ಯಾವ ಒಂದು ಅನೀತಿಯುತವಾದ ಮಾರ್ಗ ಹೋಗಲು ಏರ್ಪಾಡುಮಾಡಬೇಕೋ ಅದನ್ನು ಅತ್ಯಂತ ತ್ವರಿತವಾಗಿ ಮಾಡಬೇಕು. ಇದು ಸರ್ಕಾರದವರ ಮೇಲೆ ಬಿದ್ದಿರತಕ್ಕ ದೊಡ್ಡ ಜವಾಬ್ದಾರಿ ಎಂದು ಹೇಳಿ, ಈ ನಿರ್ಣಯವನ್ನು ಸಮರ್ಥನೆಮಾಡುತ್ತೇನೆ ಮತ್ತು ಈ ನಿರ್ಣಯದಲ್ಲಿ ನಾನು ಸೂಚಿಸಿರತಕ್ಕ ಯಾವ ಕೆಲವು ಪದಗಳು ಇವೆಯೋ ಅವುಗಳನ್ನು ತೆಗೆದುಹಾಕಬೇಕೆಂದು ಹೇಳುತ್ತೇನೆ.

Mr. SPEAKER.—Amendment moved:

"That in the Resolution the words 'such as public whipping, taking the offender in public procession on a donkey, etc.' be omitted."

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ದಿನ ದಿನಕ್ಕೂ ಜನರ ನೈತಿಕ ಮಟ್ಟ ಕಡಿಮೆಯಾಗುತ್ತಾ ಬರುತ್ತಿದೆ. ಇದನ್ನು ತಡೆಗಟ್ಟುವುದಕ್ಕಾಗಿ ಸರ್ವಪ್ರಯತ್ನಗಳನ್ನೂ ಮಾಡಲೇಬೇಕೆಂಬುದನ್ನು ಸರ್ವರೂ ಒಪ್ಪಿಕೊಳ್ಳಲೇಬೇಕಾಗಿದೆ. ಸಮಾಜದಲ್ಲಿರುವ ಕೆಲವು ವ್ಯಕ್ತಿಗಳಲ್ಲಿ ನ್ಯಾಯಾನ್ಯಾಯಗಳ ಮತ್ತು ಧರ್ಮಾಧರ್ಮಗಳ ಅರಿವಿಲ್ಲದೆ ಹಣ ಸಂಪಾದನೆ ಮಾಡಲೇಬೇಕೆಂಬ ಮನೋಭಿಪ್ರಾಯ ಎದ್ದು ಕಾಣುತ್ತಿದೆ. ಇಂಥಾ ವ್ಯಕ್ತಿಗಳ ಮೇಲೆ ಪ್ರಬಲವಾದ ಪರಿಣಾಮಕಾರಿಯಾದಂಥ ಕಾನೂನಿನ ಪ್ರಯೋಗ ಮಾಡುವುದು ಅತ್ಯಾವಶ್ಯಕ. ಆದರೆ ಈಗಿನ ಕಾನೂನು ನದಿಗೆ ಬೇಡನು ಬಲೆಯನ್ನು ಬೀಸಿದಂತಿರುತ್ತೆ. ಬೇಡನು ಬಲೆಯನ್ನು ಬೀಸಿದಾಗ ಕೆಲವು ಮೀನುಗಳು ಬಲೆಯಿಂದ ಜಾರಿಕೊಳ್ಳುತ್ತವೆ, ಕೆಲವು ಮೀನು ಬಲೆಯ ಬಳಿಗೆ ಬಾರದೆ ಹಾಗೇ ತಪ್ಪಿಸಿಕೊಳ್ಳುತ್ತವೆ, ಮತ್ತೆ ಕೆಲವು ಬಲೆಗೆ ಬಿದ್ದಮೇಲೂ ಹಾರಿ ತಪ್ಪಿಸಿಕೊಂಡು ಹೋಗುತ್ತವೆ ಅದರಂತೆಯೇ ಈಗ ತಾವು ಮಾಡಿರುವ ಕಾನೂನು ಬಲೆಗೆ ದೊಡ್ಡ ದೊಡ್ಡ ತಪ್ಪಿತಸ್ಥರು ಸಿಕ್ಕುವುದೇ ಇಲ್ಲ. ಸಣ್ಣ ಸಣ್ಣ ತಪ್ಪಿತಸ್ಥರು ಹಾಗೂ ಹೀಗೂ ಮಾಡಿ ಜಾರಿಕೊಂಡುಬಿಡುತ್ತಾರೆ. ಇನ್ನುಳಿದ ಈ ಮಧ್ಯಮ ತರಗತಿಯವರೇ ಈ ಬಲೆಗೆ ಬೀಳತಕ್ಕವರು. ಆದುದರಿಂದ ನಾವೀಗ ನಿರ್ಮಾಣಮಾಡಬೇಕಾಗಿರುವ ಕಾನೂನಿನ ಬಲೆಗೆ ದೊಡ್ಡ ಮೀನುಗಳು ಬೀಳುವಂತಾಗಬೇಕು. ಒಬ್ಬರು ಹೆಚ್ಚು, ಒಬ್ಬರು ಕಡಿಮೆ ಎಂಬೀ ಬೇಧಭಾವವಿಲ್ಲದೆ ಶಿಕ್ಷಿಸತಕ್ಕಂಥ ಕಾನೂನನ್ನು ತಾವು ಜಾರಿಗೆ ತರಬೇಕಾಗಿದೆ. ಇಂಥಾ ಕಾನೂನನ್ನು ತಾವೀಗ ನಿರ್ಮಾಣ ಮಾಡಬೇಕೆಂದು ಹೇಳುತ್ತೇನೆ. ಬರೀ ಕಾನೂನನ್ನು ರಚಿಸುವುದರಿಂದಲೇ ಸಮಾಜ ಸುಧಾರಣೆಯಾಗುತ್ತದೆಂಬುದನ್ನು ಒಪ್ಪಿಕೊಳ್ಳಲಿಕ್ಕೆ ಸಾಧ್ಯವಾಗದ ಮಾತು. ಜೊತೆಗೆ ಸಾರ್ವಜನಿಕ ಅಭಿಪ್ರಾಯ ರೂಪುಗೊಳ್ಳಬೇಕು. ಕಾನೂನಿನ ಆಚರಣೆಯನ್ನೂ ಸಹ ಬಹಳ ಕಟ್ಟುನಿಟ್ಟಾಗಿ ಜಾರಿಗೆ ತರಬೇಕು. ದೇಶದಲ್ಲಿ ಕಳವು ಮತ್ತು ಇತರ ತಕ್ಸೀರುಗಳು ಜಾಸ್ತಿಯಾದರೆ ಅದು ಸಮಾಜದ ಮೇಲೆ ಕಳಂಕವನ್ನು ಹೊರಿಸತಕ್ಕದ್ದಾಗಿರುತ್ತದೆ. ಆದಕಾರಣ ಅವೆಲ್ಲವನ್ನೂ ತಡೆಗಟ್ಟಲು ಹೇಗೆ ಸರ್ಕಾರ ಕ್ರೂರ ಕಾನೂನುಗಳನ್ನು ಮಾಡಿದ್ದಾರೋ, ಅದೇ ರೀತಿ ಈ ಸಂದರ್ಭದಲ್ಲಿಯೂ ಮಾಡಬೇಕೆಂದು ನಾನು ಒತ್ತಾಯಪಡಿಸುತ್ತೇನೆ. ಆದರೆ

ಶ್ರೀ ಎಂ. ವಿ. ಕೃಷ್ಣಪ್ಪನವರು ಸೂಚಿಸಿರುವ ಪ್ರಕಾರ ಶಿಕ್ಷೆಯನ್ನು ವಿಧಿಸುವುದರಿಂದ ಇದು ಕಡಿಮೆಯಾಗುತ್ತದೆಂಬುದು ಎಷ್ಟರಮಟ್ಟಿಗೆ ಸೂಕ್ತವಾಗಿದೆಯೆಂಬುದನ್ನು ನಾನು ಹೇಳಲಾರೆ. ಅಷ್ಟೇಕೆ ಅಂಥಾ ತಕ್ಸಿರೇನಾದರೂ ನಮ್ಮ ಮಲೆನಾಡಿನ ಕೆಲವು ತಾಲ್ಲೂಕುಗಳಲ್ಲಿ ನಡೆದರೆ, ಆಗ ಅವರನ್ನು ಶಿಕ್ಷಿಸಲು ನಮ್ಮಲ್ಲಿ ಕತ್ತೆಗಳೇ ಸಿಕ್ಕುವುದಿಲ್ಲ(ನಗು!!) ಇನ್ನು ಹೇಗೆ ನಾವು ಆ ತಪ್ಪಿತಸ್ಥರ ಮೆರೆವಣಿಗೆಯನ್ನು ಮಾಡುವುದು! ಈ ಪದಗಳು ಈ ನಿರ್ಣಯದಲ್ಲೇ ಅಡಕವಾದರೆ ಅದರಿಂದ ಅನೇಕ ಸಮಸ್ಯೆಗಳು ಉದ್ಭವಿಸಬಹುದು. ಅಂತೂ ಏನೇ ಆಗಲೀ ಒಟ್ಟಿನಲ್ಲಿ ನಾನು ಈ ನಿರ್ಣಯದಲ್ಲಿ ಅಡಕವಾಗಿರುವ ತತ್ವವನ್ನು ಅಂಗೀಕರಿಸಿ, ಅದನ್ನು ತಡೆಗಟ್ಟಲು ಎಲ್ಲಾ ಪ್ರಯತ್ನಗಳನ್ನೂ ಮಾಡಬೇಕೆಂದು ತಿಳಿಸಿ ನಾನು ಇದನ್ನು ಸಮರ್ಥಿಸುತ್ತೇನೆ.

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಸ್ವಾಮಿ, ಈ ನಿರ್ಣಯವನ್ನು ತಂದಿರತಕ್ಕ ಶ್ರೀ ಎಂ. ವಿ. ಕೃಷ್ಣಪ್ಪನವರನ್ನು ಮೊದಲು ಅಭಿನಂದಿಸಬೇಕಾಗಿದೆ. ಈ ನಿರ್ಣಯವನ್ನು ಓದಿದರೆ ಅದು ಹಾಸ್ಯಾಸ್ಪದವಾಗಿ ಕಂಡುಬರುತ್ತದೆಂದು ಕೆಲವು ಮಾನ್ಯ ಸದಸ್ಯರು ಭಾವಿಸಿರುವುದಾಗಿದ್ದರೂ, ಅವರು ವ್ಯಕ್ತಪಡಿಸಿರುವ ಅಭಿಪ್ರಾಯ ನಿಜವಾಗಿಯೂ ಒಪ್ಪತಕ್ಕದ್ದಾಗಿದೆ. ಶ್ರೀ ಕಡಿದಾಳ್ ಮಂಜಪ್ಪನವರೂ ಸಹ ಇದೇ ಭಾವನೆಯಿಂದ ಹಾಗೆ ಹೇಳಿರಬೇಕೆಂದು ನಾನು ಭಾವಿಸುತ್ತೇನೆ. ಆದರೆ ಇದು ಏನೇ ಇರಲಿ, ಈ ಕಾಳಸಂತೆಯ ವ್ಯಾಪಾರ ಎಂಬುದು ದಿನೇ ದಿನೇ ಎಲ್ಲಿ ನೋಡಲಿ ಅಭಿವೃದ್ಧಿ ಹೊಂದುತ್ತಿದೆ. ಅದರಲ್ಲೂ ಈ ಹೆಚ್ಚು ಆಹಾರ ಬೆಳೆಯುವ ಯೋಜನೆಯನ್ನು ಒತ್ತಾಯಮಾಡುತ್ತಿರುವಾಗ, ಇನ್ನೊಂದು ಕಡೆಯಲ್ಲಿ ಕೆಲವರು ಈ ಆಹಾರದ ಅಭಾವದ ಪರಿಸ್ಥಿತಿಯನ್ನೇ ಒಂದು ಸದವಕಾಶವನ್ನಾಗಿ ಉಪಯೋಗಿಸಿಕೊಂಡು ಹಣ ಸಂಪಾದಿಸಲು ಮಾರ್ಗ ಮಾಡಿಕೊಂಡಿದಾರೆ. ಜನರು ಈರೀತಿ ಹುಚ್ಚಾಪಟ್ಟೆ ವರ್ತಿಸುತ್ತಿರುವುದನ್ನು ಇದುವರೆಗೂ ತಪ್ಪಿಸದೆ ಇರುವುದು ತುಂಬಾ ವಿಷಾದಕರ. ಹಿಂದೆ ಅನೇಕ ಸಂದರ್ಭಗಳಲ್ಲಿ ಸಮಾಜದ್ರೋಹಿಗಳನ್ನು ಕತ್ತೆಯಮೇಲೆ ಕೂಡಿಸಿ ಮೆರವಣಿಗೆ ಮಾಡಿಸಿದ ಪ್ರಸಂಗಗಳನ್ನೇ ಅನೇಕವಾಗಿ ನಾವು ಕೇಳಿದ್ದೇನೆ. ಹಾಗೆ ಮಾಡಿದ್ದರಿಂದ ಹಿಂದೆ ಎಷ್ಟೋ ಪರಿಣಾಮಕಾರಿಯಾದ ಫಲ ಉಂಟಾಗಿದೆ. ಆದಕಾರಣ ಸಮಾಜದಲ್ಲಿ ತಪ್ಪು ಮಾಡಿದವರನ್ನು ಉಗ್ರ ರೀತಿಯಲ್ಲಿ ಶಿಕ್ಷಿಸಲೇಬೇಕು. ಮಾನ ಕಳೆದುಕೊಳ್ಳುವುದಕ್ಕಿಂತ ಪ್ರಾಣ ಕಳೆದುಕೊಳ್ಳುವುದು ಲೇಸು ಎಂಬುವಷ್ಟು ತಪ್ಪಿತಸ್ಥನಿಗೆ ಹೊಳೆಯುವಂಥಾ ಶಿಕ್ಷೆಯನ್ನು ವಿಧಿಸಲೇಬೇಕು. ಹಿಂದೆ 1942ನೆಯ ಇಸವಿಯಲ್ಲಿ ಒಂದಾವರ್ತಿ ಹೀಗೆ ಕತ್ತೆಯಮೇಲೆ ಮೆರವಣಿಗೆ ಮಾಡಿದ್ದರಂತೆ. ಈಗಲೂ ಆ ತಪ್ಪಿತಸ್ಥನು ಜೀವಂತನಾಗಿದ್ದಾನ. ಆದರೆ ಇಲ್ಲಿಯವರೆಗೂ ಆತನು ಪುನಃ ಅಂಥಾ ತಪ್ಪನ್ನು ಮಾತ್ರ ಮಾಡಿರುವುದಿಲ್ಲ.

ಒಬ್ಬ ಸದಸ್ಯರು.—ಆ ರೀತಿ ಎಷ್ಟುಮಂದಿ ಕಾಳಸಂತೆ ವ್ಯಾಪಾರಗಾರರನ್ನು ಶಿಕ್ಷಿಸಿ ಈ ಕಾಳಸಂತೆಯ ವ್ಯಾಪಾರವನ್ನು ನಿಲ್ಲಿಸಲಾಗಿದೆಯೆಂಬುದನ್ನು ಹೇಳುತ್ತೀರಾ ?

ಶ್ರೀ ಜಿ. ವೀರಪ್ಪನವರು.—ಈ ಹತೋಟಿ ಬಂದ ಮೇಲಂತೂ ಕಾಳಸಂತೆ ವ್ಯಾಪಾರ ಎಂಬುದು ಬಹಳ ಹೆಚ್ಚಾಯಿತು. ನಾನಾ ಜನರು ನಾನಾ ರೀತಿಯಲ್ಲಿ ಸಂಪಾದನೆಮಾಡಿ ಶಿಕ್ಷೆಗೆ ಒಳಗಾಗದ ತೆ ತಪ್ಪಿಸಿಕೊಂಡಿದ್ದಾರೆ. ಇದರಲ್ಲಿ ಕೆಲವರು ರಾಜಕಾರಣ ಪಟುಗಳೂ ಇರಬಹುದು, ಖಾಸಗಿಯವರೂ ಇರಬಹುದು. ಅಂತೂ ಇವರೆಲ್ಲರನ್ನೂ ಕ್ರೂರ ಶಿಕ್ಷೆಗೆ ಗುರಿಪಡಿಸತಕ್ಕದ್ದು ಸಮಾಜದ ಮತ್ತು ಸರ್ಕಾರದ ಜವಾಬ್ದಾರಿಯಾಗಿದೆ. ಆದರೆ ಜನಗಳನ್ನು ಈಗ ಕೇವಲ ಜೈಲಿಗೆ ಕಳುಹಿಸಿದರೆ ಅವರು ತಮ್ಮ ಕೆಟ್ಟ ಪದ್ಧತಿಯನ್ನು ಬಿಟ್ಟುಬಿಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. 'ಏನು ಆ ಜೈಲಿನಲ್ಲಿರುವುದು ! ಆ ಜೈಲಿಗೆ ಎಂತ ಥವರು ಹೋಗಲಿಲ್ಲ, ಈಗಿರುವ ಮಂತ್ರಿಗಳೆಲ್ಲ ಹೋಗಿ ಬಂದಿರುವ ಜೈಲು ತಾನೆ' ಎಂಬುದಾಗಿ ಜನರು ಆಡಿಕೊಳ್ಳುತ್ತಿದ್ದಾರೆ. ಆದುದರಿಂದ ಕಾಳಸಂತೆಯ ವ್ಯಾಪಾರಗಾರರನ್ನು ಕತ್ತೆಯಮೇಲೆ ಮೆರವಣಿಗೆ ಮಾಡಿಸುವ ಶಿಕ್ಷೆಯು ಜೈಲು ಶಿಕ್ಷೆಗಿಂತ ದೇಶದಲ್ಲಿ ಒಂದು ಮಹತ್ವದ ಪರಿಣಾಮ ಮತ್ತು ಮಾರ್ಗದರ್ಶಿತ್ವ ಉಂಟುಮಾಡಿದಂತಾಗುತ್ತದೆಂಬ ಉದ್ದೇಶದಿಂದ ಶ್ರೀ ಕೃಷ್ಣಪ್ಪನವರು ಇದನ್ನು ಸೇರಿಸಿದ್ದಾರೆ. ಆದರೆ ಶ್ರೀ ಕಡಿದಾಳ್ ಮಂಜಪ್ಪನವರಿಗೂ ಮತ್ತು ಶ್ರೀ ಟಿ. ಮಾದಯ್ಯಗೌಡರಿಗೂ ಕೊಂಚ ಹಾಸ್ಯಾಸ್ಪದವಾಗಿ ಈ ಪದಗಳು ತೋರಿರಬಹುದೆಂದು ಕಾಣುತ್ತದೆ. ಆದರೆ ಅಂಥ ಅವಮಾನ ಕೂಡ ಸಹಿಸಿಕೊಳ್ಳಬಲ್ಲವನಿಗೆ ನಾವು ಏನೇ ಶಿಕ್ಷೆ ಮಾಡಿದರೂ ಆತನನ್ನು ಉತ್ತಮ ಮಾರ್ಗಕ್ಕೆ ತರಲಾಗುವುದಿಲ್ಲ. ಅಂತೂ ನೀತಿ ಬಾಹಿರರನ್ನು ಯಾವ ರೀತಿಯಲ್ಲಾದರೂ ಹತೋಟಿಗೆ ತರಲೇಬೇಕೆಂದು ನಾನು ಒತ್ತಾಯಪೂರ್ವಕವಾಗಿ ತಿಳಿಸಿ ಈ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

Mr. SPEAKER.—The House will now rise for lunch and meet again at 4 p.m.

The Assembly rose for Lunch at Thirty Minutes past Three of the Clock and re-assembled at Four of the Clock, Mr. Speaker (Sri V. Venkatappa) in the Chair.

---

*ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಅಧ್ಯಕ್ಷರೇ. ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ತಂದಿರತಕ್ಕ ನಿರ್ಣಯದ ಪರವಾಗಿ ಮಾತನಾಡುತ್ತಾ ಕೆಲವು ವಿಷಯಗಳನ್ನು ಅರಿಕೆಮಾಡಿಕೊಳ್ಳಬೇಕೆಂದಿದ್ದೇನೆ. ಪ್ರಪಂಚದ ಎರಡನೆಯ ಮಹಾಯುದ್ಧವಾದನಂತರ ಆಹಾರದ ಸಾಮಾನುಗಳೂ ಮತ್ತು ಇತರ ಜನಜೀವನಕ್ಕೆ ಅತ್ಯವಶ್ಯಕವಾದ ಸಾಮಾನುಗಳ ಅಭಾವ ಉಂಟಾಯಿತೋ ಆಗ, ದೇಶದಲ್ಲಿ ಕಾಳಸಂತೆ ವ್ಯಾಪಾರ ನಡೆಯುವುದಕ್ಕೆ ಪ್ರಾರಂಭವಾಗಿ ನಮಗೆ 'ಬ್ಲಾಕ್ ಮಾರ್ಕೆಟ್' ಎನ್ನುವ ಪದ ಹೊಸದಾಗಿ ಸಿಕ್ಕಿದ ಹಾಗಾಯಿತೆಂದು ಕಾಣುತ್ತದೆ. ಏಕೆಂದರೆ, ಅದಕ್ಕಿಂತ ಮುಂಚೆ ಅದಿರಲಿಲ್ಲ. ಈಗ ಇದನ್ನು ತಪ್ಪಿಸಬೇಕಾದರೆ ಕಾಳಸಂತೆ ನಡೆಸುವವರನ್ನು ಕತ್ತೆಗಳ ಮೇಲೆ ಕುಳ್ಳರಿಸಿ ಮೆರವಣಿಗೆ ಮಾಡಬೇಕು ಎಂದು ಹೇಳಿದ್ದಾರೆ. ಆದರೆ ಹೀಗೆ ಇನ್ನು ಮೇಲೆ ಉಗ್ರ ಶಿಕ್ಷೆ ಮಾಡಬೇಕೆಂದು ಏನು ಹೇಳಿದ್ದಾರೋ ಅಷ್ಟರಿಂದಲೇ ಈ ಬ್ಲಾಕ್‌ಮಾರ್ಕೆಟ್ ನಿಲ್ಲುತ್ತದೆಂದು ನಾನು ಹೇಳಲಾರೆ. ದೇಶದಲ್ಲಿ ಜನಗಳಿಗೆ ಬೇಕಾದ ಸಾಮಾನುಗಳು ಎಲ್ಲಿಯವರೆಗೆ ಸಾಕಾದಷ್ಟು ಪ್ರಮಾಣದಲ್ಲಿ ದೊರಕುವದಿಲ್ಲವೋ ಅಲ್ಲಿಯವರೆಗೂ ಸಾಮಾನುಗಳ ಅಭಾವದ ಪರಿಣಾಮವಾಗಿ ಕಳ್ಳವ್ಯಾಪಾರವಿದ್ದೇ ಇರುತ್ತದೆ. ಆದ್ದರಿಂದ ಇದನ್ನು ನಿಲ್ಲಿಸಬೇಕಾದರೆ ಮುಖ್ಯವಾಗಿ ಸಾಮಾನುಗಳ ತಯಾರಿಕೆ ಜಾಸ್ತಿಯಾಗಬೇಕು. ಸರ್ಕಾರದವರು ಸಾಮಾನುಗ

ಳನ್ನು ಸಾಕಾದಷ್ಟು ಪ್ರಮಾಣದಲ್ಲಿ ಒದಗಿಸಲು ಏರ್ಪಾಡುಮಾಡದೆ ಹೋದರೆ ಯಾರಿಗೆ ಸಾಮಾನುಗಳು ಬೇಕಾಗುತ್ತವೆಯೋ ಅವರು ಹೇಗಾದರೂ ಮಾಡಿ ಅದನ್ನು ತೆಗೆದುಕೊಳ್ಳುವುದಕ್ಕೆ ಹೋಗಿಯೇ ಹೋಗುತ್ತಾರೆ. ಆದ್ದರಿಂದ ಸರ್ಕಾರದವರು ಉತ್ಪನ್ನವನ್ನು ಜಾಸ್ತಿ ಮಾಡುವುದೊಂದೇ ಈಗಿರುವ ವಿಧಾನ. ಅಂದಮಾತ್ರಕ್ಕೆ ಇಂಥಾ ಉಗ್ರ ಶಿಕ್ಷೆಗಳನ್ನು ಕೊಡಕೂಡದೆಂದು ಹೇಳುವುದಿಲ್ಲ. ಉಗ್ರ ಶಿಕ್ಷೆಯನ್ನು ಕೊಡಬೇಕು. ಆದರೂ ಕತ್ತೆಗಳ ಮೇಲೆ ಮೆರವಣಿಗೆ ಮಾಡಿಸಬೇಕೆಂಬದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ, ನಾವು ಹಾಗೊಂದು ವೇಳೆ ಮಾಡಿದೆವೆಂದರೆ, ಇಂಥಾ ಜನರು ಕತ್ತೆಗಳ ಮೇಲೆ ಹೋಗುವುದನ್ನೇ ಒಂದು ಅಭ್ಯಾಸ ಮಾಡಿಕೊಂಡುಬಿಟ್ಟರೆಂದರೆ ನಮ್ಮ ಶಿಕ್ಷೆ ಶಿಕ್ಷೆಯಾಗಿ ಪರಿಣಮಿಸುವುದಿಲ್ಲ. ಆದ್ದರಿಂದ ಇಂಥ ಕಾನೂನಿನಿಂದ ಪ್ರಯೋಜನವಿಲ್ಲ. ಈಗಿರುವ ಕಾನೂನಿನಂತೆಯೇ ಉಗ್ರ ಶಿಕ್ಷೆ ಕೊಡಲು ಏರ್ಪಾಡುಮಾಡಬೇಕು' ಮತ್ತು ಸಾಮಾನುಗಳನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ತಯಾರಿಸಲು ವ್ಯವಸ್ಥೆ ಮಾಡಬೇಕು ಎಂದು ಹೇಳಿ ಈ ನಿರ್ಣಯವನ್ನೂ ಮತ್ತು ತಿದ್ದುಪಡಿಯನ್ನೂ ನಾನು ಸಮರ್ಥಿಸುತ್ತೇನೆ.

ಶ್ರೀ ಎಚ್. ಎಂ. ಚೆನ್ನಬಸಪ್ಪನವರು (ಮೈಸೂರು ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ಬ್ಲಾಕ್ ಮಾರ್ಕೆಟ್ ಎನ್ನುವುದು ಈಗ ಸುಮಾರು ಐದಾರು ವರ್ಷಗಳಿಂದ ಪ್ರಾರಂಭವಾಗಿದೆ. ಇದನ್ನು ತಪ್ಪಿಸಲು ಈಗ ಹೊಸದಾಗಿ ಕಾನೂನುಗಳು ವಗೈರೆ ಮಾಡಬೇಕೆಂದು ಸೂಚಿಸಿರುವುದನ್ನು ನೋಡಿದರೆ ಇದು ಇನ್ನೂ ಕೆಲವು ಕಾಲ ನಮ್ಮ ದೇಶದಲ್ಲಿ ಇರಲಿ ಎಂದು ಅಭಿಪ್ರಾಯ ಪಟ್ಟಿರುವ ಹಾಗೆ ಕಾಣುತ್ತದೆ. ಈ ಕಾಳಸಂತೆಯನ್ನು ಕೊನೆಗಾಣಿಸಬೇಕಾದರೆ ಬರೀ ಶಿಕ್ಷೆಯಿಂದ ಆಗುವುದಿಲ್ಲ. 'ಬ್ಲಾಕ್ ಮಾರ್ಕೆಟ್' ಎಂಬ ಪದದ ಅರ್ಥ 'ಕತ್ತಲೆ ವ್ಯಾಪಾರ. ಸರ್ಕಾರದವರು ಒಂದು ಗೊತ್ತಾದ ಬೆಲೆಯನ್ನು ಗೊತ್ತುಮಾಡಿ ಆಜ್ಞೆಗೆ ವಿರೋಧವಾಗಿ ಯಾರೂ ಮಾರಕೂಡದೆಂದು ಹೇಳಿದ ಮೇಲೆ. ಹಾಗೆ ವಿರೋಧವಾಗಿ ಮಾರುವವರಿಗೆ ಬ್ಲಾಕ್ ಮಾರ್ಕೆಟ್ ಮಾಡುತ್ತಾರೆಂದು ಹೇಳುತ್ತಾರೆ. ಮನುಷ್ಯನ ಸಾಮಾನ್ಯ ಸ್ವಭಾವವೇನೆಂದರೆ ಎಲ್ಲಿಯವರೆಗೆ ಹೆಚ್ಚಿಗೆ ಸಂಪಾದನೆ ಮಾಡುವುದಕ್ಕೆ ಸಾಧ್ಯವಿರುತ್ತದೋ ಅಲ್ಲಿಯವರೆಗೂ ಹೆಚ್ಚಿಗೆ ಸಂಪಾದನೆ ಮಾಡಲು ಪ್ರಯತ್ನ ಮಾಡುತ್ತಾನೆ. Law of supply and demand ಆಧಾರದ ಮೇಲೆ ಪದಾರ್ಥಗಳ ಧಾರಣೆ ನಿಲ್ಲುತ್ತದೆಂದು ಎಲ್ಲರಿಗೂ ಗೊತ್ತು. ಆದ್ದರಿಂದ ಸಾರ್ವಜನಿಕರು ಸಂತೆ ಸಾರಿಕೆಗಳಲ್ಲಿ ಸುಲಭವಾಗಿ ಕೊಂಡುಕೊಳ್ಳುವ ಪರಿಸ್ಥಿತಿ ಬರುವವರೆಗೂ ಈ ಬ್ಲಾಕ್ ಮಾರ್ಕೆಟ್ಟನ್ನು ತಪ್ಪಿಸುವುದಕ್ಕೆ ಸಾಧ್ಯವಿಲ್ಲ, ಹೀಗಿರುವಲ್ಲಿ ಇದಕ್ಕೆ ಹೊಸದಾಗಿ ಕಾನೂನು ಮಾಡಿ ನಿಲ್ಲಿಸುವುದು ಖಂಡಿತ ಕಷ್ಟದ ಮಾತು. ಏನಿದ್ದರೂ ಇದಕ್ಕೆ ತಕ್ಕ ವಾತಾವರಣ ಕಲ್ಪನೆ ಮಾಡಬೇಕು ಅದು ಯಾವುದೆಂದರೆ, ಕತ್ತಲೆ ವ್ಯಾಪಾರಕ್ಕೇ ಅವಕಾಶವೇ ಇಲ್ಲದಂತೆ ಮಾಡುವುದು. ಹೆಚ್ಚಿಗೆ ದವಸ ಧಾನ್ಯಗಳು ದೇಶದಲ್ಲಿ ಒದಗಿ ಸುಲಭ ದರದಲ್ಲಿ ಪ್ರಜೆಗಳಿಗೆ ಸಿಕ್ಕುವಂತಾದರೆ ಕಾಳಸಂತೆ ತಾನೇ ನಿಂತು ಹೋಗುತ್ತದೆ. ಸರ್ಕಾರದವರು ಹತೋಟಿ ಆಜ್ಞೆಗಳನ್ನು ಪ್ರಾರಂಭ ಮಾಡಿದಾಗಿನಿಂದ ಇದು ಪ್ರಾರಂಭವಾಯಿತು. ಎಲ್ಲಿಯವರೆಗೆ ಈ ಹತೋಟಿಗಳಿರುತ್ತವೆಯೋ ಅಲ್ಲಿಯವರೆಗೂ ಇದೂ ಇರುತ್ತದೆ. ಉಗ್ರವಾದ ಶಿಕ್ಷೆಗಳನ್ನು ಮಾಡುತ್ತೇವೆಂದು ಹೇಳಿದರೆ, ಈ ಕಾಳಸಂತೆಕೋರರು ಅವನ್ನೂ ತಪ್ಪಿಸಿಕೊಳ್ಳುವುದಕ್ಕೆ ಯೋಚನೆ ಮಾಡುತ್ತಾರೆ. ಲಂಚರುಷುವತ್ತುಗಳನ್ನು ಸಂಪೂರ್ಣವಾಗಿ ತಪ್ಪಿಸುವುದಕ್ಕೆ ಸಾಧ್ಯವೇ ಇಲ್ಲವೆಂದು ಹೇಳುವಂತೆ ಇದನ್ನೂ ಸಹ ತಪ್ಪಿಸುವುದು ಕಷ್ಟ ಸಾಧ್ಯ ಆದ್ದರಿಂದ ಜನರ ಮನೋಭಾವವನ್ನು ಬದಲಾವಣೆ ಮಾಡುವ ವಾತಾವರಣವನ್ನು ಕಲ್ಪನೆ ಮಾಡಬೇಕು. ಅದು ಬಿಟ್ಟು ಈಗ ಅವರು ಮಾಡಿರುವ ಸಲಹೆಯಿಂದರೇ ಬ್ಲಾಕ್ ಮಾರ್ಕೆಟ್ ನಿಲ್ಲುವುದಿಲ್ಲ ಸ್ವಲ್ಪ ಕಡಿಮೆ ಮಾಡುವುದಕ್ಕೆ ಮಾತ್ರ ಸಾಧ್ಯ, ಆದ್ದರಿಂದ ಸರ್ಕಾರದವರಿಗೆ ನನ್ನ ಸಲಹೆ ಇಷ್ಟೆ. ದೇಶದಲ್ಲಿ ಬ್ಲಾಕ್ ಮಾರ್ಕೆಟ್ ಎಂಬ ಹೆಸರೇ ಇರದಂತೆ ಮಾಡಬೇಕು. ಕಂಟ್ರೋಲ್ ಆಜ್ಞೆಗಳೆಲ್ಲಾ ತಕ್ಷಣ ರದ್ದಾದರೆ ಮಾತ್ರ ಸಾಧ್ಯ. ತಾತ್ಕಾಲಿಕವಾಗಿ ಈ ನಿರ್ಣಯದಲ್ಲಿನ ಸಲಹೆಯನ್ನು ಒಪ್ಪಿಕೊಳ್ಳುವುದರಲ್ಲೇನೂ ಅಡ್ಡಿಯಿಲ್ಲ. ಉಗ್ರವಾದ ಶಿಕ್ಷೆಯಾಗುತ್ತದೆಂಬ ಭಯವಿದ್ದರೇನೇ ಸಾಲದು. ಈಗಿರತಕ್ಕ ಕಾನೂನುಗಳನ್ನೇ ಸರಿಯಾದ ರೀತಿಯಲ್ಲಿ ಜಾರಿಗೆ ಕೊಟ್ಟರೆ ಎಷ್ಟೋ ಉತ್ತಮ. 1943ನೆಯ ಇಸವಿಯಿಂದ ಸರ್ಕಾರದವರು ಬ್ಲಾಕ್ ಮಾರ್ಕೆಟ್ ಮಾಡಿದವರಿಗೆ ಎಷ್ಟು [illegible] ಶಿಕ್ಷೆ ಮಾಡಿದ್ದಾರೆಂಬುದನ್ನು ನೋಡುತ್ತಿದ್ದೇನೆ. 10–15 ಸಾವಿರ ರೂಪಾಯಿಗಳ ಸಂಪಾದನೆ ಮಾಡಿಕೊಂಡಿರುವವನಿಗೆ ದೊಡ್ಡದಾಗಿ ಹಾಕಿರುವ ಜುಲ್ಮಾನೆ ಅಂದರೆ 5—10 ರೂಪಾಯಿ ! ! ಉಗ್ರವಾದ ಶಿಕ್ಷೆಯನ್ನು ಯಾರ ಮೇಲೂ ತೆಗೆದುಕೊಂಡಿಲ್ಲವೆಂದೇ ನನ್ನ ಅನುಭವದ ಮಾತು ಸರ್ಕಾರದ ಕೆಲವು ಉನ್ನತಾಧಿಕಾರಿಗಳು ತಕ್ಸೀರು ಮಾಡಿರುವುದನ್ನು ಪ್ರಪಂಚಕ್ಕೆ ಕಾಣುವಂತೆ ತೋರಿಸಿಕೊಟ್ಟಿದ್ದೇನೆ. ಅಂಥವರ ಮೇಲೂ ಸಹ ಸರ್ವೇಸಾಧಾರಣವಾಗಿ ಅಲ್ಪಸ್ವಲ್ಪ ಜುಲ್ಮಾನೆ ಹಾಕಿ ಬಿಟ್ಟುಬಿಟ್ಟಿದ್ದಾರೆ. ಇದರಿಂದ ನಮ್ಮ ದೇಶದಲ್ಲಿ ಬ್ಲಾಕ್ ಮಾರ್ಕೆಟ್ ಎಂಬುದನ್ನು ತಡೆಯುವುದಕ್ಕೆ ಸಾಧ್ಯವೇ ಎಂಬ ಅನುಮಾನ ಉಂಟಾಗಿದೆ ಆದರಿಂದ ಕೇವಲ ಹೊಸ ಹೊಸ ಕಾನೂನುಗಳನ್ನು ಮಾಡುವುದರಿಂದ ಇದು ನಿಲ್ಲುತ್ತದೆಂದು ನಾನು ಹೇಳಲಾರೆ. ಇರತಕ್ಕ ಕಾನೂನುಗಳನ್ನೇ ಸರಿಯಾಗಿ ಉಪಯೋಗಿಸಿ ದಂಡಿಸಿದರೆ ಸಾಕು. ನಮ್ಮ ಮಾನ್ಯ ಸ್ನೇಹಿತರು ಇಂಥ ಉಗ್ರವಾದ ಶಿಕ್ಷೆ ಇರಬೇಕೆಂದು ಹೇಳಿದ್ದಾರೆ. ಒಂದು ವೇಳೆ ಇದ್ದರೂ ಅಭ್ಯಂತರವಿಲ್ಲ. ಆದರೆ ಔಚಿತ್ಯ ಬಹಳ ಚೆನ್ನಾಗಿದೆ ಎಲ್ಲಿಯವರೆಗೆ ಕತ್ತೆಯ ಸವಾರಿಯುನಾಚಿಗೆಗೇಡಾದ್ದೆಂದು ಜನರು ತಿಳಿದಿರುತ್ತಾರೆಯೋ ಅಲ್ಲಿಯವರೆಗಾದರೂ ಅದು ಉಗ್ರವಾದ ಶಿಕ್ಷೆಯಾಗಿರುತ್ತದೆ. ಶ್ರೀಮಾನ್ ಮಲ್ಲಿಕಾರ್ಜುನಪ್ಪನವರು ಹೇಳಿದ ಹಾಗೆ ಜನರು ಅದಕ್ಕೂ ಹೊಂದಿಕೊಂಡರೆ ಆಗ್ಗೆ ಅದರಿಂದಲೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಲಂಚರುಷುವತ್ತು, ಬ್ಲಾಕ್ ಮಾರ್ಕೆಟ್ ಇವುಗಳನ್ನು ನಿರ್ಮೂಲ ಮಾಡುವುದಕ್ಕೆ ಅನುಕೂಲವಾದ ವಾತಾವರಣವನ್ನು ಸರ್ಕಾರದವರು ಕಲ್ಪನೆ ಮಾಡಬೇಕಾದ್ದು ಅವರ ಆದ್ಯ ಕರ್ತವ್ಯ. ಸರ್ಕಾರದವರು ನಮ್ಮ ಮಿತ್ರರು ತಂದಿರುವ ಸಲಹೆಯನ್ನು ಸಂಪೂರ್ಣವಾಗಿ ಒಪ್ಪಿಕೊಂಡು. ಬರೀ ಕಾನೂನು ಮಾಡಿದ್ದರಿಂದಲೇ ತೃಪ್ತರಾಗದೆ ಮಾಡಿದ್ದನ್ನು ಸರಿಯಾಗಿ ಜಾರಿಗೆ ತರಬೇಕು. ಸಣ್ಣ ಪುಟ್ಟ ತಕ್ಸೀರುಗಳನ್ನು ಹಿಡಿದು ಜುಲ್ಮಾನೆ ಹಾಕುವುದಲ್ಲ! ಸರ್ಕಾರದವರಿಗೆ ಕಣ್ಣಿಗೆ ಮಣ್ಣೆರಚುವ ದೊಡ್ಡ ದೊಡ್ಡವರು ನೂರಾರು ಜನರಿದ್ದಾರೆ.

Sri K. CHENGALARAYA REDDY (Leader of the House).—Will the Hon'ble Member please give us a list of the "ನೂರಾರು ಜನ" whom he is referring to?

Sri T. MARIAPPA (Home Minister).—Hon'ble Member also referred to ಉನ್ನ

ತಾಧಿಕಾರಿಗಳು. It is much better he gives details.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಎಷ್ಟೋ ಸಾರಿ ಇದನ್ನು ನ್ಯಾಯವಿಧಾಯಕ ಸಭೆಯಲ್ಲಿ ಹೇಳಿ ಹೇಳಿ ನನಗೆ ಬೇಜಾರಾಗಿದೆ. ಇದಕ್ಕೆ ಉದಾಹರಣೆಗಳು ಬೇಕಾದಷ್ಟಿವೆ. ಸರಿಯಾದ ಕಾರ್ಯಕ್ರಮ ತೆಗೆದುಕೊಂಡು ತಪ್ಪಿತಸ್ಥರಿಗೆ ಉಗ್ರ ಶಿಕ್ಷೆ ಮಾಡಿಲ್ಲವೆಂಬುದೇ ನನ್ನ ಆಕ್ಷೇಪಣೆ ಆವಶ್ಯಕತೆ ಕಂಡಾಗ ಮತ್ತು ಸರ್ಕಾರದವರು ಕೇಳಿದಾಗ ನಿರ್ದಾಕ್ಷಿಣ್ಯವಾಗಿ ಹೇಳುತ್ತೇನೆ. ಪರಿಸ್ಥಿತಿಯನ್ನು ಗಮನಿಸಿ ಉಗ್ರ ಕಾರ್ಯಕ್ರಮ ಕೈಕೊಳ್ಳಬೇಕೆಂಬುದೇ ನನ್ನ ಸಲಹೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯ ಜಿಲ್ಲೆ) —ಶ್ರೀ ಎಂ. ವಿ. ಕೃಷ್ಣಪ್ಪನವರು ತಂದಿರುವ ನಿರ್ಣಯವು ಸ್ವಾರಸ್ಯವಾದ ವಿಷಯಗಳಿಗೆ ಎಡೆ ಕೊಟ್ಟಿದೆ. ಅವರ ನಿರ್ಣಯದ ಒಂದು ವಿಶೇಷ ಸ್ವರೂಪವೇನೆಂದರೆ ಶಿಕ್ಷೆ ಮಾಡುವ ವಿಧಾನವನ್ನು ವಿವರಿಸಿರುವುದು. ಇದುವರೆಗೂ ಕಾಳಸಂತೆ ಮಾಡುವವರಿಗೆ ಶಿಕ್ಷೆ ಮಾಡಬೇಕೆಂಬ ಕಾನೂನು ಇದ್ದೇ ಇದೆ. ಆದರೆ ಅಂಥ ಕಾನೂನಿನಿಂದ ಏನೂ ಪ್ರಯೋಜನವಾಗಿಲ್ಲ. ಆದ್ದರಿಂದ ಹೊಸದಾಗಿ ಕೆಲವು ಶಿಕ್ಷೆಗಳನ್ನು ವಿಧಿಸಿದರೆ ತಪ್ಪಿತಸ್ಥರು ನಾಚಿಕೆಗೆ ಈಡಾಗಿ ಬಹುಶಃ ಕಾಳಸಂತೆ ನಿಲ್ಲಬಹುದೆಂದು ಈ ನಿರ್ಣಯ ತಂದಿದ್ದಾರೆ. ಇದನ್ನು ಚರ್ಚೆ ಮಾಡುತ್ತಿರುವಾಗ ಶ್ರೀ ಟಿ. ಮಾದಯ್ಯಗೌಡರು ಒಂದು ತಿದ್ದುಪಡಿಯನ್ನು ತಂದು ಬಹಿರಂಗವಾಗಿ ಛಡಿ ಶಿಕ್ಷೆ ಮಾಡುವುದು ಮತ್ತು ಕತ್ತೆಯ ಮೇಲೆ ಮೆರವಣಿಗೆ ಮಾಡುವುದು, ವಗೈರೆ ಎಂದು ಸೂಚಿಸಿರುವುದನ್ನು ತೆಗೆದು ಹಾಕಿದರೆ ಬಾಕಿ ನಿರ್ಣಯವನ್ನು ಅಂಗೀಕಾರ ಮಾಡಬಹುದೆಂದು ಹೇಳಿದ್ದಾರೆ. ಆದರೆ ಈ ಎರಡುವಿಧವಾದ ಶಿಕ್ಷೆಗಳನ್ನು ಕೊಡಬೇಕೆಂಬ ಅಂಶವನ್ನು ತೆಗೆದು ಹಾಕಿದರೆ ಆಮೇಲೆ ಈ ನಿರ್ಣಯದ ಆವಶ್ಯಕತೆಯೇ ಕಂಡುಬರುವುದಿಲ್ಲ. ಏಕೆಂದರೆ ಈಗಾಗಲೇ ಕಾಳಸಂತೆ ಮಾಡುವವರಿಗೆ ಶಿಕ್ಷೆ ಮಾಡಬೇಕೆಂಬ ಕಾನೂನಿದ್ದರೂ, ಶಿಕ್ಷೆ ಮಾಡುತ್ತಿದ್ದರೂ, ನಮ್ಮ ಮಿತ್ರರು ಹೇಳಿದ ಹಾಗೆ. ಕಾಳಸಂತೆಯಲ್ಲಿ ಸಾವಿರಾರು ರೂಪಾಯಿಗಳನ್ನು ಸಂಪಾದನೆ ಮಾಡಿದವರು ದಂಡ ಕೊಟ್ಟು ಪುನಃ ಧೈರ್ಯದಿಂದ ಕಾಳಸಂತೆ ವ್ಯಾಪಾರ ಮಾಡುವುದಕ್ಕೆ ಅವಕಾಶವಾಗಿದೆ. ಕಾಳಸಂತೆ ವ್ಯಾಪಾರ ಮಾಡುವವರಿಗೆ ಕೇವಲ ಜುಲ್ಮಾನೆ ಹಾಕಬೇಕೆಂದು ಈಗ ಕಾನೂನಿದೆ. ಆದರೆ ಜೈಲು ಶಿಕ್ಷೆ ಕೊಡಬೇಕೆಂದು ಕಾನೂನು ಇಲ್ಲದಿರುವುದೇ ಕಾಳಸಂತೆ ವ್ಯಾಪಾರ ಜಾಸ್ತಿಯಾಗಿರುವುದಕ್ಕೆ ಕಾರಣವೆಂದು ಹೇಳಬಹುದು. ಆದ್ದರಿಂದ ಇದನ್ನು ಸ್ವಲ್ಪ ಬದಲಾಯಿಸಿ ಜುಲ್ಮಾನೆ ಅಥವಾ ಸಜಾ ಅಥವಾ ಎರಡೂ ಇರಬೇಕೆಂದು ಬೇರೆ ವಿಧವಾಗಿ ಅಪರಾಧಿಗಳಿಗೆ ಶಿಕ್ಷೆ ಕೊಡುವ ಹಾಗೆ ಮಾರ್ಪಡಿಸಿದರೆ ಆಗ ಬಹುಶಃ ಈ ವ್ಯಾಪಾರದಲ್ಲಿ ತೊಡಗಿರುವವರಿಗೆ ಹೆಚ್ಚು ಶಿಕ್ಷೆ ವಿಧಿಸಲು ಕೋರ್ಟುಗಳಿಗೆ ಅವಕಾಶವಾಗಬಹುದೆಂದು ಒಂದು ಅಭಿಪ್ರಾಯವಿದೆ.

ಇನ್ನೊಂದು ಅಂಶ. ಕಾನೂನು ಮಾಡುವುದು ಶಾಸನ ಸಭೆಯ ಕರ್ತವ್ಯ, ಜಾರಿ ಮಾಡುವುದು ಸರ್ಕಾರದ ಕರ್ತವ್ಯ, ಆದರೆ ಶಿಕ್ಷೆ ಮಾಡುವುದು ಕೋರ್ಟುಗಳ ಕರ್ತವ್ಯ. ಅಲ್ಲಿ ಬರೀ ಸಾಕ್ಷಿ ರುಜುವಾತಿನ ಮೇಲೆ ಶಿಕ್ಷೆ ಹೆಚ್ಚು ಕಡಮೆಯಾಗುತ್ತದೆ. ಆದ್ದರಿಂದ ಅನೇಕ ಸಂದರ್ಭಗಳಲ್ಲಿ ತಪ್ಪಿತಸ್ಥರು ತಪ್ಪಿಸಿಕೊಳ್ಳುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಉದಾಹರಣೆಗೆ ಈಚೆಗೆ ಅಕ್ಕಿ ಅಭಾವವಿರುವುದರಿಂದ ಹೋಟಲುಗಳಲ್ಲಿ ಅಕ್ಕಿಯಿಂದ ಇಡ್ಲಿ, ದೋಸೆ ಮಾಡಿ ಮಾರಾಟ ಮಾಡಕೂಡದೆಂದು ಕಾನೂನು ಮಾಡಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಷಯ ನನ್ನ ಗಮನಕ್ಕೆ ಬಂದಿದೆ, ಒಂದು ಹೋಟಲನಲ್ಲಿ ಇಡ್ಲಿ ಮಾಡಿದ್ದರ ಮೇಲೆ ಕೇಸು ಹಾಕಿ ವಿಚಾರಣೆಯಾಯಿತು. ಆಗ ಇಡ್ಲಿ ಮಾಡುವುದು ಕೇವಲ ಅಕ್ಕಿಯಿಂದ ಮಾತ್ರವಲ್ಲ, ಇತರ ವಿಧವಾದ ಸಾಮಾನುಗಳಿಂದಲೂ ಮಾಡಬಹುದೆಂದು ಹೊರಪಟ್ಟಿತು. ಆಗ ಅಕ್ಕಿಯಿಂದಲೇ ಮಾಡಿದ್ದಾರೆಂಬುದನ್ನು ರುಜುವಾತು ಮಾಡುವುದು ಕಷ್ಟವಾಗಿ ಅಪರಾಧಿಗಳಿಗೆ ಬಿಡುಗಡೆಯಾಯಿತು. ಹೀಗೆ ಕಾನೂನನ್ನು ಎಷ್ಟೇ ಕ್ರೂರವಾಗಿ ಮಾಡಿದರೂ ಶ್ರೀ ಚೆನ್ನಬಸಪ್ಪನವರು ಹೇಳಿದ ಹಾಗೆ ಅದರಿಂದ ತಪ್ಪಿಸಿಕೊಂಡು ಹೋಗುವುದಕ್ಕೆ ಜನರು ದಾರಿ ಹುಡುಕುತ್ತಾರೆ. ಆದ್ದರಿಂದ ಜನರ ಮನೋಭಾವ ಬದಲಾವಣೆಯಾಗಬೇಕಾದ್ದು ಅತ್ಯಗತ್ಯವಾಗಿದೆ.

ದೇಶದಲ್ಲಿ ಜನರಿಗೆ ಬೇಕಾದ ದವಸ ಧಾನ್ಯಗಳ ಅಭಾವ ನಿಲ್ಲುವವರೆಗೆ ಕಾಳಸಂತೆ ನಿಲ್ಲುವುದಿಲ್ಲವೆಂದು ಶ್ರೀ ಚೆನ್ನಬಸಪ್ಪನವರು ಮತ್ತು ಶ್ರೀ ಮಲ್ಲಿಕಾರ್ಜುನಪ್ಪನವರು ಹೇಳಿದರು. ಈ ಅಭಾವ ಹೋಗಬೇಕಾದರೆ ತಕ್ಕಷ್ಟು ದವಸ ಧಾನ್ಯ ಬೆಳೆಯುವುದಕ್ಕೆ ಪ್ರಯತ್ನ ಮಾಡಬೇಕೆಂದೂ ಹೇಳಿದರು. ಈ ಸಲಹೆಯೇನೋ ಸಾಧುವಾಗಿ ಕಾಣುತ್ತದೆ. ಆದರೆ ಒಂದೇ ದಿವಸದಲ್ಲಿ ಅದು ಆಗುವುದಿಲ್ಲ. ಸರ್ಕಾರದವರೂ, ಜನರೂ ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಕೆಲವು ಕಾಲವಲ್ಲ. ಕೆಲವು ವರ್ಷಗಳೇ ಆಗುತ್ತವೆ. ದೇಶದ ಜನರಿಗೆ ಬೇಕಾದ ಎಲ್ಲಾ ಸಾಮಾನು ಮತ್ತು ಅಗತ್ಯವಾದ ಪ್ರಮಾಣದ ದವಸಧಾನ್ಯ ಉತ್ಪತ್ತಿಯಾಗಬೇಕಾದರೆ ಒಂದೆರಡು ವರ್ಷದಲ್ಲಾಗುವುದಿಲ್ಲ. ಅಂದಮೇಲೆ ಅಂಥ ಕಾಲ ಬರುವವರೆಗೆ ತಪ್ಪು ಮಾಡುವವರಿಗೆ ಶಿಕ್ಷೆಯಿಲ್ಲದೆ ಹೀಗೆಯೇ ನಡೆದುಕೊಂಡು ಹೋಗಲೆಂದು ಯಾರೂ ಹೇಳಲು ಸಾಧ್ಯವಿಲ್ಲ ಆದ್ದರಿಂದ ಸತ್ಸಂಪ್ರದಾಯವನ್ನು ಸ್ಥಾಪನೆ ಮಾಡುವುದಕ್ಕೂ, ದೇಶದಲ್ಲಿರುವವರಿಗೆ ಭಯವನ್ನುಂಟು ಮಾಡುವುದಕ್ಕೂ ಅಗತ್ಯವಾದ ಕಾನೂನು ಆಗಬೇಕು. ಅದನ್ನೇ ಈ ನಿರ್ಣಯದಲ್ಲಿ ಸೂಚಿಸಿದ್ದಾರೆ. ಆದರೆ ಶ್ರೀ ಕೃಷ್ಣಪ್ಪನವರು ಸೂಚಿಸಿರುವ ಶಿಕ್ಷೆ ವಿಧಿಸುವ ಎರಡು ವಿಧಾನವು ಸರಿಯಾಗಿ ಕಾಣದಿದ್ದರೆ ಬೇಕಾದರೆ ಅವನ್ನು ಬಿಟ್ಟು ಈಗಿರುವ ಕಾನೂನಿನಲ್ಲೇ ಸ್ವಲ್ಪ ತಿದ್ದುಪಡಿ ಮಾಡಿ, ಶಿಕ್ಷೆ ಅಂದರೆ ಜುಲ್ಮಾನೆ ಅಥವಾ ಸಜಾ ರೂಪವಾಗಿ ಅಥವಾ ಎರಡೂ ಸೇರಿ ಆಗಬೇಕೆಂದು ಮಾಡಬೇಕು. ಕೋರ್ಟುಗಳವರು ಈಗ ನಡೆದಿರುವ ಚರ್ಚೆಯನ್ನು ಗಮನಿಸಿ ಉಗ್ರ ಶಿಕ್ಷೆಯನ್ನು ಮಾಡಬೇಕು. ಹಾಗೆ ಮಾಡಿ ದೇಶದ ಪರಿಸ್ಥಿತಿಯನ್ನು ಉತ್ತಮಗೊಳಿಸಿ, ಕಾಳಸಂತೆಯಿಂದ ಜನರಿಗಿರುವ ತೊಂದರೆಯನ್ನು ತಪ್ಪಿಸುವುದು ಅಗತ್ಯ. ಉಗ್ರ ಶಿಕ್ಷೆಯನ್ನು ವಿಧಿಸುವುದರ ಮೂಲಕ ಬಹಳ ಮಟ್ಟಿಗೆ ಈ ಕೆಟ್ಟ ಪದ್ಧತಿಯನ್ನು ತಪ್ಪಿಸುವುದಕ್ಕೆ ಅವಕಾಶವಿದೆ. ಆದ್ದರಿಂದ ಈ ನಿರ್ಣಯದಲ್ಲಿರುವ ಅಂಶವನ್ನು ಪುಷ್ಟೀಕರಿಸುತ್ತಾ ಇದು ಸ್ವಾಗತಾರ್ಹವಾಗಿದೆಯೆಂದು ಅಭಿಪ್ರಾಯಪಡುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಈ ನಿರ್ಣಯವನ್ನು ನಮ್ಮ ಸ್ನೇಹಿತರು ಒಳ್ಳೆಯ ಸದುದ್ದೇಶದಿಂದ ತಂದಿದ್ದಾರೆ. ಒಟ್ಟಿನಲ್ಲಿ ಇತ್ತೀಚೆಗೆ ಕಾಳಸಂತೆ ಬಹಳ ಜಾಸ್ತಿಯಾಗಿದೆಯೆಂದು ಅವರು ಹೇಳಿದರು. ಇದು ವಾಸ್ತವವಾದ ಸಂಗತಿಯೆಂಬುದು ಎಲ್ಲರಿಗೂ ತಿಳಿದೇ ಇದೆ ಇದು ನಿಜವಾಗಿಯೂ ಮನುಷ್ಯನು ಕಷ್ಟಪಡದೆ ದುಡ್ಡು ಸಂಪಾದನೆ ಮಾಡುವ ಬಾಬು. ಆದ್ದರಿಂದ ಈ ಕಸಬನ್ನು ಹಿಡಿಯುವುದು ಮನುಷ್ಯನ ಸ್ವಭಾವ. ಆದರೆ ಈಗ ನಿರ್ಣಯದಲ್ಲಿ ಸೂಚಿಸಿರುವಂತೆ ಛಡಿ ಶಿಕ್ಷೆ, ಕತ್ತೆಯಮೇಲೆ ಮೆರವ

ಣಿಗೆ ವಗೈರೆ ಶಿಕ್ಷೆಗಳು ಅಗತ್ಯವೇ ಎಂದು ಯೋಚನೆ ಮಾಡಿದರೆ ಸೂಚಕರು ಹೇಳುವಂತೆ ಇಂಥ ಉಗ್ರ ಶಿಕ್ಷೆ ವಿಧಿಸದಿರುವುದರಿಂದಲೇ ಕಾಳಸಂತೆ ಜಾಸ್ತಿಯಾಗಿದೆಯೆಂದು ಹೇಳಬಹುದು. ನಾನು ತಿಳಿದುಕೊಂಡಿರುವಂತೆ ನಿಜವಾಗಿಯೂ ಕಾಳಸಂತೆ ವ್ಯಾಪಾರ ಮಾಡುವವರಲ್ಲಿ ಶೇಕಡ ಒಬ್ಬರಿಗೂ ಕೂಡ ಶಿಕ್ಷೆಯಾಗಿಲ್ಲವೆಂದು ಹೇಳಬಹುದು. ಈ ವ್ಯಾಪಾರ ಮಾಡುವವರು ಬೇಕಾದ ಹಾಗೆ ಶ್ರಮವಿಲ್ಲದೆ ಹಣ ಸಂಪಾದನೆಮಾಡಿ ಯಾರ್ಯಾರಲ್ಲಿ ಯಾವರೀತಿ ನಡೆದುಕೊಂಡು ಬೆಂಬಲ ಪಡೆಯಬೇಕು, ಶಿಫಾರ್ಸು ಪಡೆಯಬೇಕು ಎಂಬುದನ್ನು ಚೆನ್ನಾಗಿ ತಿಳಿದು, ಅದರಂತೆ ಮಾಡಿ ಶಿಕ್ಷೆಯಿಂದ ತಪ್ಪಿಸಿಕೊಂಡು ತಮ್ಮ ಸ್ವಾರ್ಥವನ್ನು ಸಾಧಿಸಿಕೊಳ್ಳುತ್ತಿದ್ದಾರೆ. ಉದಾಹರಣೆಗೆ, ಕೇವಲ ಹೊಟ್ಟೆಪಾಡಿಗಾಗಿ ಹತ್ತು ಸೇರು ದವಸವನ್ನು ತೆಗೆದುಕೊಂಡು ಹೋಗುವ ಬಡಬಗ್ಗರು ಮಾತ್ರ ಸಿಕ್ಕಿ ಶಿಕ್ಷೆಗೆ ಗುರಿಯಾಗುತ್ತಿದ್ದಾರೆಯೇ ಹೊರತು, ವಾಸ್ತವವಾಗಿ ಕಾಳಸಂತೆ ವ್ಯಾಪಾರಗಾರರು ಶಿಕ್ಷೆಗೆ ಒಳಪಡುತ್ತಿಲ್ಲ. ಕಾಳಸಂತೆಗಾರರು ಹೆಚ್ಚು ಹಣ ಸಂಪಾದಿಸುವುದರಿಂದ ಲಂಚಕೊಟ್ಟು ತಪ್ಪಿಸಿಕೊಳ್ಳುತ್ತಾರೆ. ಆದ ಬಡವರಿಗೆ ಆರೀತಿ ಮಾಡಲು ಅವಕಾಶವಿಲ್ಲ. ಅಂಥ ಬಡವರಿಗೆ ಈಗ ಶಿಕ್ಷೆಯಾಗಿರಬಹುದು. ಏಕೆಂದರೆ, ಬಡಜನರು ಹೊಟ್ಟೆಪಾಡಿಗಾಗಿ ಅಲ್ಪ ಸ್ವಲ್ಪ ತೆಗೆದುಕೊಂಡು ಹೋಗುವವರು ಕಾಳಸಂತೆಯಲ್ಲಿ ಸಂಪಾದನೆ ಮಾಡುವವರು ಕೊಡುವಷ್ಟು ಹೇರಳವಾದ ಹಣವನ್ನು ಲಂಚವಾಗಿ ಕೊಟ್ಟು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಇಂತಹ ಬಡಜನರಿಗೆ ಶಿಕ್ಷೆ ಕಡಿಮೆಯಾಗುತ್ತದೆಂದು ನಾನು ನಂಬುವುದಿಲ್ಲ. ಶಿಕ್ಷೆಯನ್ನು ತಪ್ಪಿಸಿಕೊಳ್ಳುವವರಿಂದ ಹೀಗೆ ಕಾಳಸಂತೆ ವ್ಯಾಪಾರ ನಡೆಯುತ್ತದೆ. ಒಟ್ಟಿನಲ್ಲಿ ಈ ಕಾಳಸಂತೆಗೆ ಕಾರಣ, ನನ್ನ ಮಾನ್ಯ ಸ್ನೇಹಿತರು ಕೆಲವರು ಹೇಳಿದ ಹಾಗೆ, ಪದಾರ್ಥಗಳ ಚಲಾವಣೆಗೆ ಇರುವ ನಿರ್ಬಂಧ. ಇದರಿಂದ ವರ್ತಕರು ಒಂದಾಗಿ ಕೃತಕವಾದ ಒಂದು ಅಭಾವವನ್ನುಂಟು ಮಾಡಿದ್ದಾರೆ; ಇದನ್ನು ಸರ್ಕಾರಕ್ಕೆ ದೊಡ್ಡದು ಮಾಡಿ ತೋರಿಸುತ್ತಾರೆ. ಇದರಿಂದ ಸರ್ಕಾರದವರು ಹತೋಟಿ ಆಜ್ಞೆಗಳನ್ನು ಜಾರಿಗೆ ತರುತ್ತಾರೆ. ಹತೋಟಿ ಆಜ್ಞೆಗಳಿದ್ದರೇ ವರ್ತಕರಿಗೆ ಹೆಚ್ಚು ಲಾಭ. ಸಕ್ಕರೆ ಮತ್ತು ಬಟ್ಟೆಯ ವಿಚಾರದಲ್ಲಿ ಕಾಳಸಂತೆ ವ್ಯಾಪಾರಗಾರರಿಗೆ ಸರ್ಕಾರದವರೇ ರುಚಿ ತೋರಿಸಿಕೊಟ್ಟಿದ್ದಾರೆ. ಮೊದಲು ಹತೋಟಿ ತೆಗೆಯುವುದು, ಅನಂತರ ಕೃತಕವಾದ ಅಭಾವವನ್ನು ತೋರಿಸುವುದು, ಅನಂತರ ಪುನಃ ಹತೋಟಿ ಹಾಕುವುದು—ಹೀಗೆ ಮಾಡುತ್ತಿದ್ದಾರೆ. ಎಲ್ಲಿಯವರೆಗೆ vested interest ಇರುವ ವರ್ತಕರಿಗೆ ಪ್ರೋತ್ಸಾಹ ಕೊಡುತ್ತಾರೆಯೋ ಅಲ್ಲಿಯವರೆಗೆ ಈ ಅಭಾವ ತಪ್ಪುವುದಿಲ್ಲ, ಕಾಳಸಂತೆ ನಿಲ್ಲುವುದಿಲ್ಲ. ಇದು, 'ಹುಚ್ಚು ಬಿಟ್ಟ ಹೊರತು ಮದುವೆ ಆಗುವುದಿಲ್ಲ, ಮದುವೆ ಆದ ಹೊರತು ಹುಚ್ಚು ಬಿಡುವುದಿಲ್ಲ' ಎಂದು ಹೇಳುವ ಹಾಗಾಗಿದೆ. ಆದಕಾರಣ ಹತೋಟಿಗಳನ್ನು ಕಡ್ಡಾಯವಾಗಿ ತೆಗೆದುಹಾಕಬೇಕು. ಮನುಷ್ಯ ತನ್ನ ನಿಜವಾದ ಧರ್ಮವನ್ನು ತಾನೇ ತಿಳಿದುಕೊಂಡು, ತಾನೇ ಇತರರೊಡನೆ ಹೊಂದಿಕೊಂಡು ಹೋಗುವುದನ್ನು ತಿಳಿದುಕೊಳ್ಳುವಂತೆ ಅವಕಾಶ ಮಾಡಬೇಕು. ಹಾಗಿಲ್ಲದೆ ಕೃತಕ ನಿರ್ಬಂಧಗಳನ್ನು ಕಲ್ಪಿಸಿದರೆ ಆತನು ಬೇರೆ ದಾರಿಗೆ ಹೋಗಲು ತಾವೇ ಅವಕಾಶ ಕಲ್ಪಿಸಿ ಕೊಟ್ಟ ಹಾಗಾಗುತ್ತದೆ. ತಾನೇ ಬೇರೆ ಮಾರ್ಗಮಾಡಿಕೊಳ್ಳುತ್ತಾನೆ ಅಥವಾ ಬೇರೆಯವರಿಂದ ಮಾಡಿಸಿಕೊಳ್ಳುತ್ತಾನೆ. ಮುಖ್ಯವಾಗಿ ಆಹಾರ ಧಾನ್ಯಗಳ ವಿಚಾರದಲ್ಲಿ ಕಡ್ಡಾಯವಾಗಿ ಹತೋಟಿಯನ್ನು ತೆಗೆದ ಹೊರತು ಈ ಕಾಳಸಂತೆ ನಿವಾರಣೆಯಾಗುವುದಿಲ್ಲ.

ಅಧ್ಯಕ್ಷರು.—ಈ ನಿರ್ಣಯದ ವಿಚಾರದಲ್ಲಿ ಏನು ಹೇಳುತ್ತೀರಿ?

ಶ್ರೀ ಟಿ. ಹುಚ್ಚೇಗೌಡರು.—ಇದೆಲ್ಲಾ ಅದಕ್ಕೇ ಸಂಬಂಧಪಟ್ಟ ವಿಷಯಗಳು. ಹತೋಟಿಗಳನ್ನು ತೆಗೆದರೆ ಕಾಳಸಂತೆ ನಿವಾರಣೆಯಾಗುತ್ತದೆಂಬುದನ್ನು ತಿಳಿಸಲು ಹೇಳಿದೆ. ಸಣ್ಣ ಸಣ್ಣವರು ಸಿಕ್ಕಿಕೊಳ್ಳುತ್ತಾರೆಯೇ ವಿನಾ ದೊಡ್ಡವರು ಸಿಕ್ಕುವುದಿಲ್ಲ. ಮುಖ್ಯವಾಗಿ ಯಾರೇ ಆಗಲಿ, ಅವರು ತಮ್ಮ ಬಂಧುಗಳು, ಮಿತ್ರರು ಎಂದು ಸರ್ಕಾರದವರು ಬಿಟ್ಟುಬಿಡಬಾರದು. ನಿರ್ದಾಕ್ಷಿಣ್ಯವಾಗಿ ಶಿಕ್ಷೆ ಮಾಡಿದರೆ ಇದು ನಿವಾರಣೆಯಾಗುತ್ತದೆಯೇ ಹೊರತು ಸುಮ್ಮನೆ ಈಗಿರುವ ಶಿಕ್ಷೆಯನ್ನು ಕಠಿಣ ಮಾಡುವುದರಿಂದ ಪ್ರಯೋಜನವಿಲ್ಲವೆಂಬುದು ನನ್ನ ಅಭಿಪ್ರಾಯ.

*ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಸ್ವಾಮಿ, ಕಾಳಸಂತೆಯನ್ನು ಮಟ್ಟಹಾಕಬೇಕೆಂಬುದು ಈ ನಿರ್ಣಯದ ಸೂಚಕರ ಉದ್ದೇಶ. ಕ್ರೂರವಾದ ಶಿಕ್ಷೆಯನ್ನು ವಿಧಿಸಿದರೆ ಇದು ನಿಂತುಹೋಗುತ್ತದೆಂಬ ಉದ್ದೇಶದಿಂದ, ಕ್ರೂರವಾದ ಶಿಕ್ಷೆ ಯಾವುದು ಎಂಬುದನ್ನು ಅವರು ತಮ್ಮ ನಿರ್ಣಯದ ಕೊನೆಯಲ್ಲಿ ವಿವರಿಸಿದ್ದಾರೆ. ಇವರ ಉದ್ದೇಶವನ್ನು ನಾನು ಒಪ್ಪಿಕೊಳ್ಳುತ್ತೇನೆ. ಕಾಳಸಂತೆ ಸಂಪೂರ್ಣವಾಗಿ ಹೊರಟುಹೋಗಬೇಕು. ಆದರೆ ಅವರು ಹೇಳಿರುವಂತೆ ಚಾವಟಿಯಿಂದ ಹೊಡೆಯುವುದು ಮತ್ತು ಕತ್ತೆಯಮೇಲೆ ಮೆರವಣಿಗೆ ಮಾಡುವುದು—ಈ ವಿಧದ ಶಿಕ್ಷೆಯಿಂದ ಕಾಳಸಂತೆ ಹೋಗುತ್ತದೆಂಬುದನ್ನು ನಾನು ಒಪ್ಪಲಾರೆ. ಅಲ್ಲದೆ ಈಗ ನಾವು ಕಾಳಸಂತೆಯಲ್ಲಿ ವ್ಯಾಪಾರ ಮಾಡುವವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದೇವೆಯೇ ಹೊರತು, ಅಂಥವರಿಂದ ಕಾಳಸಂತೆಯಲ್ಲಿ ಕೊಂಡುಕೊಳ್ಳುವವರನ್ನು ನಮ್ಮ ಗಮನಕ್ಕೆ ತೆಗೆದುಕೊಂಡಿಲ್ಲ. ಈಗ ಲಂಚ ಕೊಡುವವನಿಗೂ ಶಿಕ್ಷೆ, ತೆಗೆದುಕೊಳ್ಳುವವನಿಗೂ ಶಿಕ್ಷೆ ಎಂದಿರುವುದರಿಂದ ಕೊಡುವುದಕ್ಕೂ ತೆಗೆದುಕೊಳ್ಳುವುದಕ್ಕೂ ಹೆದರುತ್ತಿದ್ದಾರೆ. ಆದರೆ ಇದಕ್ಕೆ ಕೆಲವು ವಿನಾಯಿತಿಗಳಿವೆ. ಶ್ರೀಮಾನ್ ಚನ್ನಬಸಪ್ಪನವರು ಹೇಳಿದಂತೆ ಪದಾರ್ಥಗಳ ಅಭಾವದಿಂದ ಹತೋಟಿ ಬಂದಿದೆ. ಅಭಾವವಿರುವವರೆಗೆ ಕಾಳಸಂತೆಯಿರುತ್ತದೆಂದು ಅವರು ಹೇಳಿದರು. ಎಲ್ಲಿಯವರೆಗೆ ಪದಾರ್ಥಗಳ ಅಭಾವವಿರುತ್ತದೆಯೋ ಅಲ್ಲಿಯವರೆಗೆ ಜನ ಕಾಳಸಂತೆಗೆ ಹೋಗಿ ಕೊಂಡುಕೊಳ್ಳುತ್ತಾರೆ. ಕೊಂಡುಕೊಳ್ಳುವವರು ಸರ್ಕಾರಕ್ಕೆ ಇಂತಹ ಕಡೆ ಕೊಂಡುಕೊಂಡೆವೆಂದು ತಿಳಿಸಿದರೆ, ಪೋಲೀಸಿನವರೊಡನೆ ಜನರೂ ಸಹಕರಿಸಿದರೆ ಅಂತಹವರನ್ನು ಪೋಲೀಸಿನವರು ಬಲಿಹಾಕುತ್ತಾರೆ. ಆದರೆ ಕೊಂಡುಕೊಂಡ ಜನರೂ ಖಂಡಿತವಾಗಿ ಹೇಳುವುದಿಲ್ಲ. ಏಕೆಂದರೆ, ಒಂದು ಸಾರಿ ಹೇಳಿದರೆ ಮುಂದೆ ತಮಗೆ ಪದಾರ್ಥಗಳೇ ಸಿಕ್ಕುವುದಿಲ್ಲವೆಂಬ ಭಯ ಅವರಿಗಿರುತ್ತದೆ. ಸರ್ಕಾರದವರು ಕೊಡುವುದು ಒಂಬತ್ತು ಔನ್ಸ್ ಆಹಾರ ಮಾತ್ರ, ಆದ್ದರಿಂದ ಕಾಳಸಂತೆಯಲ್ಲಿ ಕೊಳ್ಳುತ್ತೇವೆಂದು ಹೇಳುತ್ತಾರೆ. ಆದಕಾರಣ ನನ್ನ ಅಭಿಪ್ರಾಯದಲ್ಲಿ ಕಾಳಸಂತೆಯಲ್ಲಿ ಮಾರುವವನಿಗೆ ಎಷ್ಟು ಶಿಕ್ಷೆ ಮಾಡಬೇಕೋ ಕೊಂಡುಕೊಳ್ಳುವವನಿಗೂ ಅಷ್ಟೇ ಶಿಕ್ಷೆ ಮಾಡಬೇಕು. ಚಾವಟಿ ಏಟು, ಕತ್ತೆಯ ಮೇಲೆ ಮೆರವಣಿಗೆ ಮುಂತಾದವು ಅನಾಗರಿಕ ಶಿಕ್ಷೆಗಳು. ಈಗಿರುವ ಕಾನೂನಿನಂತೆ ಸಜಾ, ಜುಲ್ಮಾನೆ ಅಲ್ಲದೆ ಪದಾರ್ಥಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು. ಇದನ್ನು ಕಡ್ಡಾಯವಾಗಿ ಮಾಡಿದರೆ ಕಾಳಸಂತೆ ನಿಲ್ಲುತ್ತದೆ. ಇಷ್ಟು ಹೇಳಿ, ಈ ನಿರ್ಣಯವನ್ನು ಸೂಚಕರು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿದ್ದೇನೆ.

ಶ್ರೀ ಕೆ. ಪುಟ್ಟಸ್ವಾಮಿಯವರು (ಮಂಡ್ಯ ಜಿಲ್ಲೆ).—ಕಾಳಸಂತೆಯಲ್ಲಿ ಮಾರುವವರು ಯಾವ ಉದ್ದೇಶದಿಂದ ಮಾರುತ್ತಾರೆಂಬುದನ್ನು ನಾವು ತಿಳಿದುಕೊಂಡರೆ ಅವರಿಗೆ ಸುಲಭವಾಗಿ ಶಿಕ್ಷೆಯನ್ನು ಕೊಡಬಹುದು. ತುಂಬಾ ಐಶ್ವರ್ಯವಂತರಾಗಬೇಕೆಂಬ ಉದ್ದೇಶದಿಂದ ಕಾಳಸಂತೆ ವ್ಯಾಪಾರ ಮಾಡುತ್ತಾರೆ. ಇದಕ್ಕೆ ಸರಿಯಾದ ಶಿಕ್ಷೆಯೇನೆಂದರೆ, ಯಾರು ಈ ವ್ಯಾಪಾರಮಾಡಿ ಸಿಕ್ಕಿಕೊಳ್ಳುತ್ತಾರೆಯೋ ಅವರ ಆಸ್ತಿಯನ್ನೆಲ್ಲಾ ಸಂಪೂರ್ಣವಾಗಿ ಮುಟ್ಟುಗೋಲು ಹಾಕಿಕೊಳ್ಳಬೇಕು. ಇಂತಹ ಶಿಕ್ಷೆಗಳು ಒಂದೆರಡು ಆದರೆ ಮಿಕ್ಕವರು ಈ ವ್ಯಾಪಾರ ಮಾಡಲು ಹಿಂದೆಗೆಯುತ್ತಾರೆ, ಇದರ ಗೋಜಿಗೇ ಹೋಗುವುದಿಲ್ಲ. ಎರಡನೆಯದಾಗಿ, ಪತ್ರಿಕೆಗಳಲ್ಲಿ ಜನರು ಓದುತ್ತಿರುವುದು ಆಹಾರ ಧಾನ್ಯ ಬೇಕಾದಷ್ಟು ಗಡಿಯಿಂದಾಚೆ ಸಾಗುತ್ತಿದೆ ಎಂಬ ವಿಚಾರ. ಹೀಗೆ ಕಾಳಸಂತೆಯಲ್ಲಿ ಸಾಗಿಸುವವರಲ್ಲಿ ಪ್ರಭಾವಶಾಲಿಗಳೂ ಶಕ್ತಿವಂತರೂ ತಪ್ಪಿಸಿಕೊಂಡು ಬಿಡುತ್ತಾರೆ. ಇದು ತಪ್ಪಬೇಕಾದರೆ, ಅಂಥವರು ಸಿಕ್ಕಿದ ತಕ್ಷಣ ಅವರನ್ನು ಗುಂಡಿಕ್ಕಿ ಕೊಂದುಬಿಡಬೇಕು. ಇದೇ ಅವರಿಗೆ ಸರಿಯಾದ ಶಿಕ್ಷೆ. ಏಕೆಂದರೆ, ಅವರು ತೊಡಗಿರುವುದು ಸಮಾಜ ಘಾತುಕವಾದ ಕಾರ್ಯ. ಒಬ್ಬನು ಕೊಲೆ ಮಾಡಿದರೆ ಅವನನ್ನು ನೇಣು ಹಾಕುತ್ತಾರೆ. ಹೀಗಿರುವಾಗ ನಿಧಾನವಾಗಿ ಒಂದು ಸಮಾಜವನ್ನೇ ಕೊಲ್ಲುತ್ತಾ, ನಿಧಾನ ದ್ರೋಹಮಾಡುವ ಮನುಷ್ಯನನ್ನು ಅಲ್ಲೇ ಆ ಕ್ಷಣವೇ ಕೊಲ್ಲಬೇಕು, ಅಂಥವನನ್ನು ಮಾರ್ಕೆಟ್ ಚೌಕದಲ್ಲಿ ನೇಣು ಹಾಕಬೇಕು. ಹೀಗೆ ಮಾಡದೆ ಕತ್ತೆಯಮೇಲೆ ಕೂಡಿಸಿ ಮೆರೆವಣಿಗೆ ಮಾಡಿಸುವುದೆಂದರೆ, ಕೆಲವರು ಅದೂ ಒಂದು ಷೋಕಿ ಎಂದು ಸಂತೋಷಪಟ್ಟುಕೊಳ್ಳಬಹುದು. ಕತ್ತೆಯಮೇಲೆ ಕೂರುವುದಕ್ಕೂ, ಹಣೆಗೆ ನಾಮ ಬರೆಸಿಕೊಳ್ಳುವುದಕ್ಕೂ ಅನೇಕರು ಹೆದರುವುದಿಲ್ಲ. ಆದುದರಿಂದ ನಾನು ಈಗತಾನೇ ಸೂಚಿಸಿದ ಉಗ್ರ ಶಿಕ್ಷೆಗಳನ್ನು, ಎಂದರೆ ಆಸ್ತಿಯೆಲ್ಲವನ್ನೂ ಕಸಿದುಕೊಳ್ಳುವುದು ಮತ್ತು ಗುಂಡಿಕ್ಕಿ ಕೊಲ್ಲುವುದು—ಇವನ್ನು ಜಾರಿಗೆ ತಂದರೆ ಸಂಪೂರ್ಣವಾಗಿ ಕಾಳಸಂತೆ ನಾಶವಾಗುತ್ತದೆ. ಇಂತಹ ಅತ್ಯುಗ್ರವಾದ ಶಿಕ್ಷೆಗಳನ್ನು ವಿಧಿಸಬೇಕೆಂದು ನಾನು ಸೂಚಿಸುತ್ತೇನೆ.

ಶ್ರೀ ಎಸ್. ಕರಿಯಪ್ಪನವರು (ಬೆಂಗಳೂರು ಜಿಲ್ಲೆ).—ಸ್ವಾಮಿ, ಕೆಲವು ಮಾನ್ಯ ಸದಸ್ಯರು ಈ ನಿರ್ಣಯವನ್ನು ಮಂಡಿಸಿರತಕ್ಕ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರನ್ನು ಶ್ಲಾಘಿಸಿದ್ದಾರೆ. ನಾನು ಇಷ್ಟೊಂದು ಸಮಾಜದ್ರೋಹ ಕಾರ್ಯ ಮಾಡತಕ್ಕವರಿಗೆ ಇಷ್ಟು ಹಗುರವಾದ ಶಿಕ್ಷೆ ಕೊಡಬೇಕೆಂದು ಸೂಚಿಸಿರುವುದಕ್ಕಾಗಿ ಅವರನ್ನು ಶ್ಲಾಘಿಸಬೇಕೋ ಅಥವಾ ಆಕ್ಷೇಪಣೆ ಮಾಡಬೇಕೋ ಎಂಬ ಅನುಮಾನದಲ್ಲಿದ್ದೇನೆ. ವಿಶೇಷ ಸಂದರ್ಭ ಇದು. ಇದುವರೆಗೂ ಮಾತನಾಡಿದಂಥ ಮಿತ್ರರಲ್ಲಿ ಕೆಲವರು ಇದೇನಿದು ಅನಾಗರೀಕತೆ ಸ್ವಾಮಿ; ಓಬೀರಾಯನ ಕಾಲದಲ್ಲಿ ಜನಗಳು ಅನಾಗರಿಕ ಸ್ಥಿತಿಯಲ್ಲಿದ್ದಾಗ, ಮೃಗಜೀವನ ನಡೆಸುತ್ತಿದ್ದಾಗ ಈ ರೀತಿ ಮಾಡಿದ್ದರೆ ಸರಿ. ಈಗ ಕತ್ತೆಯ ಮೇಲೆ ಕೂಡಿಸುವುದು ಎಂದರೆ ಏನು ಅರ್ಥ; ಇಂಥಾ ಶಿಕ್ಷೆ ಕೊಟ್ಟರೆ ನಮ್ಮ ನಡತೆ ಮೇಲೆ, ನಮ್ಮ ನಾಗರೀಕತೆಯ ಮೇಲೆ ಟೀಕೆಯನ್ನು ಹೊರಿಸುವುದಕ್ಕೆ ನಾವೇ ಅವಕಾಶ ಮಾಡಿಕೊಟ್ಟ ಹಾಗಾಗುವುದಿಲ್ಲವೇ ಎಂದು ಹೇಳಿದರು. ನಾನು ಮೊದಲೇ ಹೇಳಿದ ಹಾಗೆ ಇದು ವಿಶೇಷ ಸಂದರ್ಭ. ವಿಶೇಷ ಸಂದರ್ಭದಲ್ಲಿ ನಡೆಯುತ್ತಾ ಇರತಕ್ಕ ವಿಶೇಷ ತರಹವಾದ ಈ ತಪ್ಪಿಗೆ ವಿಶೇಷ ತರಹವಾದ ಶಿಕ್ಷೆ ಕೊಡುವುದು ಬಹಳ ಸೂಕ್ತವಾಗಿದೆ, ನೀತಿಯನ್ನು ರಕ್ಷಣೆ ಮಾಡುವುದಕ್ಕೋಸ್ಕರ ದೇಶದಲ್ಲಿರತಕ್ಕದ್ದು ಸರ್ಕಾರ. ಇದು moral institution. ಇದು ಶ್ರೇಷ್ಠವಾದ, ಉನ್ನತಮಟ್ಟದ moral institution. ಇಂಥಾ ಸರ್ಕಾರಕ್ಕೆ ಯಾವ ನೀತಿ ಇದೆಯೋ ಅದಕ್ಕೆ ವಿರುದ್ಧವಾಗಿ ಹೋಗತಕ್ಕ ಜನಗಳಿಗೆ ಸರಿಯಾಗಿ ಶಿಕ್ಷೆ ಕೊಟ್ಟು ತಪ್ಪಿಸದ ಪಕ್ಷದಲ್ಲಿ ಸರ್ಕಾರವು ತನ್ನ ಕರ್ತವ್ಯವನ್ನು ಪೂರ್ಣವಾಗಿ ನೆರವೇರಿಸಿದಹಾಗೆ ಆಗುವುದಿಲ್ಲ. ಬರೀ ಕತ್ತೆ ಮೇಲೆ ಕೂಡಿಸುವುದು, ತಲೆ ಬೋಳಿಸಿ, ನಾಮ ಇಟ್ಟು ಮೆರೆವಣಿಗೆ ಮಾಡಿಸುವುದಕ್ಕಿಂತಲೂ ಉಗ್ರವಾದ ಶಿಕ್ಷೆಯನ್ನು ನಾವು ಯೋಚನೆ ಮಾಡತಕ್ಕದ್ದು ಸೂಕ್ತವಾಗಿದೆ ಎಂದು ನಾನು ಹೇಳುತ್ತೇನೆ ಇಂಥಾ ಶಿಕ್ಷೆಯನ್ನು ಕೊಡುತ್ತಾರೆ ಎಂಬುದು ಗೊತ್ತಾದರೆ ಸಾಕು; ಮುಕ್ಕಾಲುಪಾಲು ಜನ ಈ ದುರ್ವ್ಯಾಪಾರವನ್ನು ಬಿಡುತ್ತಾರೆಂಬ ನಂಬಿಕೆ ನನಗಿದೆ. ಬಿಹಾರ್ ಮತ್ತು ಮಧ್ಯಪ್ರಾಂತದಲ್ಲಿ ಬ್ಲಾಕ್‌ಮಾರ್ಕೆಟ್ ತಡೆಗಟ್ಟಲು ಅನುಸರಿಸಿದ ಮಾರ್ಗವನ್ನು ನಾವು ಅನುಸರಿಸಿದರೆ ಆಗುವುದಿಲ್ಲ. ಅವರವರ ಗ್ರೇಡು, ಅವರು ಮಾಡತಕ್ಕ ವ್ಯಾಪಾರದ ಅಂತಸ್ತು ಎಷ್ಟು ಎಂಬುದನ್ನು ನೋಡಿಕೊಂಡು ಅಂತಸ್ತಿಗೆ ತಕ್ಕಂತೆ ಶಿಕ್ಷೆ ಮಾಡಬೇಕು. ಈಗ ಒಂದು ಪರಿಸ್ಥಿತಿ ಒದಗಿದೆ. ಇದಕ್ಕೆ ತಕ್ಕ ಕಾರ್ಯಕ್ರಮ ನಾವೇನು ಮಾಡುವುದಕ್ಕಾಗುತ್ತದೆ; ಬ್ಲಾಕ್‌ಮಾರ್ಕೆಟ್ ಮಾಡತಕ್ಕವರಿಗೇ ಶಿಕ್ಷೆಮಾಡುವುದು ಸರಿಯಲ್ಲ. ಕೊಂಡುಕೊಳ್ಳತಕ್ಕವರಿಗೆ ಶಿಕ್ಷೆ ಮಾಡಬೇಕಾದ್ದು ನ್ಯಾಯ ಎಂದು ಮಾನ್ಯ ಮಿತ್ರರೊಬ್ಬರು ಹೇಳಿದರು. ನ್ಯಾಯವಾದ ಬೆಲೆಗೆ ಮಾರುವುದಾದರೆ ಯಾವನಾದರೂ ಇನ್ನೂ ಜಾಸ್ತಿ ಬೆಲೆ ಕೊಡುತ್ತೇನೆ ಎಂದು ಹೋಗುತ್ತೇವೆಯೇ ? ಇಲ್ಲ. ಅದಕ್ಕೆ ಮೊದಲೇ ಸಾಮಾನನ್ನು ಬಚ್ಚಿಟ್ಟುಕೊಂಡಿದ್ದು ಕಾಳಸಂತೆಯಲ್ಲಿ ವ್ಯಾಪಾರ ಮಾಡತಕ್ಕ ಮನುಷ್ಯನಿಗೆ ಶಿಕ್ಷೆ ಕೊಡುವುದರಲ್ಲಿ ಅನುಮಾನವೇಕೆ ಪಡಬೇಕು ? ಕೊಂಡುಕೊಳ್ಳುವವನಿಗೆ ಆವಶ್ಯಕತೆ ಇದೆ. ಆವಶ್ಯಕತೆಗೆ ತಕ್ಕಂತೆ ಆ ಪದಾರ್ಥವನ್ನು ಅವನು ಯಾವರೀತಿಯಲ್ಲಾದರೂ ತೆಗೆದುಕೊಳ್ಳಲೇಬೇಕು. ಅದನ್ನು ಕಂಡುಕೊಂಡು ನಿಧಾನಮಾಡಿ, ಬಚ್ಚಿಟ್ಟುಕೊಂಡಿರತಕ್ಕ ಮನುಷ್ಯನಲ್ಲಿ ಹೋಗಿ ತೆಗೆದುಕೊಳ್ಳುವಷ್ಟು, ಕೇಳಿದಷ್ಟು ಕೊಡುತ್ತಾನೆ ಎಂದು ಹೇಳುತ್ತಾನೆ. ಪರಿಸ್ಥಿತಿ ಹೀಗಿರುವುದರಿಂದ ಇದನ್ನೆಲ್ಲಾ ನೋಡಿದರೆ ನಿಜವಾಗಿಯೂ ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ಹೇಳಿದ ಶಿಕ್ಷೆಗಳು ಸೂಕ್ತವಾಗಿವೆ. ಅದೂ ಅಲ್ಲದೆ ಇತ್ಯಾದಿ, ಇತ್ಯಾದಿ ಎಂಬುದನ್ನು ಅವರು ನಿರ್ಣಯದಲ್ಲಿ ಸೂಚಿಸಿರುವುದರಿಂದ ನಮಗೂ ಬಹಳ ಅವಕಾಶಮಾಡಿಕೊಟ್ಟಿದ್ದಾರೆ. ವಿಧಿಸಬೇಕಾದ ಶಿಕ್ಷೆಗಳ ಪಟ್ಟಿಯನ್ನು ಒಪ್ಪಿಸುವುದಕ್ಕೆ ನಮಗೂ ಅವಕಾಶವಿದೆ. ಆದಕಾರಣ ಅವರು ಹೇಳಿರತಕ್ಕ ಶಿಕ್ಷೆಗಳ ಜೊತೆಗೆ ಮನೆಯ ಮುಂದೆ ಬೋರ್ಡ್ ಹಾಕುವುದು, ತಲೆ ಬೋಳಿಸಿ, ನಾಮ ಹಾಕುವುದು, ಮೆರೆವಣಿಗೆ ಮಾಡಿಸುವುದು—ಹೀಗೆ ಹೊಸ ಶಿಕ್ಷೆಗಳನ್ನು ಆಲೋಚಿಸುವುದಕ್ಕೂ ಅವಕಾಶವಿದೆ. ಆ ರೀತಿ ಶಿಕ್ಷೆಗಳಿಲ್ಲದೇ ಇದ್ದರೆ ನ್ಯಾಯವಾಗಿರತಕ್ಕವನೂ ಕೂಡ ನಾನೂ ಹೆಚ್ಚು ದುಡ್ಡು ಸಂಪಾದಿಸಬಲ್ಲೆ ಎಂದು ಅನೀತಿ ಮಾರ್ಗಕ್ಕೆ ಇಳಿಯಬಹುದು. ಆದ್ದರಿಂದ ಈ ರೀತಿ ಶಿಕ್ಷೆ ವಿಧಿಸುವುದು ಸೂಕ್ತವಾಗಿದೆ. ಈ ನಿರ್ಣಯಕ್ಕೆ ನನ್ನ ಪೂರ್ಣ ಸಹಾನುಭೂತಿಯಿದೆಯೆಂದು ಹೇಳುತ್ತೇನೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ನ ಪಂಗಡ).—ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ತಂದಿರತಕ್ಕ ಈ ನಿರ್ಣಯವನ್ನು ಪೂರ್ಣವಾಗಿ ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಸಾಧಾರಣವಾಗಿ ಅವರ

ನಿರ್ಣಯದಲ್ಲಿ ಸೂಚಿಸಿರತಕ್ಕ ಶಿಕ್ಷೆ ಬಹಳ ಕಮ್ಮಿಯಾದುದೆಂದೇ ಹೇಳಬೇಕು. ಆದರೆ ಜನಗಳಲ್ಲಿ ನೈತಿಕ ಮಟ್ಟ ಹೆಚ್ಚಬೇಕಾದರೆ ಇಂಥ ಕ್ರೂರ ಶಿಕ್ಷೆ ಅತ್ಯಾವಶ್ಯಕ ಎಂದು ಹೇಳಬೇಕಾಗಿದೆ. ಏಕೆಂದರೆ ಹಿಂದಿನ ಕಾಲದಲ್ಲಿ ಒಂದು ಸುಳ್ಳು ಹೇಳಿದರೂ ಕೂಡ ದೊಡ್ಡ ಅಪರಾಧವೆಂದು ಜನಗಳು ಪರಿಗಣಿಸುತ್ತಿದ್ದರು. ಆದರೆ ಸಾರ್ವಜನಿಕ ಸ್ಥಳಗಳಲ್ಲಿ ಜನಗಳನ್ನು ಹಿಡಿದುಕೊಂಡು ಹೊಡೆಯುವುದು ಮತ್ತು ಕತ್ತೆಯ ಮೇಲೆ ಮೆರವಣಿಗೆ ಮಾಡುವುದೂ ಕೂಡ ಅಷ್ಟು ದೊಡ್ಡ ಶಿಕ್ಷೆಯಲ್ಲವೆಂದು ಅನೇಕರು ಹೇಳಿದರು ಎಂದರೆ ನಮ್ಮ ಜನಗಳ ನೈತಿಕ ಮಟ್ಟ ಎಷ್ಟರಮಟ್ಟಿಗಿದೆ ಎಂಬುದನ್ನು ಹೇಳಬೇಕಾಗಿಲ್ಲ. ನಾವು ಒಂದು ನೀತಿಯುತವಾದ ದೇಶದಲ್ಲಿ ಬಾಳಬೇಕಾಗಿದೆ. ಅಷ್ಟೇ ಅಲ್ಲದೆ ನಮ್ಮ ದೇಶದಲ್ಲಿ ಯಾರೇ ಆಗಲೀ ಹಣ ಇರತಕ್ಕವನಿಗೆ ಹೆಚ್ಚಿನ ಪುರಸ್ಕಾರ ಕೊಡುತ್ತಾರೆ. ಇದರಿಂದ ಅವನು ಇನ್ನೂ ಹೆಚ್ಚಿನ ಕಾಳಸಂತೆ ವ್ಯಾಪಾರ ಮಾಡಲಿಕ್ಕೆ ಕಾರಣವಾಗುತ್ತದೆ.

ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಮತ್ತು ಕೈಗಾರಿಕಾ ಸಚಿವರು).—ಯಾರು ಪುರಸ್ಕಾರ ಕೊಡುವವರು?

ಶ್ರೀ ಟಿ. ಹನುಮಯ್ಯನವರು.— ಸಮಾಜದಲ್ಲಿರುವವರು. ಆದ್ದರಿಂದ ನಾವು ಸಮಾಜದಲ್ಲಿ ಅವರಿಗೆ ಹೆಚ್ಚಿನ ಗೌರವ, ಪ್ರಾಶಸ್ತ್ಯ ಕೊಡದೇ ಇದ್ದರೆ ಇಂದು ಕಾಳಸಂತೆ ವ್ಯಾಪಾರ ಮಾಡಲಿಕ್ಕೆ ಅವಕಾಶವಿರುವುದಿಲ್ಲ. ಅಷ್ಟೆ ಅಲ್ಲದೆ, ಸರ್ಕಾರದವರೂ ಸಹ ಆಗಿಂದಾಗ್ಯೆ ತನಿಖೆ ಮಾಡಬೇಕೆಂದು ಹೇಳುತ್ತೇನೆ. ಇವತ್ತು 100 ರೂಪಾಯಿ ಇರತಕ್ಕವರಿಗೆ ನಾಲ್ಕೈದು ವರ್ಷದಲ್ಲಿ 4-5 ಲಕ್ಷ ರೂಪಾಯಿ ಆಸ್ತಿ, ಆದರೆ ಅವನು ಅಷ್ಟು ಹಣವನ್ನು ಯಾವ ರೀತಿ ಸಂಪಾದಿಸಿದ ಎಂಬುದನ್ನು ತನಿಖೆ ಮಾಡಬೇಕು. ಸರ್ಕಾರದವರು ಅನೇಕರಿಗೆ ಬಿರುದುಗಳನ್ನು ಕೊಡುತ್ತಾರೆ. ಉದಾಹರಣೆಗೆ ಧರ್ಮರತ್ನಾಕರ ಗೋಪಾಲರಾವ್ ಎಂಬುದಾಗಿ ಬಿರುದುಕೊಟ್ಟರು. ಈ ರೀತಿ ಕೊಡಬೇಕಾದರೆ ಸರ್ಕಾರದವರು ಯೋಚನೆ ಮಾಡಬೇಕು. ಅವನು ಅಷ್ಟು ದುಡ್ಡು ಯಾವ ರೀತಿ ಸಂಪಾದಿಸಿದ ಎಂಬುದನ್ನು ತನಿಖೆ ಮಾಡಬೇಕು. ಏಕೆಂದರೆ, ಇವತ್ತು ಬೆಂಗಳೂರು ನಗರದಲ್ಲಿ ನೋಡಿದರೆ ಬಡವರು, ಕೂಲಿಗಾರರು ಬಹಳ ಹೀನಸ್ಥಿತಿಗೆ ಬರುತ್ತಿದ್ದಾರೆ. ಅನೇಕ ಕೂಲಿಗಾರರು ಮರಗಳ ಕೆಳಗೆ ವಾಸಮಾಡುತ್ತಿದ್ದಾರೆ. ಅವರು ಕಷ್ಟಪಟ್ಟು ದುಡಿದ ಹಣವನ್ನು ಯಾರೋ ದೊಡ್ಡ ವ್ಯಾಪಾರಸ್ಥರು ಕಾಳಸಂತೆಯಲ್ಲಿ ಕಿತ್ತುಕೊಂಡು, ಅವರ ರಕ್ತ ಹೀರಿ, ಸುಖವಾಗಿ ಮಜಾ ಮಾಡಿಕೊಂಡು ಓಡಾಡುತ್ತಿದ್ದಾರೆ. ಅಂಥವರಿಗೆ ಗೌರವ ಕೊಡುವುದು ಖಂಡಿತ ನಮ್ಮ ನೈತಿಕ ಮಟ್ಟಕ್ಕೆ ಒಳ್ಳೆಯದಲ್ಲವೆಂದು ಹೇಳಬೇಕಾಗಿದೆ. ಆದ್ದರಿಂದ ಮುಖ್ಯವಾಗಿ ಹೆಚ್ಚು ಹಣ ಇರತಕ್ಕವರಿಗೆ ಅದು ಅವರಿಗೆ ಯಾವ ರೀತಿ ಬಂತು ಎಂಬುದನ್ನು ತನಿಖೆಮಾಡಿ, ಅವರಿಗೆ ಹೆಚ್ಚಿನ ಪುರಸ್ಕಾರ ಕೊಡದೇ ಇದ್ದರೆ, ಕಾಳಸಂತೆ ಮಾಯವಾಗುತ್ತದೆಂದು ನನ್ನ ಅಭಿಪ್ರಾಯ.

ಇನ್ನು ಕೆಲವು ಮಾನ್ಯ ಸದಸ್ಯರು ಹತೋಟಿ ಹೋಗಬೇಕು, ಹತೋಟಿ ತೆಗೆದುಹಾಕಿದರೆ ಕಾಳಸಂತೆ ಹೋಗುತ್ತದೆ ಎಂದು ಹೇಳಿದರು. ಆದರೆ ಇದು ಬರೀ ಮೈಸೂರು ದೇಶದ ಸಮಸ್ಯೆ ಮಾತ್ರವಲ್ಲ. ಇಂಡಿಯಾ ದೇಶಕ್ಕೆಲ್ಲಾ ಅನ್ವಯಿಸುವುದಾಗಿದೆ. ಅಷ್ಟೇ ಅಲ್ಲದೆ, ಜನಸಂಖ್ಯೆ ಜಾಸ್ತಿಯಾಗುತ್ತಿದೆ ಮತ್ತು ಆಹಾರ ಪದಾರ್ಥಗಳು ಕಮ್ಮಿ ಆಗುತ್ತಿವೆ. ಆದ್ದರಿಂದ ಸರ್ಕಾರದವರು ಒಂದು ನೀತಿಗನುಸಾರವಾಗಿ ಹತೋಟಿಯನ್ನು ಹಾಕಿದ್ದಾರೆ. ಹೀಗಿರುವಾಗ ಹತೋಟಿ ತೆಗೆದರೆ ಕಾಳಸಂತೆ ವ್ಯಾಪಾರ ಹೋಗುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ.

ಆದರೆ ಇನ್ನು ಕೆಲವು ಮಾನ್ಯ ಸದಸ್ಯರು ಹೇಳಿದರು. ಬ್ಲಾಕ್‌ಮಾರ್ಕೆಟ್ ಮಾಡತಕ್ಕವರಿಗೂ ಮತ್ತೂ ಹಾಗೆ ಬ್ಲಾಕ್‌ಮಾರ್ಕೆಟ್ಟಿನಲ್ಲಿ ಕೊಂಡುಕೊಳ್ಳತಕ್ಕವರಿಗೂ, ಈ ಇಬ್ಬರಿಗೂ ಶಿಕ್ಷೆಯನ್ನು ವಿಧಿಸಬೇಕು ಎಂದು. ಆದರೆ ಇದು ಎಷ್ಟರಮಟ್ಟಿಗೆ ಸೂಕ್ತವೆಂಬುದನ್ನು ಅವರೇ ಆಲೋಚನೆ ಮಾಡಿನೋಡಬೇಕಾಗಿದೆ. ಹೊಟ್ಟೆಗಿಲ್ಲದೆ ಬಳಲತಕ್ಕವನು ರೂಪಾಯಿಗೆ ಸೇರಾಗಲೀ ಅರ್ಧ ಸೇರಾಗಲೀ ಕೊಂಡುಕೊಳ್ಳದೆ ಹೋದರೆ ಹಸಿವನ್ನು ತಡೆದುಕೊಳ್ಳುವುದಕ್ಕಾಗುವುದಿಲ್ಲ. ಅವನಿಗೂ ಶಿಕ್ಷೆಯನ್ನು ವಿಧಿಸಬೇಕೆಂದರೆ ಇನ್ನು ಅವನು ಬದುಕುವ ಸ್ಥಿತಿಯಾದರೂ ಹೇಗೆ? ಆದಕಾರಣ ಜಾಸ್ತಿ ಪ್ರಯತ್ನಪಟ್ಟು ಹೆಚ್ಚು ಹಣ ಸಂಪಾದಿಸಲು ಪ್ರಯತ್ನಿಸತಕ್ಕವನಿಗೆ ಶಿಕ್ಷೆ ಮಾಡಿ, ಕೇವಲ 8 ಆಣೆ 4 ಆಣೆ ಸಂಪಾದಿಸತಕ್ಕವನನ್ನು ಬಿಟ್ಟುಬಿಡುವುದು ಸೂಕ್ತವೆಂಬು ನನ್ನ ಭಾವನೆ.

ಇದೇ ಸಂದರ್ಭದಲ್ಲಿ ಈ ವಿಚಾರದಲ್ಲಿ ಒಂದೆರಡು ಸಲಹೆಗಳನ್ನು ಸಹ ಕೊಡಲಿಚ್ಛಿಸುತ್ತೇನೆ. ಅದೇನೆಂದರೆ ಈ ಸಾಮಾನುಗಳಲ್ಲಿ ಜನರು ಬಳಸತಕ್ಕವುಗಳ ಪೈಕಿ ಕೆಲವು ಹತೋಟಿಗೆ ಸಂಬಂಧಪಟ್ಟವುಗಳಾಗಿಯೂ, ಇನ್ನು ಕೆಲವು ಹತೋಟಿಗೆ ಒಳಪಡದವುಗಳಾಗಿಯೂ ಇವೆ. ಆ ಪೈಕಿ ಹತೋಟಿಗೆ ಒಳಪಡದ ಸಾಮಾನುಗಳ ಬಗ್ಗೆ ತಾವೇನು ಬಂದೋಬಸ್ತು ಮಾಡಲೂ ಸಾಧ್ಯವಿಲ್ಲ. ಆದಕಾರಣ ಅವರು ಅವುಗಳನ್ನು ಕಮ್ಮಿ ಬೆಲೆಗಾದರೂ ಮಾರಬಹುದು, ಇಲ್ಲವೇ ಜಾಸ್ತಿ ಬೆಲೆಗಾದರೂ ಮಾರಾಟ ಮಾಡಬಹುದು. ಇನ್ನು ಹತೋಟಿಗೆ ಒಳಪಟ್ಟ ಸಾಮಾನುಗಳನ್ನೆಲ್ಲಾ ವರ್ತಕರಿಗೆ ಒಪ್ಪಿಸದೆ ಅವುಗಳನ್ನೆಲ್ಲಾ ಈ ಮಲ್ಟಿಪರ್ಪಸ್ ಕೋ-ಆಪರೇಟಿವ್ ಸೊಸೈಟಿಗಳ ಮೂಲಕವೇ ಮಾರಾಟ ಮಾಡುವಂತೆ ನಿಗದಿಮಾಡಿದರೆ, ಈ ಬ್ಲಾಕ್‌ಮಾರ್ಕೆಟ್ ಕೊಂಚ ತಗ್ಗಬಹುದು. ಆದುದರಿಂದ ಕಬ್ಬಿಣ, ಸಿಮೆಂಟ್ ಇತ್ಯಾದಿ ಸಾಮಾನುಗಳನ್ನೆಲ್ಲಾ ಈ ಸೊಸೈಟಿಗಳ ಮೂಲಕವೇ ಮಾರಾಟ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀಮಾನ್ ಕೃಷ್ಣಪ್ಪನವರು ಸೂಚಿಸಿರುವ ಶಿಕ್ಷೆಯು ಅತಿ ಉಗ್ರವಾದ ಶಿಕ್ಷೆ ಎಂದು ಕೆಲವರೇನೋ ಇದನ್ನು ಟೀಕೆ ಮಾಡಿದ್ದಾರೆ. ಆದರೆ ಇದು ಖಂಡಿತ ಹಾಗಿಲ್ಲ. ಮನುಷ್ಯನು ನೀತಿಯುತವಾಗಿ, ಪ್ರಾಮಾಣಿಕತೆಯಿಂದ ನಡೆಯದೆ ತಪ್ಪುಮಾರ್ಗದಲ್ಲಿ ಹೋದರೆ ಆತನನ್ನು ಕತ್ತೆಯ ಮೇಲೆ ಕುಳ್ಳಿರಿಸಿ ಮೆರವಣಿಗೆ ಮಾಡಿದರೆ, ಆತನು ಮಾನಸ್ಥನಾದರೆ ಖಂಡಿತ ಜೀವಂತನಾಗಿರಲು ಸಾಧ್ಯವಿಲ್ಲ. ಆತನನ್ನು ಮೆರವಣಿಗೆ ಮಾಡಿದರೆ ಊರಿನವರೆಲ್ಲರೂ ಆತನನ್ನು ನೋಡುತ್ತಿರುತ್ತಾರೆ. ಇದೊಂದು ದೊಡ್ಡ ಅಪಮಾನ. ಲಕ್ಷಾಧಿಕಾರಿಯಾಗಲೀ, ಬಡವನಾಗಲೀ ಇಂಥಾ ಶಿಕ್ಷೆಗೊಳಗಾದರೆ, ಅವನು ಖಂಡಿತ ಮರ್ಯಾದೆಯುಳ್ಳವನಾದರೆ ಪ್ರಾಣದಿಂದಿರಲು ಸಹ ಇಷ್ಟಪಡುವುದಿಲ್ಲ. ಇದು ಜೈಲು ಶಿಕ್ಷೆಗಿಂತಲೂ ಉಗ್ರವಾದ ಶಿಕ್ಷೆಯಾದರೂ ಇದು ಸಾಧುವಾದುದು. ಆದುದರಿಂದ ಶ್ರೀ ಎಂ.ವಿ. ಕೃಷ್ಣಪ್ಪನವರು ತಂದಿರುವ ನಿರ್ಣಯ ಇರುವ ರೀತಿಯಲ್ಲೇ ಸಾಧುವಾಗಿದೆ. ಇದನ್ನು ಸರ್ವರೂ ಅನುಮೋದಿಸಬೇಕೆಂದು ಹೇಳಿ ನಾನು ಇದನ್ನು ಸಂಪೂರ್ಣವಾಗಿ ಸಮರ್ಥಿಸುತ್ತೇನೆ.

ಶ್ರೀ ಎಂ. ಸಿ. ಶಿವಾನಂದ ಶರ್ಮರವರು (ಬೆಂಗಳೂರು ಜಿಲ್ಲೆ).—ಶ್ರೀಮಾನ್ ಎಂ. ವಿ. ಕೃಷ್ಣಪ್ಪನವರು ತಂದಿರುವ ನಿರ್ಣಯವನ್ನು ಸಮರ್ಥಿಸುತ್ತ ಅವರನ್ನು ನಾನು ಮೊದಲು ಅಭಿನಂದಿಸುತ್ತೇನೆ. ಕಾರಣ ಅವರು ಹೇಳಿರುವಂತೆ ನಿಜವಾಗಿಯೂ ಆರೀತಿ ಮಾಡಿದರೆ

ಬ್ಲಾಕ್ ಮಾರ್ಕೆಟ್ ಎಂಬುದು ನಿಂತುಹೋಗಿ ದೇಶಕ್ಕೆ ಕ್ಷೇಮ ಉಂಟಾಗುವುದಾದರೆ ಸಂತೋಷಿಸಿ ಅವರ ನಿರ್ಣಯವನ್ನು ಸಮರ್ಥಿಸುತ್ತಿದ್ದೇನೆ. ಎಲ್ಲೇ ಹೋಗಲಿ, ಎಲ್ಲೇ ನೋಡಲಿ ಜನರಿಂದ ಕಾಲ ಕೆಟ್ಟುಹೋಯಿತು, ಜನರಿಂದ ಕೆಟ್ಟು ಹೋದರೂ, ಮಳೆ ಬೆಳೆ ಹೋದವು ಎಂಬ ಮಾತುಗಳೇ ಕೇಳಿ ಬರುತ್ತಿವೆ. ಆದರೆ ಹಾಗೆ ಕೆಟ್ಟಿರುವವರು ಯಾರು, ಅವರನ್ನು ಕೆಡುವಂತೆ ಮಾಡಿದವರು ಯಾರು, ಎಂಬ ಅಂಶಗಳನ್ನು ವಿಮರ್ಶೆ ಮಾಡುವುದು ತುಂಬಾ ಕಷ್ಟಕರವಾದ ವಿಷಯ. ಈಗ ಬ್ಲಾಕ್ ಮಾರ್ಕೆಟ್ ಎಂಬುದೂ ಸಹ ಎಲ್ಲೆಲ್ಲೂ ಕೇಳಿ ಬರುತ್ತಿದೆ. ಇದು ಎಲ್ಲಾ ಕಡೆಗಳಲ್ಲೂ ವ್ಯಾಪಿಸಿಕೊಂಡುಬಿಟ್ಟಿದೆ. ಇದಕ್ಕೆಲ್ಲ ಕಾರಣ ಹಿಂದಿನ ಘೋರಯುದ್ಧದ ಕಾಲದಲ್ಲಿ ಜನರ ದೃಷ್ಟಿ ಮತ್ತು ಚಲನವಲನಗಳು ಬದಲಾಯಿಸಿ, ಹಣವನ್ನು ಹೇಗಾದರೂ ಮಾಡಿ ದುಡಿಯಲೇಬೇಕೆಂಬ ಚಪಲ ಜನರಲ್ಲಿ ಹೆಚ್ಚಾದುದೇ. ಅದಾದನಂತರ ಆತನು ಒಳ್ಳೆಯದು ಯಾವುದು, ಯಾವುದು ಕೆಟ್ಟದ್ದು ಎಂಬ ಭೇದಭಾವವನ್ನಿಡದೆ, ಇದು ಮಾಡತಕ್ಕದ್ದು, ಇದು ಮಾಡಬಾರದು ಎಂಬ ವಿವೇಚನೆಯನ್ನು ಕಳೆದುಕೊಂಡು ದುಡಿಯುವುದೊಂದೇ ನೀತಿ ಎಂಬುದಾಗಿ ಅಭ್ಯಾಸ ಮಾಡಿಕೊಂಡು ಬಂದುದರಿಂದ ಆತನ ನೈತಿಕ ಮಟ್ಟ ಅಧಃಪಾತಾಳಕ್ಕಿಳಿದುಹೋಗಿದೆ. ಜನರ ಜೀವನದ ಮಟ್ಟ ಎಲ್ಲಿ ನೋಡಲಿ, ಇಳಿದುಹೋಗಿ ಅವರಲ್ಲಿ ಅನೀತಿ ಅನ್ಯಾಯಗಳು ತಾಂಡವವಾಡುತ್ತಿವೆ. ಇದನ್ನೆಲ್ಲಾ ಯಾರಾದರೂ ದೇಶದ ವಾತ್ಸಲ್ಯವುಳ್ಳವರು ಸಮಾಜದ ಮೇಲೆ ಪ್ರೀತಿ ಅಭಿಮಾನವನ್ನಿಟ್ಟುಕೊಂಡಿರುವವರು, ಯೋಚಿಸುವುದಾದರೆ, ಇದು ಎಂದಿಗೆ ಎಲ್ಲವೂ ಸರಿಹೋಗಿ ದೇಶವು ಶಾಂತಿಯಿಂದಿರುತ್ತೆಂಬ ವಿಷಯದಲ್ಲಿ ತುಂಬಾ ಅನುಮಾನವುಳ್ಳವರಾಗಿದ್ದಾರೆ. ದೊಡ್ಡ ದೊಡ್ಡ ಮಹನೀಯರು ಇಂಥಾ ವಿಷಯದಲ್ಲಿ ಸಂಶಯ ಪಡತಕ್ಕದ್ದು ಸಹಜವಾಗಿಯೇ ಇದೆ. ಆದರೆ ನನಗೂ ಸಹ ಈ ಬ್ಲಾಕ್ ಮಾರ್ಕೆಟ್ ಎಂಬುದು ಸಂಪೂರ್ಣವಾಗಿ ನಿಂತು ಹೋಗುತ್ತೆಂಬ ವಿಷಯದಲ್ಲಿ ತುಂಬಾ ಸಂಶಯವಿದೆ.

ಆದರೆ ಶ್ರೀ ಎಸ್. ರಂಗರಾಮಯ್ಯನವರು ತಮ್ಮ ಭಾಷಣದಲ್ಲಿ ಕೊಂಡುಕೊಳ್ಳತಕ್ಕವನಿಗೂ ಕೂಡ ಶಿಕ್ಷೆ ಮಾಡಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆದರೆ ಇವರು ಇಲ್ಲಿಯೇ ಇದ್ದು ಇದನ್ನು ಹೇಳಿದ್ದರೆ ನೋಡಬಹುದಾಗಿತ್ತು. ಯಾರಾದರೂ ನೆಂಟರಿಷ್ಟರು ಮನೆಗೆ ಬಂದು ಕುಳಿತುಕೊಂಡಾಗ, ಅವರಿಗೆ ಅಕ್ಕಿ ಇಲ್ಲವೆಂದು ಇವರು ಹೇಳುತ್ತಿದ್ದಿರೇನೋ ಎಂಬುದನ್ನು ನೋಡಬೇಕಾಗಿತ್ತು. ಆದರೆ ಇವರು ಮೈಸೂರಿನಲ್ಲಿರುವುದರಿಂದ ಅಲ್ಲಿ ಅವರಿಗೆ ಇಂಥಾ ಅನುಕೂಲಗಳು ಇವೆಯೋ ಏನೋ. ಆದ್ದರಿಂದ ಅವರು ಹಾಗೆ ಅಭಿಪ್ರಾಯಪಟ್ಟಿದ್ದಾರೆ. ಆದರೆ ಹೊಟ್ಟೆಯ ಪಾಡನ್ನು ನಡೆಸಲೋಸುಗ ಜನರು ಎಷ್ಟೇ ಜಾಸ್ತಿ ಧಾರಣೆ ಕೇಳಿದರೂ ಕೊಟ್ಟು ತರಲೇಬೇಕಾಗುತ್ತದೆ. ಹೀಗಿರುವಾಗ ಮಾರತಕ್ಕವನಿಗೆ ಶಿಕ್ಷೆ ವಿಧಿಸುವುದು ಉಚಿತವೇ ಅಥವಾ ಕೊಂಡು ತಿನ್ನತಕ್ಕವನಿಗೆ ಶಿಕ್ಷೆ ವಿಧಿಸುವುದು ಉಚಿತವೇ ಎಂಬುದನ್ನು ಅವರೇ ಆಲೋಚಿಸಿ ತೀರ್ಮಾನಿಸತಕ್ಕದ್ದಾಗಿದೆ. ಬಡವನಾದವನು ಹೆಂಡತಿ ಕೊರಳಿನಲ್ಲಿರುವ 'ತಾಳಿ'ಯನ್ನು ಖಾಯಿಲೆಯ ದೆಸೆಯಿಂದಲೋ ಅಥವಾ ಮತ್ತೆ ಯಾವ ಅನಿವಾರ್ಯಕ್ಕಾಗಿಯೋ ಮಾರ್ವಾಡಿಯ ಬಳಿಗೆ ಹೋಗಿ 2 ರೂಪಾಯಿಗಳಿಗೆ ಅದನ್ನೇ ಗಿರಿವಿ ಇಟ್ಟು ತರಲು ಏತಕ್ಕಾಗಿ ಹೋಗುತ್ತಾನೆಂಬುದನ್ನು ಸರ್ವರೂ ಯೋಚಿಸಿ ತಿಳಿದುಕೊಳ್ಳುವ ಅಂಶವಾಗಿದೆ. ಒಂದುವೇಳೆ ಆತನು ನಿಜವಾಗಿಯೂ ಅಂಥಾ ಕಷ್ಟಕ್ಕೆ ಈಡಾಗದಿದ್ದರೆ ಹಾಗೆ ಮಾಡುತ್ತಿದ್ದನೇ ಎಂಬುದನ್ನು ತಾವೆಲ್ಲರೂ ಮನಗಾಣಬೇಕಾಗಿದೆ. ನಿಜವಾಗಿಯೂ ಜನರ ನೀತಿಯ ಮಟ್ಟ ಹೀಗೆ ದಿನೇದಿನೇ ಇಳಿಯುತ್ತಿರುವುದು ನಮ್ಮ ದೇಶದ ದೌರ್ಭಾಗ್ಯ. ದೇಶದಲ್ಲಿ ಇಂಥಾ ವಿಷಮ ಪರಿಸ್ಥಿತಿಯೊದಗಿರುವ ಕಾಲದಲ್ಲಿ, ಇಂಥಾ ಒಂದು ನಿರ್ಣಯವನ್ನು ಒಂದಲ್ಲ ಒಂದು ರೀತಿಯಲ್ಲಿ ಅದನ್ನು ತಡೆಗಟ್ಟಲು ಎಲ್ಲರೂ ಆಲೋಚನೆ ಮಾಡಿ ಅದಕ್ಕೆ ತಕ್ಕ ಸಾಧನೋಪಾಯಗಳನ್ನು ಸೂಚಿಸಲನುಕೂಲವಾಗುವಂತೆ ಶ್ರೀ ಎಂ. ವಿ. ಕೃಷ್ಣಪ್ಪನವರು ಇದನ್ನು ತಂದಿರುವುದರಿಂದ, ಇದರಿಂದಲಾದರೂ ದೇಶದ ಕಳಂಕ ತೊಲಗಿ ಜನರ ನೈತಿಕಮಟ್ಟ ಉತ್ತಮಗೊಂಡರೆ ನಾನು ಸಂತೋಷಪಡುತ್ತೇನೆ. ಕಾಶ್ಮೀರದೇಶದಲ್ಲೇನೋ ಆರೀತಿ ಮಾಡಿದ್ದರಿಂದ ಅಲ್ಲಿನ ಪರಿಸ್ಥಿತಿ ಉತ್ತಮಗೊಂಡಿದೆಯೆಂದು ತಿಳಿಸಿರಬಹುದು, ಬಹಳ ಸಂತೋಷ. ಆದರೆ ಈ ಕಾಳ ಸಂತೆಯೆಂಬ ಪಿಶಾಚಿಯು ಎಂದಿಗೆ ತೊಲಗಿ ಹೋಗುತ್ತದೋ, ಎಂದಿಗೆ ಜನರೆಲ್ಲರೂ ನೆಮ್ಮದಿಯಿಂದಿರುತ್ತಾರೋ ಎಂಬ ಶಂಕೆ ನನಗಿನ್ನೂ ಸಂಪೂರ್ಣವಾಗಿ ಹೋಗಿಲ್ಲ. ಈ ಹತೋಟಿಯನ್ನೇ ತೆಗೆದುಹಾಕಿಬಿಟ್ಟರೆ ಇದು ಹೋಗುತ್ತದೆಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ. ಆದರೆ ನನಗಂತೂ ತುಂಬಾ ಅನುಮಾನಾಸ್ಪದವೇ ಆಗಿದೆ. ಕಾರಣವಿಷ್ಟೆ—ಕೆಲವು ದಿನಗಳ ಹಿಂದೆ ಬಟ್ಟೆಯ ಹತೋಟಿಯನ್ನು ವಜಾ ಮಾಡಿದರು. ಆದರೆ ಅದರಿಂದುಂಟಾದ ಪರಿಣಾಮವೇನು? ಒಂದಕ್ಕೆ ನಾಲ್ಕರಷ್ಟು—ಆರರಷ್ಟು ಬೆಲೆ ಹೆಚ್ಚಾಗಿ ಬಿಳಿಯ ಮಾರ್ಕೆಟ್ಟಿನಲ್ಲೇ (white market) ಬಿಕರಿಯಾಗಲು ಪ್ರಾರಂಭವಾಯಿತು. ಆಗ ಮತ್ತೆ ಹತೋಟಿ ಹಾಕಲೇ ಬೇಕಾಯಿತು. ಹೀಗೆ ಜನರ ನೈತಿಕ ಮಟ್ಟ ಕೆಳಕ್ಕೆ ಇಳಿದು ಹೋಗಿರುವುದರಿಂದ ಈ ವಿಚಾರದಲ್ಲಿ ನನಗೆ ತುಂಬಾ ಸಂಶಯವಿದೆ.

ಈ ವಿಚಾರದಲ್ಲಿ ನನಗೆ ಇನ್ನೂ ಒಂದು ಸಂಶಯವಿದೆ. ಇದರಲ್ಲಿ ಯಾರು ಯಾರು ಮಾರ್ಗದರ್ಶಕರಾಗಿದ್ದರೋ ಅವರೇ ಇದಕ್ಕೆ ಕೊಂಚ ಮಟ್ಟಿಗೆ ಕಾರಣಭೂತರಾಗಿದ್ದಾರೆಂದು ಭಾವಿಸುತ್ತೇನೆ. ಉದಾಹರಣೆಗೆ ಪೆಟ್ರೋಲ್ ಕೂಪನ್ನುಗಳ ವಿಚಾರ ತೆಗೆದುಕೊಳ್ಳಿ. ಅವರಿಗೆ ಅಷ್ಟೊಂದು ಪೆಟ್ರೋಲ್ ಎಲ್ಲಿಂದ ಬರುತ್ತದೆ? ಲಾರಿ, ಕಾರು, ಬಸ್ಸು ಇವುಗಳಿಗೆ ಎಲ್ಲಿ ಹೋಗಲಿ ಅಲ್ಲಿ ಕೇಳಿದಷ್ಟು ಪೆಟ್ರೋಲ್ ದೊರೆಯುತ್ತಿದೆ. ಬೇಲಿಯೇ ಹೊಲವನ್ನು ಮೇಯಲಿಕ್ಕೆ ಪ್ರಾರಂಭ ಮಾಡಿದರೆ, ಹೆತ್ತತಾಯಿಯೇ ತನ್ನ ಮಗನಿಗೆ ವಿಷಕುಡಿಸಲಿಕ್ಕೆ ಪ್ರಯತ್ನಪಟ್ಟರೆ, ಇನ್ನು ಅದನ್ನು ಕಾಯತಕ್ಕವರು ಯಾರಿದ್ದಾರೆ? ಕೊಂಚ ಮಟ್ಟಿಗೆ ಈ ಬ್ಲಾಕ್ ಮಾರ್ಕೆಟ್ಟಿನ ವಿಷಯವೂ ಕೂಡ ಆರೀತಿಯೇ ಇದೆ. ಅಂತೂ ಏನೇ ಆಗಲೀ ಇದರಿಂದ ದೇಶಕ್ಕೆ ನಿಜವಾದ ಸಹಾಯವಾಗುತ್ತದೆಂಬುದಾಗಿ ಆಶಿಸಿ ನಾನು ಈ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

Sri A. BHEEMAPPA NAIK.—I move for closure, Sir.

ಅಧ್ಯಕ್ಷರು.—ಶ್ರೀ ಟಿ. ಸಿ. ಹೊನ್ನಪ್ಪನವರ ಭಾಷಣವಾಗಲಿ. ಅನಂತರ ತಮ್ಮ ಸೂಚನೆಯನ್ನು ತೆಗೆದುಕೊಳ್ಳೋಣ.

ಶ್ರೀ ಟಿ. ಸಿ. ಹೊನ್ನಪ್ಪನವರು (ಮೈಸೂರು ಜಿಲ್ಲೆ). ಅಧ್ಯಕ್ಷರೇ, ನಾನು ಈ ನಿರ್ಣಯವನ್ನು ವಿರೋಧಿಸುತ್ತಾ ಒಂದೆರಡು ಅಂಶಗಳನ್ನು ತಮ್ಮ ಅವಗಾಹನೆಗೆ ತರಬೇಕಾಗಿದೆ. ಇದರಲ್ಲಿ ಸೂಚಿಸಿರತಕ್ಕ ಕೆಲವು ಅಂಶಗಳು ನನಗೆ ಅಷ್ಟು ಸಮರ್ಪಕವಾಗಿಲ್ಲವೆಂದು ತೋರಿದುದರಿಂದ ನಾನು ಇದನ್ನು ವಿರೋಧಿಸಬೇಕಾಗಿದೆ. ಮೊದಲನೆಯದಾಗಿ ಅನೇಕ ವಿಚಾರಗಳು ಇದ

ರಲ್ಲಿ ವಿಶದವಾಗಿ ತಿಳಿಸಿಲ್ಲ. ನಮ್ಮ ಯಾವ ಶಾಸನ ಸಭೆಯಿಂದಲಾಗಲೀ ಯಾವ ಶಾಸನವನ್ನೇ ಮಾಡಿದರೂ ಕೂಡ ಆ ಶಾಸನವನ್ನು ಮುಖ್ಯವಾಗಿ ಕೊನೆಗೆ ಯಾರ ಮೇಲೆ ಹೇರಬೇಕಾಗುತ್ತದೆಂಬುದನ್ನು ಇದರಲ್ಲಿ ಯೋಚನೆಮಾಡಿಲ್ಲವೆಂದು ನಾನು ವಿಷಾದದಿಂದ ಹೇಳಬೇಕಾಗಿದೆ. ಮಾನ್ಯ ಮಂತ್ರಿವರ್ಯರು ಹಿಂದೆ ಪುನಃ ಹತೋಟಿ ತರುವ ಸಂದರ್ಭದಲ್ಲಿ ಪ್ರಜಾಪ್ರತಿನಿಧಿ ಸಭೆಯ ಮುಂದೆ ಒಂದು ಭರವಸೆ ಕೊಟ್ಟಿದ್ದರೆಂಬುದು ಅನೇಕರಿಗೆ ಜ್ಞಾಪಕವಿರಬಹುದು. ಏನೆಂದರೆ, ಬಡವರ ವಿಚಾರದಲ್ಲಿ ಯಾವ ಕೇಸುಗಳನ್ನೂ ಹಾಕುವುದಿಲ್ಲ, ಏನಿದ್ದರೂ ದೊಡ್ಡ ದೊಡ್ಡ ಕಾಳಸಂತೆಕೋರರ ವಿಷಯದಲ್ಲಿ ಮಾತ್ರ ಈ ಆಕ್ಟನ್ನು ಜಾರಿ ಮಾಡುತ್ತೇವೆಂದು ಹೇಳಿದ್ದರು. ಆದರೆ ವಾಸ್ತವವಾಗಿ ಏನಾಗಿದೆ ನೋಡಿ, ಇಂದಿಗೂ ಕೋರ್ಟಿನಿಂದ ರಿಕಾರ್ಡುಗಳನ್ನು ತರಿಸಿ ಬೇಕಾದರೆ ನೋಡಲಿ. ಕೇವಲ 50 ಸೇರು, ನೂರು ಸೇರು, 10 ಸೇರು ಯಾರು ಹೊಟ್ಟೆಗಿಲ್ಲದೆ ಹೊತ್ತುಕೊಂಡು ಬರುತ್ತಿದ್ದರೋ ಅಂಥವರನ್ನು ಶಿಕ್ಷಿಸಿರುವುದೇ ಜಾಸ್ತಿಯಾಗಿರುವುದು ಕಂಡುಬರುತ್ತದೆ. ಅಂದಮೇಲೆ ಇಂಥ ಯಾವ ಶಾಸನಮಾಡಿದರೂ ಪರಿಣಾಮದಲ್ಲಿ ಅದು ಬಡವನ ಮೇಲೆ ಬೀಳುತ್ತದೆಯೇ ವಿನಾ ದೊಡ್ಡ ದೊಡ್ಡ ಕಾಳಸಂತೆಕೋರರ ಮೇಲೆ ಬೀಳುವುದಿಲ್ಲ. ಏಕೆಂದರೆ ಆತನಲ್ಲಿ ಬೇಕಾದಷ್ಟು ದುಡ್ಡಿರುತ್ತದೆ. ದೊಡ್ಡ ದೊಡ್ಡ ಲಾರಿಗಳನ್ನಿಟ್ಟುಕೊಂಡು ಕೆಲಸಮಾಡುತ್ತಿರುತ್ತಾನೆ. ಧಾರಾಳವಾಗಿ ಲಂಚ ಕೊಡುತ್ತಾನೆ. ಕಮಿಷನ್ ಕೊಟ್ಟು ಇತರರಿಂದ ಶಿಫಾರಸ್ಸು ಕೂಡ ಪಡೆಯುತ್ತಾನೆ. ಕೇಳುವುದಕ್ಕೆ ಜಾಗವೂ ಅವನಿಗೆ ಗೊತ್ತಿರುತ್ತದೆ. ಆ ಉದ್ದೇಶದಿಂದ ನಾನಿದನ್ನು ವಿರೋಧಿಸುತ್ತೇನೆ, ಅಷ್ಟೆ. ನಾವೇನೋ ಯಾವುದೋ ಒಂದು ಉದ್ದೇಶದಿಂದ ಒಂದು ನಿಯಮಕ್ಕೆ ಒಪ್ಪಿಗೆ ಕೊಟ್ಟರೂ, ಅದು ಕೊನೆಗೆ ಸರ್ಕಾರಿ ಹುಕುಮಾಗಿ ಬರುವಾಗ ನೋಡಿದರೆ ಆದರ ಉದ್ದೇಶವೇ ಬೇರೆಯಾಗಿ ಪರಿಣಮಿಸಿ, ಕೊನೆಗೆ ಪೋಲೀಸಿನ ಕೈಗೆ ಹೋದಾಗ ಬಡವರ ಮೇಲೆಯೇ ಆದರ ಹೊರೆ ಬೀಳುವುದಕ್ಕೆ ದಾರಿಯಾಗಿರುತ್ತದೆ. ಮಾನ್ಯ ಸದಸ್ಯರೊಬ್ಬರು ಹಾಗೆ ಕೊಂಡುಕೊಳ್ಳುವವರಿಗೂ ಶಿಕ್ಷೆಕೊಡಬೇಕೆಂದು ಹೇಳಿದರು. ಇದಕ್ಕಾಗಲೇ ಮತ್ತೊಬ್ಬ ನಮ್ಮ ಮಿತ್ರರು ವಿವರಣೆ ಕೊಟ್ಟರು. ಏನೆಂದರೆ, ನಾವು ಅವರಿಗೆ ಕೊಡುತ್ತಿರುವ ತಿಂಗಳ ರೇಷನ್ 15 ದಿವಸಕ್ಕೂ ಸಾಕಾಗುವುದಿಲ್ಲ, ನಾವು ಸರಿಯಾಗಿ ಆತನಿಗೆ ಒದಗಿಸುತ್ತಿದ್ದರೆ ಅವನ ಮೇಲೆ ತಪ್ಪುವಿಧಿಸಬಹುದಾಗಿತ್ತು, ಆದ್ದರಿಂದ ಅವನನ್ನು ಶಿಕ್ಷಿಸುವುದರಿಂದ ಪ್ರಯೋಜನವಿಲ್ಲ, ಅದು ಬಿಟ್ಟು ನಮ್ಮ ದೇಶದಲ್ಲಿ ದವಸಗಳು ಎಲ್ಲಿ ದಾಸ್ತಾನಾಗಿ ಕೇಂದ್ರೀಕೃತವಾಗಿರುತ್ತವೆಯೋ ಅಲ್ಲಿ ಮುಖ್ಯವಾಗಿ ಹಿಡಿಯಬೇಕು ಎಂದು. ನಾಳೆಯೇ ಬೇಕಾದರೆ ಆ ಜಾಗಗಳನ್ನು ಸೀಲ್ ಮಾಡಿ ತನಿಖೆಮಾಡಲಿ, ಅಲ್ಲಿ ಬೇಕಾದಷ್ಟು ಧಾನ್ಯ ಸಿಕ್ಕುತ್ತದೆಂದು ಹೇಳಬಲ್ಲೆ, ಸಂಸ್ಥಾನದ ನಾನಾ ಕಡೆಗಳಲ್ಲಿರುವ ಮಿಲ್‌ಗಳಲ್ಲಿರುವ ದಾಸ್ತಾನನ್ನು ಇಂದೇ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಿಂದ ಸೀಲ್‌ಮಾಡಿಸಿ 'ಚೆಕ್' ಮಾಡಿಸಲಿ. ಈ ದಾಸ್ತಾನುಗಳಲ್ಲಿಯೇ ಈ ಬ್ಲಾಕ್ ಮಾರ್ಕೆಟ್ ಇರುವುದು. ಆದ್ದರಿಂದ ಇವುಗಳನ್ನೆಲ್ಲಾ ಯೋಚನೆಮಾಡುವುದಾದರೆ ಈಗ ತಂದಿರತಕ್ಕ ನಿರ್ಣಯದಲ್ಲಿ ಇದು ಯಾವುದನ್ನೂ ವಿಶದಪಡಿಸಿಲ್ಲ. ಅದು ದೊಡ್ಡ ದೊಡ್ಡ ಕಳ್ಳ ವ್ಯಾಪಾರಿಗಳಿಗೆ ಅನ್ವಯಿಸುವುದೇ ಆಗಲೀ ಯಾವುದನ್ನೂ ತಿಳಿಸಿಲ್ಲ. ಈ ಕಾರಣದಿಂದ ನಾನಿದನ್ನು ವಿರೋಧಮಾಡಬೇಕಾಗಿದೆಯೇ ಹೊರತು, ತತ್ವದೃಷ್ಟಿಯಿಂದ ಇದನ್ನು ಒಪ್ಪಲೇಬೇಕು. ಇವತ್ತಿನವರೆಗೂ ಪ್ರತಿಯೊಂದು ಕಾನೂನೂ ಬಡವರಿಗೇ ಕಷ್ಟತರವುದಾಗಿದೆ. ದೊಡ್ಡವರಾರೂ ಸಿಕ್ಕಿಕೊಳ್ಳುವುದಿಲ್ಲ. ಎಷ್ಟೋ ವೇಳೆ ದೊಡ್ಡ ದೊಡ್ಡ ಕೇಸುಗಳನ್ನು ಹಿಡಿದು ಅವರನ್ನು ಶಿಕ್ಷೆಮಾಡಬೇಕೆಂದು ದೂರು ಕೊಟ್ಟರೂ ಸಾಕಾದಷ್ಟು ಸಾಕ್ಷ್ಯವಿಲ್ಲವೆಂದು ಬಿಟ್ಟು ಬಿಟ್ಟಿದ್ದಾರೆ. ಈ ಎಲ್ಲಾ ಕಾರಣಗಳಿಂದ ನಾನು ಖಂಡಿತವಾಗಿ ಈ ನಿರ್ಣಯವನ್ನು ವಿರೋಧಿಸುತ್ತೇನೆ.

ಅಧ್ಯಕ್ಷರು.—ಮುಕ್ತಾಯದ ಸೂಚನೆ ಈಗ ಸಭೆ ಮುಂದಿದೆ. ಮಾನ್ಯ ಸದಸ್ಯರು ಅದರ ಮೇಲೆ ತಮ್ಮ ಅಭಿಪ್ರಾಯವನ್ನು ಸೂಚಿಸಬಹುದು.

(ಸೂಚನೆಯು ಅಂಗೀಕೃತವಾಯಿತು).

*ಶ್ರೀ ಎಂ.ವಿ. ಕೃಷ್ಣಪ್ಪನವರು.—ಮಾನ್ಯ ಅಧ್ಯಕ್ಷರೇ, ನನ್ನ ಸ್ನೇಹಿತರೆಲ್ಲರೂ ಹೆಚ್ಚು ಕಡಿಮೆ ಏಕ ರೀತಿಯಾಗಿ ಈ ಕಾಳಸಂತೆಯ ವ್ಯಾಪಾರ ಹೋಗಬೇಕು, ಈ ವ್ಯಾಪಾರದಲ್ಲಿ ನಿರತರಾಗಿರುವವರಿಗೆ ಉಗ್ರವಾಗಿ ಶಿಕ್ಷೆಯನ್ನು ಕೊಡರೇಬೇಕೆಂಬ ವಾದವನ್ನು ಪುಷ್ಟೀಕರಿಸುತ್ತಾ ನನ್ನ ಪರವಾಗಿ ಮಾತನಾಡಿದ್ದಕ್ಕೆ ನಾನವರನ್ನು ವಂದಿಸುತ್ತೇನೆ. ಒಬ್ಬಿಬ್ಬರು ಸದಸ್ಯರುಮಾತ್ರ ಈ ರೀತಿಯಾದ ಶಿಕ್ಷಾವಿಧಾನ ಸ್ವಲ್ಪ ಅನಾಗರೀಕವಾಗಿ ಕಾಣುತ್ತದೆಂದು ಮಾತ್ರ ಸೂಚಿಸಿದರು. ನಾಗರೀಕರಾದ ಪ್ರಜೆಗಳಿಗೆ ಅನಾಗರೀಕ ಶಿಕ್ಷೆ ಕೊಡಬೇಕೆಂದು ಯಾವ ಸುಸಂಸ್ಕೃತ ಸಮಾಜವೂ ಹೇಳುವುದಿಲ್ಲ. ಆದರೆ ನಮ್ಮದೇಶದಲ್ಲಿ ಈ ಬ್ಲಾಕ್ ಮಾರ್ಕೆಟ್ಟಿನ ಜನರನ್ನು ಎಂಥವರೆಂದು ಹೇಳಲಿ!! ಇಂಗ್ಲೆಂಡ್‌ನಲ್ಲಾಗಲೀ, ಅಮೆರಿಕಾ ದೇಶದಲ್ಲಾಗಲೀ ಸರ್ಕಾರದವರೇನಾದರೂ ಒಂದು ಕಾನೂನು ಮಾಡಿದರೆಂದರೆ ಅದಕ್ಕೆ ತಲೆಬಾಗಿ ಎಲ್ಲ ಜನರೂ ನಡೆದುಕೊಳ್ಳುತ್ತಾರೆ. ಒಮ್ಮೆ ಇಂಗ್ಲೆಂಡಿನಲ್ಲಿ ನಡೆದ ವಿಷಯವನ್ನು ನಮ್ಮ ಮಂತ್ರಿವರ್ಯರು ಹೇಳಿದ್ದನ್ನು, ಈ ಸಮಯದಲ್ಲಿ ತಿಳಿಸಬೇಕೆಂದಿದ್ದೇನೆ. ಅಲ್ಲಿ ಇಲ್ಲಿನಂತೆಯೇ ಸಕ್ಕರೆ ಅಭಾವವಿದ್ದಕಾಲದಲ್ಲಿ ಒಂದು ಸಲ ಸಕ್ಕರೆ ಹೊರಗಿನಿಂದ ಬಂತು. ಅದನ್ನು ತೆಗೆದು 15 ದಿವಸದ ಕೋಟಾವೆಂದು ಎಲ್ಲರಿಗೂ ಹಂಚಿಬಿಟ್ಟರು. ಎಂಟು ದಿವಸವಾದ ಮೇಲೆ ಅಲ್ಲಿ ಬರಬೇಕಾಗಿದ್ದ ಇನ್ನೊಂದು ಸಕ್ಕರೆ ಸ್ಟೀಮರ್ ಕೊಂಚ ದಿನಗಳು ತಡವಾಗಿ ಬರುತ್ತದೆಂದು ಸಮಾಚಾರ ಬಂತು. ರೇಷನ್ ಅಧಿಕಾರಿಗಳು ಮುಂದಕ್ಕೆ ಸಕ್ಕರೆ ಇಲ್ಲದೆ ಹೋಗುತ್ತದೆಂದು ಹೇಳಿ ಹಿಂದೆ ಸಕ್ಕರೆ 15 ದಿವಸಗಳಿಗೆ ತೆಗೆದುಕೊಂಡು ಹೋಗಿದ್ದವರೆಲ್ಲರೂ ತಲಾ $1\frac{1}{2}$ ವೀಸೆಯಷ್ಟು ವಾಪಸು ಕೊಡಬೇಕೆಂದು ರೇಡಿಯೋ ಮೂಲಕ ಹೇಳಿದ ಕೂಡಲೇ ದೇಶದಲ್ಲಿ ಪ್ರತಿಯೊಬ್ಬರೂ ತಾವೇ ಒಂದು 'ಕ್ಯೂ' ನಲ್ಲಿ ನಿಂತು ವಾಪಸ್ಸು ಕೊಟ್ಟು ಹೋದರು. ನಮ್ಮ ದೇಶದಲ್ಲೇನಾದರೂ ಹಾಗೆ ಹೇಳಿಬಿಟ್ಟರೆ ಸಾಕು, ಮಿಠಾಯಿ ರೂಪದಲ್ಲೋ, ಪಾಕಂಪಪ್ ರೂಪದಲ್ಲೋ ಮಾಯವಾಗಿ ಹೊರಟುಹೋಗುತ್ತಿತ್ತು. ಈ ರೀತಿಯಾಗಿ ದೇಶದ ಹಿತದೃಷ್ಟಿಯಿಂದ, ಸಮಾಜದ ಹಿತದೃಷ್ಟಿಯಿಂದ ಸರ್ಕಾರದವರು ಮಾಡಿದ ಕಾನೂನುಗಳಿಗೆ ತಲೆಬಾಗಿ ಗೌರವಿಸಿ ನಡೆದುಕೊಳ್ಳಬೇಕಾದ್ದು ಧರ್ಮ. ಸಮಾಜಘಾತುಕರ ವಿಷಯಗಳೇನೆಂಬುದನ್ನು ನಮ್ಮ ಸ್ನೇಹಿತರೆಲ್ಲರೂ ಈಗ ಹೇಳಿದ್ದಾರೆ. ಆದರೆ ಒಂದು ವಿಷಯವೇನೆಂದರೆ, ಈಗಿನ ಪ್ರಪಂಚದಲ್ಲಿ ಬ್ಲಾಕ್ ಮಾರ್ಕೆಟ್ ಎಂಬುದರ ಅರ್ಥವನ್ನು ತಿಳಿಯದವರೂ ಒಬ್ಬಿಬ್ಬರಿದ್ದಾರಲ್ಲಾ ಎಂದು ನನಗೆ ಸ್ವಲ್ಪ ಆಶ್ಚರ್ಯವಾಗುತ್ತದೆ. ಅದೂ ಮಾನ್ಯ ಸದಸ್ಯರು ಲಾಯರಾಗಿ ಈ ವಿಷಯದ ವಿವರಣೆ ತಿಳಿಯಬೇಕೆಂದು ಕೇಳಿದರೋ, ಅಥವಾ ಬ್ಲಾಕ್‌ಮಾರ್ಕೆಟ್ ಎಂಬುದು ಇಂಥಾದ್ದೇ ಎಂದು ಪತ್ತೆ ಹಿಡಿಯುವುದಕ್ಕಾಗುವುದಿಲ್ಲವೆಂಬ ಅಭಿಪ್ರಾಯದಿಂದ ಕೇಳಿದರೋ ಗೊತ್ತಿಲ್ಲ.

ಒಬ್ಬ ಸದಸ್ಯರು.—ಅವರಿಗೆ ಅದರ ಅನುಭವವಿಲ್ಲವೆಂದು ಕಾಣುತ್ತೆ!!

ಶ್ರೀ ಎಂ. ವಿ. ಕೃಷ್ಣಪ್ಪನವರು.—ಬ್ಲಾಕ್ ಮಾರ್ಕೆಟ್ ವಿಷಯ ಗೊತ್ತಿರುವವರೆಲ್ಲರೂ ಅನುಭವಸ್ಥರೆಂದಲ್ಲ. ಅದರ ಪರಿಣಾಮವನ್ನು ಅನುಭವಿಸಿದವರೆಲ್ಲರಿಗೂ ಅದು ಗೊತ್ತಿದೆ. ಬ್ಲಾಕ್ ಮಾರ್ಕೆಟ್ಟನ್ನು ವಿವರಿಸುವುದಕ್ಕೆ ಕೇವಲ ಲಾಯರುಗಳಿಂದ ಸಾಧ್ಯವಿಲ್ಲ. ಅದು ನಡೆಯುವುದು ಬಡ ಜನಗಳಲ್ಲಿ. ನಿತ್ಯ ಓಡಾಡುವವರಿಗೆ ಗೊತ್ತು. ಆದ್ದರಿಂದ ಕತ್ತೆಯ ಮೇಲೆ ಓಡಾಡಿಸುವ ವಿಷಯ ಸಂಸ್ಕೃತಿಯ ದೃಷ್ಟಿಯಿಂದ ಅನಾಗರೀಕವಾಗಿ ಕಂಡು ಬಂದರೂ ಇದುವರೆಗೂ ಯಾವ ಬಡಜನರು ಹೊಟ್ಟೆಗೆ ಸಾಕಾದಷ್ಟಿಲ್ಲದೆ ಕಂಗೆಟ್ಟು ಈ ದೊಡ್ಡ ದೊಡ್ಡ ಖದೀಮರ ಹತ್ತಿರ ಹೋಗಿ ರೂಪಾಯಿಗೆ ಅರ್ಧ ಸೇರು, ಒಂದು ಸೇರಿನಂತೆ ಕೊಂಡುಕೊಂಡು ಹೋಗುತ್ತಾರೋ ಆ ಬಡ ಜನರ ಗೋಳಿನ ಕೂಗು ಏನೆಂದರೆ ಈ ಕಾಳಸಂತೆಕೋರರಿಗೆ ಸರಿಯಾಗಿ ಶಿಕ್ಷೆ ಕೊಡಬೇಕು, ಅವರಿಗೀಗ ಈ ರೀತಿಯಾಗಿ ಶಿಕ್ಷೆ ಕೊಡದಿರುವುದರಿಂದಲೇ ನಮಗೆ ಈ ಕಷ್ಟ ಬಂದಿದೆ ಎಂದು.

ಅನೇಕರಿಗೆ ನಾನು ಸೂಚಿಸಿರುವ ಪದಗಳು ಗ್ರಾಮ್ಯವಾಗಿ ಕಂಡರೂ ಸಹ ಆ ಶಿಕ್ಷೆಯನ್ನು ವಿಧಿಸುತ್ತಾರೆಂದ ಮಾತ್ರಕ್ಕೇ ತಪ್ಪು ಮಾಡುವವರು ಭಯಗ್ರಸ್ಥರಾಗುವುದರಲ್ಲಿ ಸಂದೇಹವಿಲ್ಲ. ಈ ಶಿಕ್ಷೆಮಾಡುವುದು ನ್ಯಾಯವಾಗಿಯೇ ಇದೆ. ಇಡೀ ಹಿಂದೂಸ್ಥಾನದಲ್ಲಿ ಧರ್ಮ, ನ್ಯಾಯ ಮತ್ತು ಸತ್ಯ—ಇವುಗಳಿಗಾಗಿ ಸಾಮಾನ್ಯವಾಗಿ ಜನರು ಹೋರಾಡುತ್ತಿದ್ದಾರೆ. ಕತ್ತೆಯಮೇಲೆ ಕೂಡಿಸಿ ಬೀದಿಯಲ್ಲಿ ಮೆರವಣಿಗೆ ಮಾಡಿದರೆಂಬ ಸಂಗತಿಯನ್ನು ಕೇಳಿದ ಮಾತ್ರಕ್ಕೇ ಜನರಲ್ಲಿ ಎಷ್ಟೊ ತಲೆ ತಗ್ಗಿಸುವ ಪ್ರಮೇಯ ಬರುತ್ತದೆ. ಅದು ವಂಶಕ್ಕೇ ಒಂದು ದೊಡ್ಡ ಕಳಂಕಪ್ರಾಯವೆಂದು ಸಾಮಾನ್ಯವಾಗಿ ಭಾವಿಸುತ್ತಾರೆ. ಒಬ್ಬನು ಬೇಕಾದಷ್ಟು ಜುಲ್ಮಾನೆ ತೆತ್ತಿರಬಹುದು, ಹತ್ತಾರು ವರ್ಷ ಸಜಾಶಿಕ್ಷೆ ಅನುಭವಿಸಿರಬಹುದು, ಆದರೆ ಅವನು ಮಾಡಿದ ತಪ್ಪಿಗೆ ಕತ್ತೆ ಸವಾರಿ ಅನುಭವಿಸಿದರೆ ಅದು ದೊಡ್ಡ ಅಪಮಾನವೆಂದು ಜನರು ಹೆದರುತ್ತಾರೆ. ಈರೀತಿ ಉಗ್ರ ಶಿಕ್ಷೆಮಾಡುತ್ತಾರೆಂಬ ಸಂಗತಿಯು ವರ್ತಮಾನ ಪತ್ರಿಕೆಗಳಲ್ಲಿ ಬಂದ ಮಾತ್ರಕ್ಕೇ ಎಷ್ಟೋ ಜನ ಹೆದರಿ ತಮ್ಮ ಕೆಟ್ಟ ಪದ್ಧತಿಯನ್ನು ನಿಜವಾಗಿಯೂ ದೂರ ಮಾಡುತ್ತಾರೆಂಬುದರಲ್ಲಿ ಸಂದೇಹವೇ ಇಲ್ಲ. ಕಾಳಸಂತೆಯಿಂದ ಪದಾರ್ಥಗಳ ಅಭಾವವುಂಟಾಗುತ್ತದೆಂದು ಹೇಳುವ ಕಾಲ ಹೋಯಿತು. ಪ್ರಾರಂಭದಲ್ಲಿ ಆ ರೀತಿ ಇತ್ತು. ಈಗ ಬೆಳೆ ಇಲ್ಲದೇ ಹೋದರೂ ಕಾಳಸಂತೆಗೆ ಆಸ್ಪದವಿದೆ. ಹತೋಟಿಯಿದ್ದರೂ, ಇಲ್ಲದಿದ್ದರೂ ಕಾಳಸಂತೆಗಾರರಿಗೆ ಅನುಕೂಲವಿದ್ದೇ ಇದೆ. ಹತೋಟಿ ಇರುವಾಗ ಒಂದು ತರಹ ಸಂಪಾದನೆ ಮಾಡುತ್ತಾರೆ. ಇಲ್ಲದಿರುವಾಗ ಬೇರೊಂದು ನೀತಿ ಅನುಸರಿಸುತ್ತಾರೆ. ಈಗಾಗಲೇ ಹತೋಟಿ ತೆಗೆಯಬೇಕೆಂದು ಕಾಳಸಂತೆಯವರು ಪ್ರಚಾರ ಮಾಡಿದ್ದಾರೆ, ತಪ್ಪಿತಸ್ಥರಿಗೆ ಈ ದಿವಸ ಶಿಕ್ಷೆಯಿದ್ದರೂ ಅದರಿಂದ ಅನುಕೂಲವಾಗುತ್ತಿಲ್ಲ. ಈಗ ಹತೋಟಿ ಬೇಡವೆಂದು ಹೇಳಿ ಅದು ಹೋದ ಮೂರನೆಯ ದಿವಸವೇ ಮಾರ್ಕೆಟ್ಟಿನಲ್ಲಿ ಹೆಚ್ಚು ಬೆಲೆ ಮಾಡುತ್ತಾರೆ. ಆಗ ಕಾಳಸಂತೆ ಪ್ರಾರಂಭವಾಗಿಯೇ ಆಗುತ್ತದೆ. ವ್ಯಾಪಾರ ಮಾಡುವುದಕ್ಕೆ ಹತೋಟಿ ತಪ್ಪಿಸಿದ ಮಾತ್ರಕ್ಕೇ ಕಾಳಸಂತೆಯಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಅದರಿಂದ ವಿಶೇಷ ಲಾಭ ಸಂಪಾದಿಸಿ ಶ್ರೀ ಹನುಮಯ್ಯನವರು ಹೇಳಿದ ಹಾಗೆ ದೊಡ್ಡ ಕಾರುಗಳಲ್ಲಿ ಓಡಾಡುವವರಿಗೆ ಗೌರವ ಎಲ್ಲಿಯವರೆಗೆ ಇರುತ್ತದೆಯೋ ಅಲ್ಲಿಯವರೆಗೆ ಇದಕ್ಕೆ ಆಸ್ಪದವಿದ್ದೇ ಇರುತ್ತದೆ. ಆಹಾರದ ಅಭಾವವಿರುವುದಕ್ಕೆ ಅದರ ಕೊರತೆಯೊಂದೇ ಕಾರಣವಲ್ಲ. ಸಕ್ಕರೆಯ ಅಭಾವಕ್ಕೆ ಉತ್ಪತ್ತಿಯಾಗದಿರುವುದೇ ಕಾರಣವಲ್ಲ ಎಂಬುದನ್ನು ಈಚೆಗೆ ಸ್ಥಾಪನೆ ಮಾಡಿದ್ದಾರೆ. ಉತ್ಪತ್ತಿ ಮಾಡುವವರು ಬಚ್ಚಿಟ್ಟು, ಏನಾದರೂ ಮಾಡಿ ಸರ್ಕಾರದವರು ಹತೋಟಿ ತೆಗೆಯುವಂತೆ ಮಾಡಿ, ತೆಗೆದು ಹಾಕಿದ ಕೂಡಲೆ ಬೇಕಾದಷ್ಟು ಬೆಲೆ ಏರಿಸಿ ಹಣ ಸಂಪಾದಿಸಿ, ಅನೇಕ ಮನೆಗಳನ್ನು ಕಲ್ಕತ್ತ, ಬೊಂಬಾಯಿ, ಬೆಂಗಳೂರು ಮುಂತಾದ ಕಡೆ ಕಟ್ಟಿಸುತ್ತಾರೆ. ಇದಕ್ಕೆ ಬೇಕಾದಷ್ಟು ಅವಕಾಶವಿದೆ. ಈಗಿನ ಸ್ಥಿತಿ, ಬಡವರ ಮನೆಗೆ ಬೆಂಕಿ ಬಿದ್ದಿರುವಾಗ ಶ್ರೀಮಂತನು ಆ ಬೆಂಕಿಯಿಂದ ತನ್ನ ಚುಟ್ಟಾ ಹತ್ತಿಸಿಕೊಂಡು ಹೋಗುವಂತಿದೆ. ಬಡವರಿಗೆ 30 ರೂಪಾಯಿ ಕೂಲಿ ಸಿಕ್ಕಿದರೆ ಅದಕ್ಕೆ 30 ಸೇರು ಅಕ್ಕಿ ಸಹ ಬರುವುದಿಲ್ಲ. ಹೀಗಿರುವಾಗ ಬಟ್ಟೆ ಬರೆ ಮತ್ತು ಇತರ ಪದಾರ್ಥಗಳಿಗೆ ಅವನು ಏನು ಮಾಡಬೇಕು? ಇಂಥ ಪರಿಸ್ಥಿತಿಯಲ್ಲಿ ಹೆಚ್ಚು ಬಟ್ಟೆ ಬಚ್ಚಿಟ್ಟು ಮಾರುವುದಕ್ಕೆ ಕಾಳಸಂತೆಯೆಂದು ಹೇಳಬೇಕು. ದೇಶದಲ್ಲಿ ಯಾವ ಸರ್ಕಾರ ಬಂದರೂ ಇದರ ತೊಂದರೆ ತಪ್ಪುವುದಿಲ್ಲ. ಎಷ್ಟು ದಕ್ಷರಾದರೂ, ಬುದ್ಧಿಶಾಲಿಗಳಾದರೂ ಇದನ್ನು ನಿವಾರಣೆ ಮಾಡಿದ ಹೊರತು ಒಳ್ಳೆಯ ಹೆಸರು ಬರುವುದಿಲ್ಲ. ಆದ್ದರಿಂದ ನಾನು ಸೂಚಿಸಿರುವುದು ಎಷ್ಟೇ ಗ್ರಾಮ್ಯವಾಗಿ ಕಂಡಾಗ್ಯೂ ಕೂಡ ಅದನ್ನು ಅನುಸರಿಸದೇ ಹೋದರೆ ಬೇರೆ ಮಾರ್ಗವೇ ಇಲ್ಲ. ಅದಕ್ಕೆ ಆಧಾರಗಳೂ ಇವೆ. ವಿಶ್ವಾಮಿತ್ರರೂ ಸಹ ಆ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ನೋಡುವುದಕ್ಕೆ ತಮಾಷೆಯಾಗಿ ಕಂಡರೂ ಪರಿಣಾಮದಲ್ಲಿ ಒಳ್ಳೆಯದಾಗುತ್ತದೆ. ಕೇಂದ್ರ ಸರ್ಕಾರವು ಇದನ್ನು ಒಪ್ಪದಿದ್ದರೆ ನಾವು ತಕ್ಕ ಸೂಚನೆ ಕೊಡಬೇಕು. ಇಂಥಹ ಶಿಕ್ಷೆಯಿಂದ ದೇಶೋದ್ಧಾರವಾಗುತ್ತದೆ. ಸತ್ಪರಿಣಾಮವಾಗುತ್ತದೆಂಬುದನ್ನು ಕೂಲಂಕಷವಾಗಿ ಯೋಚನೆಮಾಡಿ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

*ಶ್ರೀ ಟಿ. ಮರಿಯಪ್ಪನವರು (ಒಳನಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯ ಮೇಲೆ ವಿಪರೀತ ಚರ್ಚೆ ನಡೆದಿದೆ. ಮಾನ್ಯ ಸದಸ್ಯರ ಮನಸ್ಸಿನಲ್ಲಿ ಈ ಸಮಾಜ ದ್ರೋಹಕ್ಕೆ ಏನು ಮಾಡಿ ತಡೆಗಟ್ಟಬೇಕೆಂಬ ಅಭಿಪ್ರಾಯವಿತ್ತೋ ಅದನ್ನೆಲ್ಲಾ ಮನ ಬಿಚ್ಚಿ ಮಾತನಾಡಿದ್ದಾರೆ. ಒಟ್ಟಿನಲ್ಲಿ ಹೇಳುವುದಾದರೆ, ಈ ಕಾರ್ಯವು ಸಮಾಜದ್ರೋಹವಲ್ಲದೆ ಬೇರೆಯಲ್ಲ. ಇಂಥ ದ್ರೋಹಿಗಳಿಗೆ ತಕ್ಕ ಶಾಸ್ತಿ ಮಾಡಬೇಕೆಂದು ಹೇಳುವುದರಲ್ಲಿ ಭಿನ್ನಾಭಿಪ್ರಾಯವಿಲ್ಲವೆಂದು ವ್ಯಕ್ತವಾಗಿದೆ. ಆದರೆ ನಮ್ಮ ಮುಂದಿರುವ ಪ್ರಶ್ನೆಯನ್ನು ಎರಡು ದೃಷ್ಟಿಯಿಂದ ಪರಿಶೀಲಿಸಬೇಕಾಗುತ್ತದೆ. ಕಾನೂನನ್ನು ರಚಿಸುವುದರಿಂದಲೇ ಇದನ್ನು ಸಂಪೂರ್ಣವಾಗಿ ತಡೆ ಮಾಡುವುದಕ್ಕೆ ಸಾಧ್ಯವೇ, ಹೇಗೆ, ಕಾನೂನು ವ್ಯಾಪ್ತಿ ಇದನ್ನು ಸಾಧಿಸುವುದಕ್ಕೆ ಯಾವರೀತಿಯಿರಬೇಕು ಎನ್ನುವುದು ಒಂದು ಪ್ರಶ್ನೆ. ಅದನ್ನು ಮಾನ್ಯ ಸದಸ್ಯರು ಚೆನ್ನಾಗಿ ವಾದಿಸಿ ಲೋಪದೋಷಗಳನ್ನು ಎತ್ತಿ ತೋರಿಸಿದ್ದಾರೆ. ಮುಖ್ಯವಾಗಿ ಒಂದು ವಿಚಾರ ಖಚಿತವಾಗಿದೆ. ಕಾನೂನು ಬಲ ಎಷ್ಟೇ ಇರಲಿ, ದೇಶದಲ್ಲಿ ನೈತಿಕ ಹಿನ್ನೆಲೆಯಿಲ್ಲದಿದ್ದರೆ ಈ ಕಾಳಸಂತೆ ವ್ಯಾಪಾರ ಕಡಮೆಯಾಗುವುದು ಬಹಳ ಕಷ್ಟವೆಂದು ಹೇಳಿದ್ದಾರೆ. ಯಾವ ವಾತಾವರಣ ಕಲ್ಪಿಸಿದರೂ ಸಹ ಇದನ್ನು ಅಡಗಿಸಲು ತಕ್ಕ ಶಕ್ತಿ ಬೇಕಾಗುತ್ತದೆಂದು ಮತ್ತೊಬ್ಬರು ಹೇಳಿದ್ದಾರೆ. ಅದನ್ನು ಯಾವ ದೃಷ್ಟಿಯಿಂದ ಹೇಳಿದ್ದರೂ ಉತ್ತರ ಕೊಡುವಾಗ

ಶ್ರೀ ಕೃಷ್ಣಪ್ಪನವರು ಚೆನ್ನಾಗಿ ಹೇಳಿದ್ದಾರೆ. ಹತೋಟಿ ಇದ್ದರೂ ಅಥವಾ ತೆಗೆದು ಬಿಟ್ಟರೂ ಒಂದಲ್ಲ ಒಂದು ರೀತಿಯಲ್ಲಿ ಕಾಳಸಂತೆ ಅಥವಾ ಅಧಿಕ ಲಾಭ ಸಂಪಾದನೆ ಮಾಡುವುದು ಇದ್ದೇ ಇರುತ್ತದೆಯೆಂದು ಹೇಳಿದ್ದಾರೆ. ಕಷ್ಟ ಪರಂಪರೆಗಳನ್ನನುಭವಿಸುವವರನ್ನು ಲೆಕ್ಕಿಸದೆ ಸ್ವಾರ್ಥಪರರಾಗಿ ಐಶ್ವರ್ಯವಂತರಾಗಬೇಕೆಂಬ ಅಭಿಲಾಷೆಯಿಂದ ಈ ನೀಚ ವೃತ್ತಿಯನ್ನವಲಂಬಿಸುವವರಿಗೆ ತಕ್ಕ ಶಿಕ್ಷೆ ವಿಧಿಸಬೇಕೆಂಬುದನ್ನು ವಿಶದೀಕರಿಸಬೇಕೆಂದು ಅನೇಕವಾಗಿ ಹೇಳಿದ್ದಾರೆ.

ಮೊದಲೇ ಹೇಳಿದ ಹಾಗೆ ಒಂದು ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಸಾಮಾನ್ಯವಾಗಿ ಜನತೆಯಲ್ಲಿ ಸಲ್ಲಕ್ಷಣಗಳು ಹೆಚ್ಚಬೇಕು. ಇದನ್ನು ಶ್ರೀ ಕೃಷ್ಣಪ್ಪನವರು ಹೇಳಿದ್ದಾರೆ. ಇಂಗ್ಲೆಂಡ್ ಮುಂತಾದ ದೇಶಗಳಲ್ಲಿ ದೇಶಕ್ಕೆ ಕಷ್ಟ ಬಂದಾಗ ಜನರು ಹೇಗೆ ಸಹಾಯ ಮಾಡುತ್ತಾರೆಂದರೆ ಕಾನೂನಿನಂತೆ ಸಹಜವಾಗಿ ನಡೆದು ದೇಶವನ್ನು ಬಲಪಡಿಸುತ್ತಾರೆ, ಪರಸ್ಪರ ತೊಂದರೆಯಾಗದಂತೆ ನೋಡಿಕೊಳ್ಳುತ್ತಾರೆಂದು ಹೇಳಿದ್ದಾರೆ. ನಮ್ಮ ದೇಶಕ್ಕೆ ಈಗ ಸ್ವಾತಂತ್ರ್ಯ ಬಂದಿದೆ. ಅನೇಕ ವರ್ಷ ಗುಲಾಮಗಿರಿಯಲ್ಲಿದ್ದುದರಿಂದ ನೈತಿಕ ಮಟ್ಟ ಇಳಿದಿದೆ. ಆದರೆ ಈಗಲೂ ಇಳಿಯುತ್ತಿದೆ ಎಂದು ಅನೇಕ ಮಿತ್ರರು ಹೇಳಿದ್ದಾರೆ, ಹತೋಟಿ ಕೆಡುವ ವಾತಾವರಣವಿರುವುದರಿಂದ ಜಾಸ್ತಿಯಾಗುತ್ತಿದೆಯೆಂದೂ ಹೇಳಿದ್ದಾರೆ. ಆದರೆ ಹಾಗೆ ಯಾರೊಬ್ಬರನ್ನೂ ಟೀಕೆ ಮಾಡುವುದು ಬಹಳ ಕಷ್ಟ. ಸರ್ಕಾರದವರು ಕೇಸುಹಾಕಬಲ್ಲರೇ ಹೊರತು ಶಿಕ್ಷೆಕೊಡಲು ಸಾಧ್ಯವಿಲ್ಲ. ಶಿಕ್ಷೆ ಕೋರ್ಟಿನಲ್ಲಿ ಕೊಡುತ್ತಾರೆ. ಇದು ಗೊತ್ತಿದ್ದರೆ ಕೆಲವು ಟೀಕೆಗಳು ಬರುವುದಕ್ಕೆ ಅವಕಾಶವಿರುತ್ತಿರಲಿಲ್ಲ. ಶಿಕ್ಷೆ ವಿಧಿಸಲು ಕೋರ್ಟುಗಳಿಗೆ ಸಂಪೂರ್ಣ ಸ್ವಾತಂತ್ರ್ಯವಿರುವುದರಿಂದ ಆ ವಿಚಾರದಲ್ಲಿ ಸರ್ಕಾರ ಏನೂ ಮಾಡುವಹಾಗಿಲ್ಲ. ಆದುದರಿಂದ ಈ ವಿಚಾರದಲ್ಲಿ ಸರ್ಕಾರದವರು ಎಷ್ಟು ಮಟ್ಟಿಗೆ ಜವಾಬ್ದಾರರೆಂಬ ಬಗ್ಗೆ ಮಾನ್ಯ ಸದಸ್ಯರಲ್ಲಿ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ. ನಮ್ಮ ಕರ್ತವ್ಯವನ್ನು ಮಾಡುವುದಕ್ಕೆ ನಾವು ಸಿದ್ಧರಾಗಿದ್ದೇವೆ. ಕೇಸುಹಾಕುವುದು ನಮ್ಮ ಕೆಲಸ. ಅದನ್ನು ಮಾಡುತ್ತೇವೆ. ಆದರೆ ಅದರ ಫಲಾಫಲಗಳು ಕೋರ್ಟಿಗೆ ಸೇರಿದ್ದು. ಅವರು ಎಷ್ಟೋ ಸಂದರ್ಭಗಳಲ್ಲಿ ಬಿಟ್ಟುಬಿಟ್ಟಿದ್ದಾರೆಂದು ಸರ್ಕಾರವನ್ನು ಆರೋಪಣೆ ಮಾಡಿದ ಮಾನ್ಯ ಸದಸ್ಯರಲ್ಲಿ ವಿನಯದಿಂದ ಅರಿಕೆ ಮಾಡಿಕೊಳ್ಳುತ್ತೇನೆ. ಐದು ಹತ್ತು ಸೇರು ತರುವವರಿಗೆ ಶಿಕ್ಷೆಮಾಡಿ ದೊಡ್ಡವರನ್ನು ಬಿಟ್ಟುಬಿಡುತ್ತಾರೆಂದು ಶ್ರೀ ಹೊನ್ನಪ್ಪನವರು ಹೇಳುವುದು ತಪ್ಪು, ಹೊಟ್ಟೆಗಿಲ್ಲದೆ ತಮ್ಮ ಉಪಯೋಗಕ್ಕೆ ಆಹಾರವನ್ನು ತರುವವರ ವಿಷಯದಲ್ಲಿ ಸರ್ಕಾರದವರು ಉದಾರವಾಗಿ ವರ್ತಿಸುತ್ತಾರೆ. ತಮ್ಮ ಮನೆಗಾದರೂ ಕೂಡ ರೇಷನ್ ಜಾರಿಯಲ್ಲಿರುವ ಪ್ರದೇಶಗಳಿಗೆ ತರಬಾರದೆಂದು ವಿಧಿ ಇದೆ. ಹೀಗಿರುವಾಗ ಬಟ್ಟೆಯಲ್ಲಿ, ಹಾಸಿಗೆಯಲ್ಲಿ ಹತ್ತು ಸೇರಿನಂತೆ ದವಸವನ್ನು ಸುತ್ತಿಕೊಂಡು ತಂದು ಅದನ್ನು ಮಾರಿದರೆ ನಾಲ್ಕಾರು ಆಣೆ ಬಸ್ಸು ಚಾರ್ಜು ಕೊಟ್ಟರೂ ಹತ್ತು ಸೇರು ಮಾರಿದರೆ ಹತ್ತು ರೂಪಾಯಿ ಬರುತ್ತದೆಂದು ಮಾರಿದರೆ, ಅದು ತಪ್ಪು, ಆದುದರಿಂದ ಕಠಿಣತೆ ಅಥವಾ ಕ್ರೂರತೆ ಐದು ಅಥವಾ ಹತ್ತು ಸೇರಿನ ಮೇಲೆ ಹೇಳುವುದಕ್ಕಾಗುವುದಿಲ್ಲ. ಯಾವ ಉದ್ದೇಶದಿಂದ ಈ ಕೆಲಸ ಮಾಡುತ್ತಾನೆಂಬುದನ್ನು ನೋಡಿ ಶಿಕ್ಷಿಸಬೇಕು. ಹೊಟ್ಟೆಗಿಲ್ಲದೆ ತನ್ನ ಉಪಯೋಗಕ್ಕೆ ತೆಗೆದುಕೊಂಡು ಬಂದರೆ ಅಂತಹ ಸಂದರ್ಭದಲ್ಲಿ ಅದನ್ನು ಉದಾರವಾಗಿ ನೋಡಬಹುದು. ಸುಮ್ಮನೆ ದೊಡ್ಡವರನ್ನು ಬಿಟ್ಟುಬಿಡುತ್ತಾರೆಂದು ಹೇಳುವುದರಲ್ಲಿ ಅರ್ಥವಿಲ್ಲ. ಸಿಕ್ಕಿದಾಗ ದೊಡ್ಡವರ ಮೇಲೆ ಎಷ್ಟೋ ಸಾರಿ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಒಂದು ವೇಳೆ ಕೋರ್ಟಿನವರು ಬಿಟ್ಟುಬಿಟ್ಟಿದ್ದರೆ ಅದು ನಮ್ಮ ತಪ್ಪಲ್ಲ. ಕೋರ್ಟಿನಲ್ಲಿ ಸಿಕ್ಕುವುದು ನ್ಯಾಯ ವಿಮರ್ಶೆಯ ಫಲಾಫಲಗಳು ಎಂಬುದನ್ನು ಮಾನ್ಯ ಸದಸ್ಯರು ಮರೆಯುವ ಹಾಗಿಲ್ಲ. ಮುಖ್ಯವಾಗಿ ಇಂತಹ ಕಾರ್ಯಮಾಡಿ ನಮ್ಮ ದೇಶಕ್ಕೆ ಕೆಟ್ಟ ಹೆಸರು ತರುವವರು ಸಮಾಜ ದ್ರೋಹಿಗಳು. ಈ ಕಾಳಸಂತೆ ಸಂಸ್ಥಾನದಲ್ಲಿ ಹತೋಟಿ ತೆಗೆದುಬಿಡುವುದರಿಂದ ನಿಂತು ಹೋಗುತ್ತದೆಂದು ಹೇಳುವುದಕ್ಕಾಗುವುದಿಲ್ಲ. ದೇಶದಲ್ಲಿ ನೈತಿಕವಾತಾವರಣವನ್ನು ಕಲ್ಪಿಸಲು ಎಲ್ಲರೂ ಪ್ರಯತ್ನಮಾಡಬೇಕು, ದೇಶದಲ್ಲಿ ಜನರು ಸತ್ಯವಂತರಾದರೆ ತನಗೆತಾನೇ ಈ ಕಾಳಸಂತೆ ಹೋಗುತ್ತದೆ. ಹಿಂದಿನ ಕಾಲದಲ್ಲಿ ಒಬ್ಬ ಒಂದು ಅಡಿಕೆಯನ್ನು ಕದ್ದರೆ ಅವನು ಹೊರಗೆ ಮುಖ ತೋರಿಸುತ್ತಿರಲಿಲ್ಲ. ಕತ್ತೆ ಮೇಲೆ ಕೂಡಿಸಿ ಮೆರವಣಿಗೆ ಮಾಡಿದರೆ ಅದೂ ಒಂದು ಷೋಕಿ ಎಂದು ತಿಳಿದುಕೊಂಡು ಅದಕ್ಕೂ ಸಿದ್ಧರಾಗುತ್ತಾರೆಂದ ಒಬ್ಬ ಮಾನ್ಯ ಸದಸ್ಯರು ಹೇಳಿದರು. ಇಂತಹ ಜನರೂ ನಮ್ಮ ದೇಶದಲ್ಲಿದ್ದಾರಲ್ಲಾ ಎಂದು ನಮಗೆ ಮನಸ್ಸು ನೋಯುತ್ತದೆ. ನಮ್ಮ ಮಾನ್ಯ ಸ್ನೇಹಿತರು ಈ ಕಾಳಸಂತೆಯಿಂದಾಗುತ್ತಿರುವ ಅನಾಹುತಗಳನ್ನು ನೋಡಿ ಮನನೊಂದು ಈ ನಿರ್ಣಯವನ್ನು ತಂದಿದ್ದಾರೆ. ಸುಮ್ಮನೆ light-hearted ಆಗಿ ತಂದಿಲ್ಲವೆಂಬುದನ್ನು ನಾನು ಬಲ್ಲೆ. ಕಾಳಸಂತೆ ವ್ಯಾಪಾರ ಮಾಡುವ ಸಮಾಜದ್ರೋಹಿಗಳಿಗೆ ಎಲ್ಲಿಯೂ ಪುರಸ್ಕಾರ ದೊರೆಯಬಾರದು. ಎಲ್ಲವನ್ನೂ ನಾವು ಯೋಚನೆ ಮಾಡಬೇಕು. ಇಡೀ ಭಾರತದಲ್ಲೇ ಈ ಕೆಟ್ಟ ಚಾಳಿ ಇದೆ. ಕೇಂದ್ರ ಸರ್ಕಾರದವರು ಕೂಡ ಈ ವಿಷಯವನ್ನು ತೀವ್ರವಾಗಿ ಯೋಚನೆ ಮಾಡುತ್ತಿದ್ದಾರೆ. ಭಾರತಕ್ಕೆಲ್ಲಾ ಒಂದೇ ರೀತಿಯಾದ ಕಾನೂನು ಮಾಡಬೇಕೆಂದಿದ್ದಾರೆ. ಆ ರೀತಿ ಪ್ರಾಂತಗಳಿಗೆ ಒಂದು ಸೂಚನೆಯನ್ನೂ ಕೊಟ್ಟಿದ್ದಾರೆ. ಆದಕಾರಣ ನಾವೇ ಸ್ವಂತವಾಗಿ ಬೇರೆಯಾಗಿ ಒಂದು ಕಾನೂನು ಮಾಡುವುದಕ್ಕೆ ಬದಲು ಸ್ವಲ್ಪ ತಾಳಿ, ಕೇಂದ್ರದವರು ಏನು ಮಾಡುತ್ತಾರೆಂಬುದನ್ನು ನೋಡುವುದು ಉತ್ತಮ. ಆದುದರಿಂದ ದಯಯಿಟ್ಟು ಈ ನಿರ್ಣಯವನ್ನು ಶ್ರೀಮಾನ್ ಕೃಷ್ಣಪ್ಪನವರು ವಾಪಸ್ಸು ತೆಗೆದುಕೊಳ್ಳಬೇಕೆಂದು ಸೂಚಿಸುತ್ತೇನೆ. ಕಾಳಸಂತೆಯನ್ನು ತಡೆಗಟ್ಟಲು ನಾವು ಎಷ್ಟೋ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಬೇಕಾದರೆ ಅನೇಕ ಉದಾಹರಣೆಗಳನ್ನು ಕೊಡುತ್ತೇನೆ. ಈಗ ಟೆಕ್ಸ್‌ಟೈಲ್‌ನಲ್ಲಿ ಕಾಳಸಂತೆ ನಡೆಯುತ್ತಿಲ್ಲ. ಏಕೆಂದರೆ, ದಾಸ್ತಾನು ಬೇಕಾದಷ್ಟು ಬಂದಿದೆ. ಮುಖ್ಯವಾಗಿ ಹೆಚ್ಚು ಅಭಾವವಿರುವ ಪದಾರ್ಥಗಳ ವಿಚಾರದಲ್ಲಿ ಈ ಕಾಳಸಂತೆ ವ್ಯಾಪಾರ ನಡೆಯುತ್ತದೆ. ದವಸದ ವಿಚಾರದಲ್ಲಿ ಹೆಚ್ಚು ಹೆಚ್ಚಾಗಿ ಮಾರುವವರೂ ಇದ್ದಾರೆ, ಸ್ವಲ್ಪ ಸ್ವಲ್ಪವಾಗಿ ಐದು ಆರು ಸೇರು ತಂದು ಮಾರಿ ಹಣ ಸಂಪಾದನೆ ಮಾಡುವವರೂ ಇದ್ದಾರೆ. ಒಂದೇ ರೀತಿ ನಡೆಯುತ್ತದೆಂದು ಹೇಳುವುದಕ್ಕಾಗುವುದಿಲ್ಲ. ಕೆಲವು ಸಮಯದಲ್ಲಿ ಸಣ್ಣವರಿಗೆ ತೊಂದರೆಯಾಗಿದೆ. ಅದನ್ನು ಒಪ್ಪುತ್ತೇನೆ. ಕಾರಣಗಳು ಬೇರೆ ಇರುತ್ತವೆ.

ಇನ್ನು ಎಲ್ಲಾ ಗಡಿಯಿಂದಾಚೆಗೆ ಸಾಗಿಹೋಗುತ್ತದೆಂದು ಶ್ರೀ ಮಾನ್ ಪುಟ್ಟಸ್ವಾಮಿಯವರು ಹೇಳಿದರು. ಎಲ್ಲಾ ಹೋಗುತ್ತದೆಂದು ಒಪ್ಪುವುದಕ್ಕಾಗುವುದಿಲ್ಲ. ಈಗ ಸಾಮಾನ್ಯವಾಗಿ ಗಡಿಹಳ್ಳಿಗಳಿಂದ ಹೆಚ್ಚಾಗಿ ದವಸವನ್ನು. ಸಂಗ್ರಹಮಾಡಿದ್ದೇವೆ. ಗಡಿಪ್ರದೇಶದಿಂದ ಜೋಳ, ರಾಗಿ ಹೆಚ್ಚಾಗಿ ಆಚೆಗೆಹೋಗಿಲ್ಲ, ಯಾರೂ

ಹಾಗೆಹೇಳುವಹಾಗಿಲ್ಲ. ನಮ್ಮ ಗಮನಕ್ಕೆ ಇಂತಹ ನಿರ್ದರ್ಶನಗಳಾವುವೂ ಬಂದಿಲ್ಲ. ಅಲ್ಲದೆ ಆ ಪ್ರದೇಶಗಳಿಂದ ರಾಗಿ ಜೋಳ ಬಹಳ ಸುಲಭವಾಗಿ ಸಂಗ್ರಹವಾಗುತ್ತಿದೆ; ಇದೂ ಒಂದು ನಿದರ್ಶನ. ಬತ್ತದ ವಿಚಾರದಲ್ಲಿ ಸರ್ಕಾರದವರು ಹೆಚ್ಚಿನ ಮುಂಜಾಗ್ರತೆ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಮೊದಲು ಬೊಂಬಾಯಿಪ್ರಾಂತದಲ್ಲಿ ಜಾಸ್ತಿಬೆಲೆಇದ್ದಾಗ ಸ್ಮಗಲ್ ಆಗಬಹುದೆಂದು ವಿಶೇಷ ಸಿಬ್ಬಂದಿಯನ್ನು ಗಡಿಯಲ್ಲಿ ನೇಮಿಸಿ ಒಬ್ಬರು ಸ್ಪೆಷಲ್ ಎ.ಎಸ್.ಪಿ. ಯವರನ್ನು ನೇಮಕಮಾಡಿ ಎಚ್ಚರಿಕೆ ಏರ್ಪಾಡುಗಳನ್ನು ಮಾಡಿದ್ದರಿಂದ ಸ್ಮಗಲ್ ಮಾಡುವುದಕ್ಕೆ ಅವಕಾಶವಾಗಲಿಲ್ಲ. ಆದರೂ ಒಂದು ವಿಷಯವನ್ನು ಗಮನಿಸಬೇಕು. ಕೆಲವರು ಮಂದಲಗೆ ಕೆಳಗೆ ತೂರುವವರಿದ್ದಾರೆ, ರಂಗೋಲೆ ಕೆಳಗೆನುಗ್ಗುವವರೂ ಇದ್ದಾರೆ. ಅವರ ವಿಷಯದಲ್ಲಿ ಎಚ್ಚರಿಕೆಯಿಂದಿರಬೇಕಾದುದು ಅವಶ್ಯಕ. ಒಟ್ಟಿನಲ್ಲಿ ಮಾನ್ಯಸದಸ್ಯರು ಮನಬಿಚ್ಚಿಮಾತನಾಡಿದ್ದಾರೆ. ಕಾಳಸಂತೆತೊಲಗಿ, ದೇಶದಿಂದ ಈ ಕಳಂಕ ಹೋಗಬೇಕೆಂಬುದರಲ್ಲಿ ಯಾವಭಿನ್ನಾಭಿಪ್ರಾಯವೂಇಲ್ಲ. ಆದರೆ ಇದೇ ಶಿಕ್ಷೆಯನ್ನು ವಿಧಿಸಿದರೆ ನಿಂತು ಹೋಗುತ್ತದೆಂದು ನಂಬುವಹಾಗಿಲ್ಲ. ಜನಗಳ ಮನಸ್ಸಿಗೆ ಈ ಕಾಳಸಂತೆಯ ಟೀಕರತೆ ತಟ್ಟಬೇಕೆಂಬುದು ಈ ನಿರ್ಣಯದ ಸೂಚಕರ ಉದ್ದೇಶ. ಈ ಕಾಳಸಂತೆ ನಿಲ್ಲಬೇಕೆಂಬ ಉದ್ದೇಶದಿಂದ ಹೇಳಿದ್ದಾರೆಯೇ ಹೊರತು ಇದೇ ಶಿಕ್ಷೆಯೇಆಗಬೇಕೆಂದಲ್ಲ. ಸರ್ಕಾರದವರು ಕೇಂದ್ರ ಸರ್ಕಾರದವರಿಂದ ಏನುಸೂಚನೆ ಬರುತ್ತದೆಂಬುದನ್ನು ನೋಡಿಕೊಂಡು ಸೂಕ್ತಕಾರ್ಯಕ್ರಮ ಕೈಗೊಳ್ಳುತ್ತಾರೆಂದು ಮಾತ್ರ ಹೇಳುತ್ತೇನೆ. ಇಷ್ಟು ಹೇಳಿ ಅವರು ತಮ್ಮ ಈ ನಿರ್ಣಯವನ್ನು ವಾಪಸ್ಸುತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ನಾನು ನಿರ್ಣಯವನ್ನು ವಾಪಸುತೆಗೆದುಕೊಳ್ಳಲು ಸಭೆಯ ಅನುಮತಿ ಬೇಡುತ್ತೇನೆ.

The resolution was, by leave of the Assembly, withdrawn.

Resolution No. 4.

Constitution of a Committee of Industrial Experts of all-India reputation.

ಅಧ್ಯಕ್ಷರು.—ಈ ನಿರ್ಣಯ ಶ್ರೀಮಾನ್ ಎ. ಜಿ. ರಾಮಚಂದ್ರರಾಯರ ಹೆಸರಿನಲ್ಲಿದೆ. ಅವರು ಸಭೆಗೆ ಬಂದಿಲ್ಲವಾದುದರಿಂದ ಇದನ್ನು ಸಭೆಯ ಮುಂದೆ ಮಂಡಿಸಲು ಶ್ರೀಮಾನ್ ವೀರಣ್ಣಗೌಡರಿಗೆ ಅವಕಾಶ ಕೊಡಬೇಕೆಂದು ಅವರು ನನಗೆ ಒಂದು ಕಾಗದ ಬರೆದಿದ್ದಾರೆ. ಅದರಂತೆ ಅವರಿಗೆ ಅವಕಾಶಕೊಡುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು (ಮಂಡ್ಯಜಿಲ್ಲೆ).—ಸ್ವಾಮಿ, ತಾವು ಅಪ್ಪಣೆಕೊಡಿಸಿದಹಾಗೆ ಈ ನಿರ್ಣಯವನ್ನು ಶ್ರೀ ಮಾನ್ ರಾಮಚಂದ್ರರಾಯರು ಕಳುಹಿಸಿದ್ದಾರೆ. ಅವರು ಸಭೆಯಲ್ಲಿ ಹಾಜರಿಲ್ಲದೇಯಿರುವುದರಿಂದ ನಾನು ಇದನ್ನು ಮಂಡಿಸಬೇಕಾಗಿದೆ. ತಾವು ಇದಕ್ಕೆ ಅನುಮತಿಕೊಟ್ಟಿದುದಕ್ಕಾಗಿ ತಮ್ಮನ್ನು ವಂದಿಸುತ್ತೇನೆ. ಈ ನಿರ್ಣಯ ಈ ರೀತಿಯಿದೆ :—

"This Assembly is of the opinion that a small committee of industrial experts of all-India reputation should be appointed immediately by the Government of Mysore to investigate into the present condition of the State industrial undertakings and to report to the Government about the measures necessary for their development."

ಈ ನಿರ್ಣಯವನ್ನು ಸೂಚಿಸುತ್ತಾ ನಾನು ದೀರ್ಘವಾದ ಭಾಷಣಮಾಡಬೇಕೆಂದು ಇಷ್ಟಪಡುವುದಿಲ್ಲ. ಮುಖ್ಯವಾಗಿ ದೇಶದಲ್ಲಿ ಕೈಗಾರಿಕೆ ಮತ್ತು ವ್ಯವಸಾಯ ಎರಡೂ ಎಷ್ಟುಮಟ್ಟಿಗೆ ಹೆಚ್ಚಾಗಿ ಅಭಿವೃದ್ಧಿಯಾಗುತ್ತವೆಯೋ ಅಷ್ಟು ಮಟ್ಟಿಗೆ ದೇಶದ ಆರ್ಥಿಕ ಸ್ಥಿತಿ ಉತ್ತಮಗೊಂಡು ದೇಶದಲ್ಲಿ ಸಂಪತ್ತು ಸಮೃದ್ಧಿಯಾಗಿ ಜನತೆಯಲ್ಲಿಸುಖಶಾಂತಿಗಳಿಗೆ ಅವಕಾಶವಾಗುತ್ತದೆಂಬುದನ್ನು ನಾನೇನೂ ಹೊಸದಾಗಿ ಪ್ರತಿಪಾದಿಸಬೇಕಾಗಿಲ್ಲ. ಈ ದೃಷ್ಟಿಯಿಂದಲೇ ಸರ್ಕಾರದವರು ಅನೇಕ ಕೈಗಾರಿಕೆಗಳನ್ನು ಸ್ಥಾಪಿಸಿ ಕೈಗಾರಿಕಾಭಿವೃದ್ಧಿಯನ್ನು ಇನ್ನೂಹೆಚ್ಚಿಸಲು ಪ್ರಯತ್ನಿಸಿದ್ದಾರೆ. ಈ ನಿರ್ಣಯದ ಉದ್ದೇಶವಾದರೂ ಇಷ್ಟೇ ಆಗಿದೆ : ಒಂದು ಉದಾತ್ತವಾದ ಉದ್ದೇಶದಿಂದ ಅನೇಕ ಕೈಗಾರಿಕೆಗಳನ್ನು ಸ್ಥಾಪಿಸುವುದರ ಜೊತೆಗೆ ಈಗಿರತಕ್ಕ ಕೈಗಾರಿಕೆಗಳ ಸ್ಥಿತಿಗತಿಗಳೇನು, ಯಾವುದರಲ್ಲಿ ಹೆಚ್ಚುಆದಾಯ ಬರುತ್ತದೆ, ಯಾವುದರಲ್ಲಿ ನಷ್ಟವಾಗುತ್ತಿದೆ, ಯಾವ ಯಾವುದರಲ್ಲಿ ಬೇಕಾದಷ್ಟಕ್ಕಿಂತ ಹೆಚ್ಚು ಸಿಬ್ಬಂಧಿ ಮತ್ತು ಕೆಲಸಗಾರರಿದ್ದಾರೆ, ಇದರಿಂದ ಹೆಚ್ಚುಖರ್ಚಾಗುತ್ತಿದೆ ಎಂಬುದೆಲ್ಲವನ್ನೂ ಪರಿಶೀಲಿಸಿ ಇವುಗಳನ್ನು ಸ್ಥಿಮಿತಕ್ಕೆ ತಂದು ಆಮೇಲೆ ಮುಂದೆ ಏರ್ಪಾಡಾಗಬಹುದಾದ ಅಥವಾ ಸ್ಥಾಪನೆಯಾಗಬಹುದಾದ ಕೈಗಾರಿಕೆಗಳಲ್ಲಿ ಇಂತಹ ಲೋಪದೋಷಗಳು ಬಾರದಂತೆ ವ್ಯವಸ್ಥೆಮಾಡತಕ್ಕದ್ದು ಅಗತ್ಯ ಎಂಬುದನ್ನು ಸರ್ಕಾರದವರೂ ಒಪ್ಪುತ್ತಾರೆಂದು ನಂಬಿದ್ದೇನೆ. ಈಚೆಗೆ ಒಂದೆರಡು ಉದಾಹರಣೆಕೊಡುವುದಾದರೆ ನಮ್ಮ ದೇಶಕ್ಕೆ ಕೆಲವು ದಿನಗಳ ಹಿಂದೆ ಬಂದಿದ್ದ ಕೈಗಾರಿಕಾ ಪ್ರವೀಣರೊಬ್ಬರು ಭದ್ರಾವತಿ ಸಕ್ಕರೆಕಾರ್ಖಾನೆ ಮುಂತಾದ ದೊಡ್ಡ ಕೈಗಾರಿಕಾ ಸಂಸ್ಥೆಗಳಲ್ಲಿ ಕೆಲಸಗಾರರ ಸಂಖ್ಯೆಯನ್ನು ಸೇಕಡ 40 ರಿಂದ 50ರಷ್ಟು ಕಡಿಮೆಮಾಡಿದರೂ ಕೂಡ ಇಷ್ಟೇ ಸಾಮಾನುಗಳನ್ನು ಅಲ್ಲಿ ಉತ್ಪತ್ತಿಮಾಡುವುದು ಸಾಧ್ಯವೆಂದು ಹೇಳಿದರೆಂದು ತಿಳಿದುಬಂದಿದೆ.

ಇವತ್ತು ನಮ್ಮ ದೇಶದಲ್ಲಿರತಕ್ಕ ಅನೇಕ ಕೈಗಾರಿಕೆಗಳಲ್ಲಿ ಸರ್ಕಾರದ ಸಂಬಂಧವಿದೆ. ಕೆಲಸವನ್ನು ಅವರು ಸ್ವಂತವಾಗಿ ನಡೆಸುತ್ತಿದ್ದರೂ ಅನೇಕ ಕೈಗಾರಿಕೆಗಳಲ್ಲಿ ಸರ್ಕಾರದವರು ಷೇರುಗಳನ್ನು ಕೊಂಡುಕೊಂಡು ಭಾಗವಹಿಸುತ್ತಿದ್ದಾರೆ. ಹೀಗೆ ಸರ್ಕಾರದ ಸಂಬಂಧವಿರತಕ್ಕ ಕೈಗಾರಿಗಳ ಪರಿಸ್ಥಿತಿಯನ್ನು ಕುರಿತು ವಿಮರ್ಶೆಮಾಡಿ ಅವುಗಳ ಅಭಿವೃದ್ಧಿಗೆ, ಅವುಗಳಿಗೆ ಈಗ ಬರುತ್ತಿರುವುದಕ್ಕಿಂತಲೂ ಹೆಚ್ಚುಲಾಭ ಬರುವುದಕ್ಕೆ ಸಹಾಯವಾಗುವಂಥ ಸಲಹೆಗಳನ್ನು ಪಡೆಯುವುದು ಅಗತ್ಯ. ಈ ಕಾರ್ಯವನ್ನು ಸಾಮಾನ್ಯವಾಗಿ ಎಲ್ಲರೂ ಮಾಡುವುದಕ್ಕೆ ಸಾಧ್ಯವಿಲ್ಲ. ಕೈಗಾರಿಕೋದ್ಯಮದಲ್ಲಿ ಹೆಚ್ಚು ಪರಿಣತರಾಗಿರತಕ್ಕ ಮೂರು ಜನಗಳು ಈ ಕಾರ್ಯವನ್ನು ಮಾಡಿ ಒಂದು ವರದಿ ಕಳುಹಿಸುವುದಾದರೆ ಅದರಿಂದ ಪ್ರಯೋಜನವಾಗುತ್ತದೆ ಎಂಬ ಭಾವನೆಯಿಂದ ಶ್ರೀಮಾನ್ ರಾಮಚಂದ್ರರಾಯರು ಈ ನಿರ್ಣಯವನ್ನು, ಸಭೆಯ ಮುಂದೆ ಇಡಬೇಕೆಂದು ಹೇಳಿದ್ದರು. ಇದನ್ನು ಸಭೆಯಮುಂದೆ ಮಂಡಿಸುತ್ತಾ ಇದಕ್ಕೆ ಮಾನ್ಯಸದಸ್ಯರು ಬೆಂಬಲಕೊಡಬೇಕೆಂದು ಹೇಳುತ್ತೇನೆ.

Mr. SPEAKER.—Resolution moved :

"This Assembly is of the opinion that a small committee of industrial experts of all-India

reputation should be appointed immediately by the Government of Mysore to investigate into the present condition of the State industrial undertakings and to report to the Government about the measures necessary for their development."

Sri G. A. ACHARYA (Bangalore District—General).—Sir, the Government of Mysore are running several industries with public funds, and as I know, compared to the capital invested, the return is not as it ought to be. I have formed an opinion that when the Government run any business they run it on what is called 'loss motive' and not on 'profit motive.' Take some of the industries where the investment is forty or fifty lakhs of rupees. An ordinary man who can always question the Government has no document to find out whether an industry run by Government is managed efficiently or otherwise and to compare the cost of a particular thing manufactured there with the cost of a similar article manufactured in a private industrial concern; also there is no balance-sheet whatsoever. For example take the Government Electric Factory. It is impossible to find out the entire capital invested in that concern, the total production and the total profit. Of course the question of interest does not arise at all because it is entirely managed, controlled and financed by the Government. There are other difficulties which I am not labouring to point out. What I am attempting to say is that it is highly necessary that, instead of simply taking cognisance of what they are doing, an expert in the line must be asked to give his opinion and such of the industries that are being managed by the Government should be scrutinised properly and the public must be told what profit or loss the Government are deriving in working those concerns; whether they are working according to the commercial lines. Or else I do not think anybody can ever compare the balance-sheet with that of a public company in order to find out the efficiency of the concern and the cost of a particular article manufactured there. This is run almost on departmental lines. Take the Soap Factory. Suppose the Manager requires paper for 20,000 soap cartons. He has to wait till he gets sanction. So in my opinion the departmental line is not the right line and they are not going to realise profits as any other private manufacturer would get. There are other technical things also. Take the work of re-winding motors.

Sri A. BHEEMAPPA NAIK (Chitaldrug District—General).—I rise to a point of order. I do not know whether the Hon'ble Member is speaking in favour of the motion or against it. The question is about the appointment of a committee of industrial experts of all-India reputation.

Mr. SPEAKER.—He is making out a case.

Sri A. BHEEMAPPA NAIK.—He has not said so far whether he is for or against the resolution. Neither has he explained what "loss motive" is; I want to know whether he wants the Government to appoint a committee for "loss motive."

Mr. SPEAKER.—Hon'ble Member will know it in the end.

Sri G. A. ACHARYA.—Let my friend have patience. I am trying to make my colleagues understand what exactly I am attempting. I want that anything that the Government do must bear fruitful results. I am more anxious of results. Therefore it is highly necessary to take the help of technical people who are well versed in that particular line. As a matter of fact two years ago I suggested in the Chamber of Commerce the very same thing. After all we have not yet progressed. We are industrial-minded. We are not industrialised as people talk. So I am of the opinion that we must take the help of those people who are well versed in the line and a committee should be appointed. Because after all the object of the appointment of a committee is to know where we stand and the balance-sheet of the concern. What is good to a commercial undertaking can also be applied here. As a matter of fact private enterprises always take advice from abroad. They pay for merely blue-print. To get an idea, private enterprises pay several lakhs of rupees. That is because that idea will help them to increase production. You cannot expect the same thing in a

Government department. When public money is being utilised as capital it must produce results; it must produce profits. It is only that that I am attempting to emphasise. As such, if you want Mysore to be kept as an industrialised country it is very necessary that we should get many lessons from the westerners. As a matter of fact His Highness the Maharaja has referred in his speech to Westinghouse. Why do we go so far as America? We do so for knowing how to effect economy and increase the production in our factories thereby cutting down the cost of a particular article. I do not want anybody to say that an article produced in the Government Electric Factory is costlier than the one manufactured in a private enterprise. I am not one of those who say that Government should not at all interfere in industries. By all means if industrial concerns can manufacture articles much cheaper and supply to the people, certainly the people will say "You carry on with industrialisation". In many ways we are not really industrialised to that extent. I support the resolution and I am of the opinion that it is desirable in our own interest and public finance demands that such a committee should be appointed. I work for profit. But there are some people who do not care for profit or loss. That is what I meant by "loss motive".

Sri H. K. VEERANNA GOWDA.—I am very glad and thankful to Sri Acharya for having supported the resolution. I hope the House will realise the need for such an Expert Committee and I am quite sure that the Government will accept the resolution and appoint a committee to go into the question.

*ಶ್ರೀ ಎಚ್. ಸಿ. ದಾಸಪ್ಪನವರು (ಹಣಕಾಸಿನ ಮತ್ತು ಕೈಗಾರಿಕಾ ಸಚಿವರು).—ಸ್ವಾಮಿ, ಈ ನಿರ್ಣಯದ ಮೇಲೆ ಅಷ್ಟು ಹೆಚ್ಚಿನ ಚರ್ಚೆಯೇನೂ ನಡೆದಿಲ್ಲ. ಈ ನಿರ್ಣಯವನ್ನು ಶ್ರೀ ಎಚ್. ಕೆ. ವೀರಣ್ಣಗೌಡರು ಮಂಡಿಸಿದ್ದಾರೆ. ಕೆಲವರು ತಮ್ಮ ಅಭಿಪ್ರಾಯಗಳನ್ನು ಸೂಚಿಸಿದ್ದಾರೆ. ಶ್ರೀ ಜಿ. ಎ ಆಚಾರ್ಯರವರೂ ಕೂಡ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಮೊಟ್ಟಮೊದಲನೆಯದಾಗಿ ನಾನು ಇಷ್ಟು ಹೇಳಬೇಕಾಗಿದೆ—ಅವರುಗಳೆಲ್ಲ ಹೇಳಿರತಕ್ಕ ಅಭಿಪ್ರಾಯಗಳನ್ನು ಗಣನೆಗೆ ತೆಗೆದುಕೊಂಡರೂ ಕೂಡ, ಈಗ ಅವರು ತಂದಿರತಕ್ಕ ನಿರ್ಣಯ ಶಾಸ್ತ್ರೋಕ್ತವಾಗಿಲ್ಲವೆಂದು ತೀರ್ಮಾನ ಮಾಡಬೇಕಾಗಿದೆ. 'A small committee of industrial experts of all-India reputation' ಎಂದು ಹೇಳಿದ್ದಾರೆ. ಮಾತನಾಡಿರತಕ್ಕ ಮಹನೀಯರುಗಳಾದರೂ ಆ ಶಬ್ದಗಳನ್ನು ಉಪಯೋಗಿಸಿರುವುದು ಯಾರಿಗೆ ಅನ್ವಯಿಸುತ್ತದೆಂಬುದನ್ನು ಕೊಂಚ ವಿವರಿಸಿದ್ದರೆ ಚೆನ್ನಾಗಿ ಅರ್ಥವಾಗುತ್ತಿತ್ತು. ಕಾರಣವಿಷ್ಟೆ: ಮೈಸೂರು ಕೈಗಾರಿಕೆಗಳ ವಿಚಾರದಲ್ಲಿ ಎಷ್ಟರಮಟ್ಟಿಗೆ ಮುಂದುವರಿದಿದೆಯೆಂಬುದನ್ನು ಈ ದಿವಸ ಲೆಕ್ಕಹಾಕಿ ನೋಡಿದರೆ ಭಾರತದಲ್ಲೇ ಯಾವ ಪ್ರಾಂತ್ಯವೂ ಇಷ್ಟರಮಟ್ಟಿಗೆ ಮುಂದುವರಿದಿಲ್ಲವೆಂಬುದು ವ್ಯಕ್ತಪಡುತ್ತದೆ. ಇಡೀ ಇಂಡಿಯಾದಲ್ಲಿರತಕ್ಕ ಖಾಸಗೀ ಉದ್ಯಮಗಳವರೂ ಮತ್ತು ಸರ್ಕಾರೀ ಉದ್ಯಮಗಳವರೂ ಈ ಕೈಗಾರಿಕೆಯ ವಿಚಾರದಲ್ಲಿ ನಮ್ಮ ಮೈಸೂರು ಸಂಸ್ಥಾನದ ಕಡೆಗೆ ಎದುರು ನೋಡುತ್ತಿದ್ದಾರೆ. ಇಂಡಿಯಾದಲ್ಲಿ ಕೈಗಾರಿಕೆಗಳಲ್ಲಿ ಮುಂದುವರಿದಿರುವ ಸಂಸ್ಥಾನವೆಂದರೆ ಮೈಸೂರು ಸಂಸ್ಥಾನ. ಇಲ್ಲಿ ಅಂಥ ನಿಪುಣರಿದ್ದಾರೆ. ಈ ಕಾರಣದಿಂದ ನಮಗೆ ತಿಳಿಯದಿರುವ ವಿಚಾರಗಳನ್ನು ತಿಳಿಯಲು ಯಾರು • ಮುಂದುವರಿದಿದ್ದಾರೆ? ಯಾರೂ ಕಾಣುತ್ತಿಲ್ಲ. ಹೊರಗಿನವರೆಲ್ಲರೂ ನಮಗೆ ಈ ವಿಚಾರದಲ್ಲಿ ಎದುರು ನೋಡುತ್ತಿದ್ದಾರೆ. ಇಷ್ಟು ಅಂಶವನ್ನು ತಿಳಿಯದೇ ಸೂಚಕರು ಈ ನಿರ್ಣಯವನ್ನು ತಂದಿರುವುದಕ್ಕೆ ನಾನು ಪೂರಾ ವ್ಯಸನಪಡಬೇಕಾಗಿದೆ. ಆದುದರಿಂದ ಇದನ್ನು ಅಷ್ಟು ಸುಲಭವಾಗಿ ಒಪ್ಪಿಕೊಳ್ಳಲಿಕ್ಕಾಗುವುದಿಲ್ಲ. ಆದರೆ ನಾನು ಯಾವ ಯಾವ ಉದ್ಯಮಗಳಲ್ಲಿ ಯಾರು ಯಾರು ಎಷ್ಟೆಷ್ಟು ಸಂಪಾದಿಸುತ್ತಿದ್ದಾರೆಂಬುದನ್ನೆಲ್ಲಾ ತಮಗೆ ತಿಳಿಸಬೇಕೆಂದರೆ ಅದಕ್ಕಾಗಿ ನಾನೊಂದು ದೊಡ್ಡ ಪಟ್ಟಿಯನ್ನೇ ತಯಾರಿಸಬೇಕಾಗಿ ಬರುತ್ತದೆ. ನಮ್ಮ ಅನುಭವಸಿದ್ಧವಾದ ರೀತಿಯಲ್ಲಿ ನೋಡಿದರೆ ನಮ್ಮಲ್ಲಿರುವ ಪ್ರತಿಯೊಂದು ಕಂಪೆನಿಯೂ ಮತ್ತು ಕೈಗಾರಿಕೆಯೂ ಸ್ವಲ್ಪ ಹೆಚ್ಚು ಕಡಿಮೆ ಲಾಭದಾಯಕ ರೀತಿಯಲ್ಲೇ ನಡೆದುಕೊಂಡು ಬರುತ್ತಿವೆ. ಇದನ್ನು ಭಾರತದಲ್ಲಿರುವ ಇತರ ಕೈಗಾರಿಕೆಯ ಕಂಪೆನಿಗಳೊಡನೆ ಹೋಲಿಸಿ ನೋಡಿದರೆ ಅವರೆಲ್ಲರ ವರಮಾನವೂ ನಮ್ಮ ದೇಶದ ವರಮಾನಕ್ಕಿಂತ ಕಡಿಮೆಯಾಗಿದೆ. ಇದಕ್ಕೆ ನಾನಾ ಕಾರಣಗಳೂ ಇರಬಹುದು. ಆದರೆ ಉದಾಹರಣೆಗೆ ಕೆಲವು ಅಂಶಗಳನ್ನು ಸೂಚಿಸುತ್ತೇನೆ.—ಕಚ್ಚಾ ಮಾಲುಗಳ ಬೆಲೆಯನ್ನು ನಾವು ಉದಾಹರಣೆಗೆ ತೆಗೆದುಕೊಂಡರೆ, ಅವುಗಳ ಬೆಲೆ ಎಷ್ಟರಮಟ್ಟಿಗೇರಿದೆ ಎಂದರೆ ಶೇಕಡ 472ರಷ್ಟು ಜಾಸ್ತಿಯಾಗುತ್ತದೆ. ಅಂಥಾ ಜಾಸ್ತಿಯಾದ ಮಾಲುಗಳ ತಯಾರಿಕೆಯಾದ ಮೇಲೆ ಹಾಗೆ ತಯಾರಿಸಲ್ಪಟ್ಟ ವಸ್ತುಗಳ ಬೆಲೆಯಾದರೋ ಶೇಕಡ 333ರಷ್ಟು ಏರಿಹೋಗಿರುತ್ತದೆ. ಇದೇ ರೀತಿ ಲೇಬರ್ಸ್ ವಿಚಾರವೂ ಇದೆ. ಈ ಕೂಲಿಗಾರರಿಗೆ ಹೆಚ್ಚು ಹೆಚ್ಚು ಬೋನಸ್ ಕೊಡುವಂತೆ ಮಾಡಿರುವುದರಿಂದಲೂ, ಅವರಿಗೆ ಹೆಚ್ಚು ಹೆಚ್ಚು ಸೌಕರ್ಯಗಳನ್ನೂ ಒದಗಿಸಬೇಕೆಂದು ವಿಧಾಯಕ ಮಾಡಿರುವುದರಿಂದಲೂ, ವರಮಾನ ಮೊದಲಿಗಿಂತಲೂ ಈಗ ಕೊಂಚ ಇಳಿಮುಖವಾಗಿದೆ. ಈ ಎಲ್ಲಾ ಕಾರಣಗಳಿಂದ ಉತ್ಪತ್ತಿ ಸಹ ಕಡಿಮೆಯಾಗಿದೆ. ಆದರೆ ಈ ಬೆಲೆಗಳ ವಿಚಾರದಲ್ಲಿ, 1948ರಲ್ಲಿ ಕೊಂಚ ಕೊಂಚ ಯಾವುದು ಇಳಿಮುಖವಾಗುತ್ತಿತ್ತೋ ಅದು ಮತ್ತೆ 1949ರಲ್ಲಿ ಏರುತ್ತಾ ಹೋಗಿರುತ್ತೆ. ಒಟ್ಟಿನಲ್ಲಿ ಹೇಳುವುದಾದರೆ ಇಡೀ ಭಾರತದ ಕೆಲವು ವರಮಾನಗಳು ಕಮ್ಮಿಯಾಗಿರುವುದು ಜನರು ಹೆಚ್ಚಿನ ಸೌಲಭ್ಯ ಮತ್ತು ಸೌಕರ್ಯಗಳನ್ನು ಕೇಳಿರುವುದರಿಂದಲೇ ಹೊರತು ಮತ್ತೆ ಬೇರೆ ಏನೂ ಇಲ್ಲ. ಈ ಕೈಗಾರಿಕೋದ್ಯಮಗಳನ್ನು ಇನ್ನೂ

ಉತ್ತಮಪಡಿಸಲು ತಕ್ಕ ವ್ಯವಸ್ಥೆ ಮಾಡಬೇಕಾಗಿದ್ದರೆ ಇಂಥಾ ಸಮಿತಿಗಳಿಂದಲೇ ಸಾಧ್ಯವಾಗುತ್ತದೆಂಬುದನ್ನು ಒಪ್ಪುವುದಕ್ಕಾಗುವುದಿಲ್ಲ.

Sri G. A. ACHARYA.—What about technological advice?

ಶ್ರೀ ಎಚ್. ಸಿ. ದಾಸಪ್ಪನವರು.—ಈಗ ಈ ನಮ್ಮ ಕಲ್ಲಿದ್ದಲು ಕೈಗಾರಿಕೆಯನ್ನೇ ತೆಗೆದುಕೊಳ್ಳಿ. ಇದು ನಮ್ಮಲ್ಲಿ ವಿನಾ ಮತ್ತೆಲ್ಲಿಯೂ ಇಲ್ಲ. ಇದರಲ್ಲಿ ಬೇರೆಯವರು ನಮಗೆ ಏನು ಹೆಚ್ಚಿನ ಬುದ್ಧಿವಾದಗಳನ್ನು ಹೇಳುವುದಕ್ಕಾಗುತ್ತದೆ? ಸೋಪ್ ಕೈಗಾರಿಕೆಯ ವಿಷಯವೂ ಸಹ ಇದೇ ರೀತಿಯಾಗಿದೆ. ಆದರೆ ಶ್ರೀ ಎ. ಭೀಮಪ್ಪನಾಯಕರು ಕೆಲವು ವಿಷಯಗಳನ್ನು ತಿಳಿಸಿದ್ದಾರೆ. ಆದರೆ ಅವರ 7ನೆಯ ನಿರ್ಣಯ ಚರ್ಚೆಗೆ ಬಂದಾಗ ಬಾಕಿ ವಿಷಯಗಳನ್ನು ತಿಳಿಸುತ್ತೇನೆ. ಈಗ ಅದಕ್ಕೆಲ್ಲ ಅವಕಾಶವಿಲ್ಲ. ಆದರೆ ಈಗಿನ ವ್ಯವಸ್ಥೆಯಲ್ಲಿ ಕೊಂಚ ಬದಲಾವಣೆಯಾಗಬೇಕೆಂಬುದನ್ನು ನಾನು ಒಪ್ಪುತ್ತೇನೆ. ಒಂದು ಸಾಮಾನಿನ ಮಾರಾಟದ ವಿಷಯದಲ್ಲಾಗಲೀ ಅಥವಾ ಅದರ ಉತ್ಪತ್ತಿಯ ವಿಚಾರದಲ್ಲಾಗಲೀ ನಮ್ಮ ಇಲಾಖೆಯ ಮೊಖ್ತೇಸರರುಗಳ ಅಭಿಪ್ರಾಯವೇ ಉನ್ನತಮಟ್ಟದ್ದಾಗಿರುತ್ತದೆ. ಆದರೆ ನಮ್ಮ ಸರ್ಕಾರಿ ಮೆಷಿನರಿ ಕೊಂಚ ಎಲ್ಲದರಲ್ಲೂ ತಡವಾಗಿದೆ. ಈ ವಿಧಾನದ ವಿಷಯವನ್ನೂ ಇನ್ನು ಕೆಲವು ಅಂಶಗಳನ್ನೂ ಶ್ರೀ ಭೀಮಪ್ಪನಾಯಕರ ನಿರ್ಣಯ ಚರ್ಚೆಗೆ ಬಂದಾಗ ತಿಳಿಸಲಾಗುತ್ತದೆ. ಆದ್ದರಿಂದ ಈಗ ಸದ್ಯಕ್ಕೆ ಈ ನಿರ್ಣಯವನ್ನು ಅಂಗೀಕರಿಸುವುದಕ್ಕಾಗುವುದಿಲ್ಲ.

ನಮ್ಮಲ್ಲಿರತಕ್ಕ ನಿಪುಣರ ವಿಚಾರವಾಗಿ ಒಂದು ತಮಗೆ ನಿದರ್ಶನ ಕೊಡಬೇಕೆಂದರೆ, ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಯಲ್ಲಿ ಮತ್ತು ಪೋರ್ಸಿಲೇನ್ ಫ್ಯಾಕ್ಟರಿಯಲ್ಲಿ ಕೆಲಸಕಾರ್ಯಗಳನ್ನು ನೋಡಿಕೊಳ್ಳಲು ನಾವು ಹೋದವರ್ಷ ಬೋರ್ಡ್ ಆಫ್ ಮ್ಯಾನೇಜ್‌ಮೆಂಟ್ ಎಂಬುದಾಗಿ ಮೂರು ಜನಗಳ ಸಮಿತಿಯೊಂದನ್ನು ನೇಮಕಮಾಡಿದ್ದೆವು. ಅದರಲ್ಲಿ ಎಲೆಕ್ಟ್ರಿಕಲ್ ಚೀಫ್ ಇಂಜಿನಿಯರವರೂ—ಇವರ ದಕ್ಷತೆ ವಿಚಾರ ನಾನು ಹೊಸದಾಗಿ ಹೇಳಬೇಕಾಗಿಲ್ಲ—, ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್‌ರವರೂ............

Sri G. A. ACHARYA.—That is for generation and distribution. Please do not make a difference.

ಶ್ರೀ ಎಚ್. ಸಿ. ದಾಸಪ್ಪನವರು.—ಅದರ ವಿಚಾರದಲ್ಲಿ ಎಲ್ಲರೂ ಅವರನ್ನು ಒಪ್ಪಿಕೊಂಡಿದ್ದಾರೆ. ಹೀಗೆಲ್ಲಾ ಇದ್ದರೂ all-India reputation ಎಂದು ಹೇಳಿದರೆ ಅರ್ಥ ಗೊತ್ತಾಗುವುದಿಲ್ಲ. ಈಗ ಎರಡು ದಿವಸಗಳ ಹಿಂದೆ ಶ್ರೀ ರಾಮಕೃಷ್ಣರೆಂಬುವವರು ಅಮೆರಿಕಾದಲ್ಲಿ ವಿಶೇಷ ಶಿಕ್ಷಣ ಪಡೆದು ಬರಲು ಹೋಗಿದ್ದಾರೆ. ಅವರ ಸ್ಥಾನದಲ್ಲಿ ಮೊನ್ನೆತಾನೆ ಸೀಮೆಯಿಂದ ಹಿಂತಿರುಗಿ ಬಂದ ಶ್ರೀ ಇ. ವಿ. ಗಣಪತಿ ಅಯ್ಯರ್ ಅವರನ್ನು ನೇಮಿಸಲಾಗಿದೆ.

ಇಷ್ಟೇ ಅಲ್ಲದೆ ಅಲ್ಲಿನ ಟೆಕ್ನಿಕಲ್ ಸಲಹೆಗಾರರೂ ಸಹ ಇಡೀ ಭಾರತ ದೇಶದಲ್ಲೇ ಪ್ರಸಿದ್ಧರಾಗಿ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈಂಟಿಫಿಕ್ ರಿಸರ್ಚ್ ಸಂಸ್ಥೆಗೆ ಡೈರೆಕ್ಟರಾಗಿರುವ ಪ್ರೊಫೆಸರ್ ಥ್ಯಾಕರೇಯವರೇ ಆಗಿರುವಾಗ ಈ ಗೌರ್ನಮೆಂಟ್ ಎಲೆಕ್ಟ್ರಿಕ್ ಫ್ಯಾಕ್ಟರಿಗೆ ಇನ್ನೆಂಥ ನಿಪುಣರನ್ನು ಕರೆದುಕೊಂಡು ಬರಬೇಕೆನ್ನುತ್ತೀರೋ ಗೊತ್ತಿಲ್ಲ!

ಆಮೇಲೆ ಕಬ್ಬಿಣದ ಮತ್ತು ಉಕ್ಕಿನ ಕಾರ್ಖಾನೆ ವಿಷಯ. ಡಾ|| ಟ್ರೋನ್‌ರವರೇನೋ ಜಗತ್ತಿನಲ್ಲೇ ಪ್ರಸಿದ್ಧರಾದ ಪುರುಷರಾಗಿರಬಹುದು. ಆದರೂ ಅವರೇನೋ ಒಂದು "bird of passage" ಎನ್ನುವ ರೀತಿಯಲ್ಲಿ ಇಲ್ಲಿಗೆ ಬಂದು ಏನು ಹೇಳಿಬಿಟ್ಟರೋ, ಎಲ್ಲರೂ ಅದನ್ನು ನಂಬುವುದಕ್ಕಾಗುವುದಿಲ್ಲ. ಈ ಕಬ್ಬಿಣ ಮತ್ತು ಉಕ್ಕಿನ ವಿಷಯದಲ್ಲಿ ಅದರಲ್ಲೂ charcoal pig iron ವಿಚಾರದಲ್ಲಿ ಯಾರಾದರೂ ಒಬ್ಬರು ಪೂರ್ತಿ ಅನುಭವವುಳ್ಳವರಿದ್ದಾರೆಯೇ ಎಂದರೆ ನಮ್ಮ ಪೂಜ್ಯ ಪಿತಾಮಹರಾದ ಸರ್ ಎಂ. ವಿಶ್ವೇಶ್ವರಯ್ಯನವರೆಂದು ಹೇಳಬಹುದಾಗಿದೆ. ಅವರ ಪೂರ್ತಿ ಸಲಹೆ ಸಹಾನುಭೂತಿ ಈ ಕೆಲಸಕ್ಕಿದೆ. ಈಗತಾನೆ ಜನವರಿಯಲ್ಲಿ ಅವರು 8–10 ದಿವಸಗಳು ಅಲ್ಲಿಗೆ ಬಂದಿದ್ದು ಪ್ರತಿಯೊಂದು ಬಾಬಿನಲ್ಲೂ ಸಲಹೆ ಕೊಟ್ಟಿದ್ದಾರೆ. ಅದನ್ನೆಲ್ಲಾ ಅನುಷ್ಠಾನಕ್ಕೆ ತರುತ್ತಿದ್ದೇವೆ. ಇನ್ನೂ ಉತ್ತಮಪಡಿಸುವುದೇನೂ ಇಲ್ಲವೆಂದು ಹೇಳುವುದಿಲ್ಲ. ಕೆಲವು ಲೋಪದೋಷಗಳಿವೆಯೆಂಬುದನ್ನೂ ಒಪ್ಪುತ್ತೇನೆ. ಈಗಿನ ಕ್ರಮದಲ್ಲಿ ಬರೀ departmentalisation ಇರುವುದರಿಂದ, ಇದು ಒಂದು ಅಡಚಣೆಯೆಂದು ಶ್ರೀಮಾನ್ ಆಚಾರ್ಯರವರು ತಿಳಿಸಿದ್ದನ್ನೂ ನಾನು ಒಪ್ಪುತ್ತೇನೆ. ಆದರೂ ಈಗ ಮೈಸೂರು ದೇಶದಲ್ಲೆಲ್ಲಾ ಈ ಸಂಸ್ಥೆಯ ವಿಷಯದಲ್ಲಿ ನಾವು ಯಾವುದೊಂದು ಒಳ್ಳೆಯ ಹೆಸರನ್ನು ಗಳಿಸಿದ್ದೇವೋ ಅದಕ್ಕೆಲ್ಲ ಈ ಸೂಚನೆಯ ದೆಸೆಯಿಂದ ಲೋಪ ಬಂದೀತೋ ಎನ್ನಿಸುತ್ತದೆ. ಈ ವಿಚಾರದಲ್ಲಿ ಯಾವ ಹೊಸ ವಿಧಾನವನ್ನು ವ್ಯವಸ್ಥೆ ಮಾಡಬೇಕೋ ಅದನ್ನು ಶ್ರೀಮಾನ್ ಭೀಮಪ್ಪನಾಯಕರ ನಿರ್ಣಯ ಬಂದಾಗ ಪ್ರಸ್ತಾಪಿಸುತ್ತೇನೆ. ಆದ್ದರಿಂದ ಸದ್ಯಕ್ಕೆ ನಾನಿಷ್ಟು ಹೇಳಿದರೆ ಸಾಕೆಂದು ಕಾಣುತ್ತದೆ. ಶ್ರೀಮಾನ್ ವೀರಣ್ಣಗೌಡರಿಗೇ ಆಗಲೀ, ಅಥವ ಶ್ರೀಮಾನ್ ಆಚಾರ್ಯರವರಿಗೇ ಆಗಲೀ ಅವರ ಉದ್ದೇಶ ಇದೇ ರೂಪದಲ್ಲಿ ನೆರವೇರಿಲ್ಲವೆಂದು ತೋರುತ್ತದೆ. ಕೈಗಾರಿಕೆಗಳನ್ನು departmentalisation ಇಲ್ಲದೆ ಬೇರೆ ರೀತಿಯಲ್ಲಿ ನಡೆಸುತ್ತೇವೆಂದು ಹೇಳುತ್ತೇನೆ. ಒಟ್ಟಿನಲ್ಲಿ ಅವರ ಸಲಹೆಗಳಿಗಾಗಿ ನಾನು ವಂದನೆಗಳನ್ನು ಅರ್ಪಿಸುತ್ತೇನೆ. ಇಷ್ಟು ಹೇಳಿದ ಮೇಲೆ ಮಾನ್ಯ ಮಿತ್ರರು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆಂದು ನಂಬಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಚ್. ಕೆ. ವೀರಣ್ಣಗೌಡರು.—ಈ ನಿರ್ಣಯದಲ್ಲಿ ಅಡಗಿರತಕ್ಕ ತತ್ವವನ್ನು ಸರ್ಕಾರದವರು ಒಪ್ಪಿಕೊಂಡಿರುವುದರಿಂದ ನಾನು ಈ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಸಭೆಯ ಅನುಮತಿಯನ್ನು ಬೇಡುತ್ತೇನೆ.

The resolution was, by leave of the Assembly, withdrawn.

Resolution No. 5

Restoration of minor tanks in Tarikere Taluk.

ಶ್ರೀ ಎಚ್. ಎಂ. ಮಲ್ಲಿಕಾರ್ಜುನಪ್ಪನವರು (ಚಿಕ್ಕಮಗಳೂರು ಜಿಲ್ಲೆ).—ಅಧ್ಯಕ್ಷರೇ, ನನ್ನ ನಿರ್ಣಯ ಈ ರೀತಿಯಿದೆ:—

"This Assembly is of the opinion that minor tanks in Tarikere Taluk should be immediately restored"

ತರೀಕೆರೆ ತಾಲ್ಲೂಕಿನಲ್ಲಿರುವ ಸಣ್ಣ ಪುಟ್ಟ ಕೆರೆಗಳನ್ನೆಲ್ಲಾ ಆದಷ್ಟು ಜರೂರಾಗಿ ಜೀರ್ಣೋದ್ಧಾರ ಮಾಡ

ಬೇಕು ಎಂಬುದೇ ನನ್ನ ನಿರ್ಣಯ. ತರೀಕೆರೆ ತಾಲ್ಲೂಕಿಗೆ ಸರ್ಕಾರದವರು ಈಗ ಸುಮಾರು ಎರಡು ವರ್ಷಗಳ ಹಿಂದೆ ಒಂದು Minor Tank Restoration ರೇಂಜನ್ನು ಮಂಜೂರು ಮಾಡಿದರು. ಇದಾಗಿ ಈಗಾಗಲೇ ಎರಡು ವರ್ಷಗಳಾಗುತ್ತಾ ಬಂತು. ಅಲ್ಲಿಗೆ ಕೊಟ್ಟಿರುವ ಸಿಬ್ಬಂದಿಗೇ ಸುಮಾರು 25,000 ರೂಪಾಯಿಗಳು ಖರ್ಚಾಗಿದೆ. ಅವರು ಅಂದಾಜಾ ಎಲ್ಲವನ್ನೂ ಪೂರೈಸಿ ದುರಸ್ತಿ ಕೆಲಸವನ್ನು ಕೈಕೊಳ್ಳುವುದಕ್ಕೆ ಮುಂಚೆ ರೆವೆನ್ಯೂ ಇಲಾಖೆಗೆ ಕೌಂಟರ್‌ಸಿಗ್ನೇಚರ್‌ಗೆ ಕಳುಹಿಸಿಕೊಟ್ಟರೆ ಅದು ಈಗ ಎರಡು ವರ್ಷಗಳಾದರೂ ಕೂಡ ವಾಪಸ್ಸು ಬರದೆ, ಯಾವ ಕೆರೆ ಕೆಲಸವನ್ನೂ ಕೈಕೊಳ್ಳಲಿಕ್ಕಾಗದೆ, ಹಾಗೆಯೇ ಬಿದ್ದಿದೆ. ನಮ್ಮ ತಾಲ್ಲೂಕಿನಲ್ಲಿರುವ ಸುಮಾರು 300 ಕೆರೆಗಳಲ್ಲಿ 260 ಕೆರೆಗಳು ಜೀರ್ಣೋದ್ಧಾರವಾಗಬೇಕಾಗಿವೆ. ನಾವೆಲ್ಲರೂ ದಿನೇ ದಿನೇ ಆಹಾರ ಧಾನ್ಯಗಳನ್ನು ಹೆಚ್ಚಿಗೆ ಬೆಳೆಯಬೇಕು, ಎಲ್ಲರೂ ಗೊಬ್ಬರ ಹೆಚ್ಚಿಗೆ ಹಾಕಬೇಕು ಎಂದು ಬರೀ ಭಾಷಣಗಳನ್ನು ಮಾಡುತ್ತಿದ್ದೇವೆಯೇ ಹೊರತು. ನಿಜವಾಗಿ ಯಾವ ತೆರದ ಅನುಕೂಲಗಳನ್ನೂ ರೈತರಿಗೆ ಕಲ್ಪಿಸಿಕೊಟ್ಟಿಲ್ಲ. ರೈತ ನಿಮ್ಮ ವ್ಯವಸಾಯದ ಎಕ್ಸ್‌ಪರ್ಟುಗಳಿಗಿಂತಲೂ ಬುದ್ಧಿವಂತ. ಹೆಚ್ಚಿಗೆ ಬೆಳೆಯಬೇಕೆಂಬ ಆಸೆಯೂ ಇದೆ. ಅವನಿಗೇನಿದ್ದರೂ ಈ ಕೆರೆಗಳನ್ನು ಜೀರ್ಣೋದ್ಧಾರ ಮಾಡಿಕೊಟ್ಟು ನೀರು ಒದಗಿಸಿಕೊಟ್ಟರೆ ಸಾಕು. ಎಷ್ಟು ಬೆಳೆಯಲು ಸಾಧ್ಯವೋ ಅಷ್ಟನ್ನೂ ಬೆಳೆಯುತ್ತಾನೆ. ಆಹಾರ ಧಾನ್ಯಗಳಿಗೆ ಇಷ್ಟು ಒಳ್ಳೆಯ ಬೆಲೆಯಿರುವಾಗ ಅವನೆಂದೂ ಸೋಮಾರಿಯಾಗುವುದಿಲ್ಲ. If the Government guarantee an assured supply of water, the raiyats will surely grow foodgrains. ಎಷ್ಟೋ ಸಣ್ಣ ಸಣ್ಣ ಕೆರೆಗಳಲ್ಲಿ ಕೇವಲ ತೂಬು ಹೋಗಿಯೋ, ಅಥವಾ ಏರಿ ಎತ್ತರ ಕಡಿಮೆಯಾಗಿಯೋ, ಇಲ್ಲವೆ ಕೊಂಚಮಟ್ಟಿಗೆ ಒಡೆದು ಹೋಗಿಯೋ ಇರುತ್ತದೆ. P.W.D. ಇಲಾಖೆಯವರೇನೋ ಇವುಗಳನ್ನು ಆದಷ್ಟುಮಟ್ಟಿಗೆ ರಿಪೇರಿ ಮಾಡಬೇಕೆಂದಿದ್ದರೂ, ಈ ಇಲಾಖೆಯವರಿಗೂ ರೆವೆನ್ಯೂ ಇಲಾಖೆಯವರಿಗೂ ಒಂದಕ್ಕೊಂದಕ್ಕೆ ಹೊಂದಾಣಿಕೆಯಿಲ್ಲದೆ ಕೆಲಸ ಹಾಗೆಯೇ ಬಿದ್ದಿರುತ್ತದೆ. P.W.D. ಇಲಾಖೆಯವರು ರೆವೆನ್ಯೂ ಇಲಾಖೆಯವರಿಗೆ ಕಳುಹಿಸಿಕೊಟ್ಟರೆ ಅವರು ಎಷ್ಟು ದಿವಸಗಳಾದರೂ ಮುಚ್ಚಳಿಕೆ ಬರೆಸುವುದಕ್ಕೆ ಪ್ರಯತ್ನ ಪಡುವುದಿಲ್ಲ. ಎಷ್ಟೋವೇಳೆ ಈ ರಿಕಾರ್ಡ್‌ಗಳು ಜಿಲ್ಲಾಧಿಕಾರಿಗಳ ಆಫೀಸಿಗೆ ಹೋಗಿ ಮುಚ್ಚಳಿಕೆ ಇನ್ನೂ ಆಗಿಲ್ಲವೆಂದು ಹೇಳಿ ವಾಪಸ್ಸು ಬಂದು ಬಿಡುತ್ತದೆ. ಹೀಗಾಗಿ ಎರಡು ಮೂರು ಸಾವಿರ ರೂಪಾಯಿಗಳ ಕೆಲಸಕೂಡ ಸುಮ್ಮನೆ ಮುಲ್ಕಿ ಬಿದ್ದಿರುತ್ತದೆ. ಇದು ಮುಖ್ಯವಾಗಿ ಈ ಎರಡು ಇಲಾಖೆಗಳಿಗೂ ಹೊಂದಾಣಿಕೆಯಿಲ್ಲದಿರುವುದರಿಂದಲೇ ನಿಧಾನಕ್ಕೆ ಕಾರಣವಾಗಿದೆಯೆಂದು ಹೇಳುತ್ತೇನೆ. ಈ ಸಣ್ಣಸಣ್ಣ ಕೆರೆಗಳನ್ನು ಜೀರ್ಣೋದ್ಧಾರ ಮಾಡುವುದು ಕೂಡ ಅಷ್ಟು ಕಷ್ಟವಿಲ್ಲ. 15–20 ದಿವಸಗಳಿಗೆ ಒಂದನ್ನು ಮಾಡಿ ಬಿಡಬಹುದು. ಖಾಸಗಿಯವರು ಅವರವರು ತಮ್ಮ ಕೆಲಸಗಳನ್ನು ಹೇಗೆ ಮಾಡುತ್ತಾರೋ ಅಷ್ಟೇ ನಿಗಾದಿಂದ ಸರ್ಕಾರದವರು ಇದಕ್ಕೂ ಗಮನ ಕೊಟ್ಟು 15–20 ದಿವಸಗಳ ಕೆಲಸ ಮಾಡಿದರೆ ಸುಲಭವಾಗಿ ಜೀರ್ಣೋದ್ಧಾರ ಮಾಡಿಕೊಳ್ಳಬಹುದು. ಆದ್ದರಿಂದ ಹಾಲಿ ತರೀಕೆರೆ ತಾಲ್ಲೂಕಿನ ಕೆರೆಗಳ ವಿಷಯವೊಂದಲ್ಲ, ನಮ್ಮ ದೇಶದಲ್ಲಿರತಕ್ಕ ಎಲ್ಲಾ ಕೆರೆಗಳನ್ನೂ ಜೀರ್ಣೋದ್ಧಾರ ಮಾಡಿದ ಹೊರತು ನಮ್ಮ ದೇಶದಲ್ಲಿರತಕ್ಕ ಈ ಆಹಾರದ ಕೊರತೆ ಹೋಗುವುದಿಲ್ಲ. 1951ನೆಯ ಇಸವಿಯೊಳಗೆ ನಮ್ಮಲ್ಲಿ ಸ್ವಪರಿಪೂರ್ಣತೆಯೂ ಉಂಟಾಗುವುದಿಲ್ಲ. ಆದ್ದರಿಂದ ಸರ್ಕಾರದವರು ಮೊದಲು ನಾನು ಕೇಳಿರುವಂತೆ ತರೀಕೆರೆ ತಾಲ್ಲೂಕಿನ ಮೈನರ್ ಕೆರೆಗಳನ್ನೆಲ್ಲಾ ಜೀರ್ಣೋದ್ಧಾರ ಮಾಡುವುದಕ್ಕೆ ಆದಷ್ಟು ಜಾಗ್ರತೆ ಕಾರ್ಯಕ್ರಮ ಕೈಕೊಳ್ಳಬೇಕೆಂದು ಸೂಚಿಸುತ್ತೇನೆ.

Mr. SPEAKER.—Resolution moved:

"This Assembly is of the opinion that minor tanks in Tarikere Taluk should be immediately restored."

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ-ನಿಮ್ನ ಪಂಗಡ).—ಮಾನ್ಯ ಅಧ್ಯಕ್ಷರೇ, ನನ್ನ ಮಿತ್ರರಾದ ಶ್ರೀಮಾನ್ ಮಲ್ಲಿಕಾರ್ಜುನಪ್ಪನವರು ಸಭೆಯ ಮುಂದೆ ಮಂಡಿಸಿರುವ ಸೂಚನೆಯನ್ನು ಸಮರ್ಥಿಸುತ್ತಾ ನಾನು ಕೆಲವು ಮಾತುಗಳನ್ನು ಆಡಬಯಸುತ್ತೇನೆ. ನಮ್ಮ ತರೀಕೆರೆ ತಾಲ್ಲೂಕು ಮಲೆನಾಡು ಪ್ರದೇಶ. ಮಲೆನಾಡೆಂಬುದು ನಮ್ಮ ದೇಶದ ಕಣಜವೆಂದು ಪಂಡಿತ ಜವಾಹಿರಲಾಲ್‌ರವರೇ ಹೇಳಿದ್ದಾರೆ. ಅಂಥ ಪ್ರದೇಶದಲ್ಲಿ ನಾವು ಹೆಚ್ಚಿಗೆ ಬೆಳೆಯಲಿಕ್ಕೆ ಎಲ್ಲಾ ಅನುಕೂಲತೆಗಳನ್ನೂ ಕಲ್ಪಿಸಿಕೊಡಬೇಕು. ಈಗ ಅಲ್ಲಿ ಅನೇಕ ಕೆರೆಗಳಿವೆ. ದೇವರು ಕೊಟ್ಟ ಮಳೆಯಿಂದ ತುಂಬಿ ಘನವಾದ ಪೈರು ಬೆಳೆದು ದೇಶಕ್ಕೆಲ್ಲಾ ದವಸಧಾನ್ಯವನ್ನು ಒದಗಿಸಿಕೊಡುವುದಕ್ಕೆ ಸಹಾಯಕವಾಗಿರುವ ಈ ಕೆರೆಗಳನ್ನು ಸರಿಪಡಿಸಬೇಕಾದ್ದು ಈಗ ಅತ್ಯಂತ ಅವಶ್ಯಕವಾಗಿದೆ. ಅದರಲ್ಲೂ ನಮ್ಮ ದೇಶದಲ್ಲಿರತಕ್ಕ ಕೆರೆಗಳಲ್ಲಿ ಬಹುಭಾಗದವು ಮಲೆನಾಡು ಪ್ರದೇಶದಲ್ಲಿಯೇ ಇವೆಯೆಂದಮೇಲೆ ಅವುಗಳ ಜೀರ್ಣೋದ್ಧಾರ ಕಾರ್ಯದ ಕಡೆಗೆ ನಾವು ಜರೂರು ಗಮನಕೊಡಬೇಕಾಗಿದೆಯೆಂಬುದನ್ನು ನಾನು ಮತ್ತೆ ಹೇಳಬೇಕಾಗಿಲ್ಲ.

ಶ್ರೀ ಮಲ್ಲಿಕಾರ್ಜುನಪ್ಪನವರು ಹೇಳಿದಂತೆ ತರೀಕೆರೆ ತಾಲ್ಲೂಕಿನಲ್ಲಿ 300 ಕೆರೆಗಳಿವೆ. ಅಲ್ಲಿ ಸರಿಯಾಗಿ ಮಳೆ ಬಂದರೆ ದೇಶಕ್ಕೆ ಬೇಕಾದ ಬತ್ತ ವಗೈರೆ ಪದಾರ್ಥಗಳನ್ನು ಸರಬರಾಯಿ ಮಾಡಬಹುದು. ಈಗ ಕೆರೆ ಕಾಮಗಾರಿಗಳು ತರೀಕೆರೆ ತಾಲ್ಲೂಕಿನಲ್ಲಿ ಸರಿಯಾಗಿ ಆಗದಿರುವುದರಿಂದ ಅಲ್ಲಿ ಬತ್ತವನ್ನು ಸರಿಯಾಗಿ ಬೆಳೆಯುತ್ತಿಲ್ಲ. ಆದ್ದರಿಂದ ಕೆರೆ ದುರಸ್ತಿ ಮಾಡಿದ್ದೇ ಆದರೆ ಅನುಕೂಲವಾಗುತ್ತದೆ. ಸರಿಯಾದ ನೀರು ಸರಬರಾಯಿಲ್ಲದೆ ಅಲ್ಲಿ ಜಮೀನು ಆಬಾದಾಗುತ್ತಿಲ್ಲ. ಈಗ ನೀರು ಸರಬರಾಯಾದರೆ ಎಷ್ಟೋ ಜನ ಮುಂದೆಬಂದು ವ್ಯವಸಾಯಾಭಿವೃದ್ಧಿಮಾಡಿ ಬತ್ತ ಬೇಕಾದಷ್ಟು ಬೆಳೆಯಬಹುದು. ಆದ್ದರಿಂದ ಸರ್ಕಾರದವರು ಈ ನಿರ್ಣಯಕ್ಕೆ ಬೆಂಬಲಕೊಟ್ಟು ಈ ವರ್ಷವೇ ಕೆರೆ ಕಾಮಗಾರಿ ಮಾಡಿಸಿದರೆ ಖಂಡಿತವಾಗಿಯು ಅನುಕೂಲವಾಗುತ್ತದೆ, ಆಹಾರಾಭಾವ ತಪ್ಪುತ್ತದೆ ಎಂದು ಹೇಳಿ ಈ ನಿರ್ಣಯಕ್ಕೆ ಬೆಂಬಲ ನೀಡುತ್ತೇನೆ.

*ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ತರೀಕೆರೆ ತಾಲ್ಲೂಕಿನಲ್ಲಿ ಸುಮಾರು 300 ಚಿಕ್ಕ ಕೆರೆಗಳು ಜೀರ್ಣೋದ್ಧಾರವಾಗಬೇಕಾಗಿವೆ. ಅದೇ ರೀತಿಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲೂ ಇರುವ ಕೆರೆಗಳೂ ಜೀರ್ಣೋದ್ಧಾರವಾಗಬೇಕಾಗಿವೆ. ಯಾವ ತಾಲ್ಲೂಕಿನ ಕೆರೆಗಳನ್ನು ಜೀರ್ಣೋದ್ಧಾರ ಮಾಡಬೇಕಾದರೂ ಸರ್ಕಾರದ ಮುಂದೆ ಒಂದು ಖಚಿತವಾದ ಯೋಜನೆ ಇದ್ದೇ ಇರಬೇಕು. ಇಲ್ಲದಿದ್ದರೆ, ಈ ದಿವಸ ತರೀಕೆರೆ ತಾಲ್ಲೂಕಿನಲ್ಲಿ ಆಗಬೇಕು, ನಾಳೆ ಇನ್ನೊಂದು ತಾಲ್ಲೂಕಿನಲ್ಲಾಗಬೇಕು, ಎಂದು ಕೇಳುತ್ತಾ ಇರಬೇಕಾಗುತ್ತದೆ.

ಅಧ್ಯಕ್ಷರು.—ತರೀಕೆರೆ ತಾಲ್ಲೂಕು ವಿಚಾರ ಮಾತ್ರ ಮಾತನಾಡಿ.

ಶ್ರೀ ಟಿ. ಮಾದಯ್ಯಗೌಡರು.—ಮೊದಲು ಆ ತಾಲ್ಲೂಕಿನ ಕೆಲಸ ಪೂರೈಸಿದರೆ ಆ ಮೇಲೆ ಬೇರೆ ಕಡೆ ಮಾಡುವುದಕ್ಕೆ ಅನುಕೂಲ. ಸರ್ಕಾರದವರು ಸಣ್ಣ ಕೆರೆಗಳನ್ನು ಜೀರ್ಣೋದ್ಧಾರ ಮಾಡುವಾಗ ಯಾವ ಕೆರೆ ಯಾವ ಸ್ಥಿತಿಯಲ್ಲಿದೆ, ತೂಬಿನಲ್ಲಿ ಮಣ್ಣು ಮುಚ್ಚಿದೆಯೇ, ಕೋಡಿ ಕಿತ್ತು ಹೋಗಿದೆಯೆ ಎಂಬುದನ್ನು ತಿಳಿದುಕೊಳ್ಳಲು ಒಂದು ಸಂಪೂರ್ಣ ಚರಿತ್ರೆ ಮುಂದಿಟ್ಟುಕೊಂಡರೆ ಎಷ್ಟು ಕಾಲದಲ್ಲಿ ಯಾವ ತಾಲ್ಲೂಕು ಕೆರೆಗಳನ್ನು ಮುಗಿಸಬಹುದೆಂಬುದು ಅವರಿಗೆ ಚೆನ್ನಾಗಿ ಗೊತ್ತಾಗುತ್ತದೆ. ಇದರ ಜೊತೆಗೆ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಒಂದು ಸಿಬ್ಬಂದಿಯಿಟ್ಟು ಬುಲ್‌ಡೋಜರ್ ಮುಂತಾದ ಸಹಾಯವನ್ನೊದಗಿಸಿ ಅನುಕೂಲಪಡಿಸಬೇಕು. ಹೀಗೆ ಮಾಡುವುದಾದರೆ ತರೀಕೆರೆಯಲ್ಲಿ ಒಂದು ತಿಂಗಳಲ್ಲಿ ಮುಗಿದರೆ ಸಂಸ್ಥಾನಾವಾಳೆ ಈ ಕೆಲಸವು ಎರಡು ಮೂರು ವರ್ಷಗಳಲ್ಲಿ ಮುಗಿಯಬಹುದೆಂದು ಸೂಚಿಸುತ್ತೇನೆ.

ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮಿತ್ರರಾದ ಶ್ರೀ ಮಲ್ಲಿಕಾರ್ಜುನಪ್ಪನವರು ಸಭೆಯ ಮುಂದೆ ಮಂಡಿಸಿರುವ ನಿರ್ಣಯವನ್ನು ಅನುಮೋದಿಸುವುದರಲ್ಲಿ ಏನೂ ಸಂದೇಹವಿಲ್ಲ. ಸರ್ಕಾರದ ನೀತಿಯಾದರೂ ಕೂಡ ಈ ಮೈನರ್ ಕೆರೆಗಳನ್ನು ಬಹು ಬೇಗ ಆದಷ್ಟು ಜಾಗ್ರತೆಯಾಗಿ ಜೀರ್ಣೋದ್ಧಾರ ಮಾಡಬೇಕೆಂಬುದೇ ಆಗಿದೆ. ತರೀಕೆರೆಯಲ್ಲಿರುವ 226 ಮೈನರ್ ಕೆರೆಗಳ ಪೈಕಿ 177 ಜೀರ್ಣೋದ್ಧಾರವಾಗಬೇಕಾಗಿವೆ. ಹಾಗೆಯೇ ಮೈಸೂರು ದೇಶದ ಎಲ್ಲಾ ಕಡೆಯೂ ಸರಿಯಾದ ಗಮನ ಕೊಡಬೇಕು. ಒಂದು ತಾಲ್ಲೂಕಿನಲ್ಲಿ ಮಾತ್ರ ಮಾಡಿದರು ಎಂಬ ಅಪಾದನೆ ಬರದೇ ಇರಲಿ ಎಂದು ಸರ್ಕಾರದವರು ಹೊಸದಾಗಿ ಪಬ್ಲಿಕ್‌ವರ್ಕ್ಸ್ ಇಲಾಖೆಯನ್ನು ಪುನರ್ರಚನೆ ಮಾಡಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಕೂಡ ಒಬ್ಬ ಗ್ರ್ಯಾಜುಯೇಟ್ ಸರ್ವೇಯರಿರಬೇಕು, ಎಲ್ಲಿ ಹೆಚ್ಚು ಕೆರೆ ನಾಲೆ ಇದೆಯೋ ಅಲ್ಲಿಗೆ ಹೆಚ್ಚು ಸಿಬ್ಬಂದಿ ಕೊಡಿ ಎಂದು ಹೇಳಿ ಒದಗಿಸಿದ್ದಾರೆ. ತರೀಕೆರೆ ತಾಲ್ಲೂಕಿನಲ್ಲಿ ಒಬ್ಬ ಅಸಿಸ್ಟೆಂಟ್ ಇಂಜಿನಿಯರು, ಒಬ್ಬ ಗ್ರ್ಯಾಜುಯೇಟ್ ಸರ್ವೇಯರ್ ಮತ್ತು ಸಬ್ ಓವರ್ಸಿಯರು ಇದ್ದಾರೆ, ಆದಷ್ಟು ಬೇಗ ಆ ತಾಲ್ಲೂಕಿನಲ್ಲಿರುವ ಮೈನರ್ ಕೆರೆ ಮತ್ತು ಅಣೆಕಟ್ಟುಗಳನ್ನು ಸರಿಪಡಿಸಲು ಪ್ರಯತ್ನ ಮಾಡುತ್ತಿದ್ದಾರೆ. ಮೊನ್ನೆ ತಾನೆ ತರೀಕೆರೆಗೆ ಹೋದಾಗ ಶ್ರೀ ಮಲ್ಲಿಕಾರ್ಜುನಪ್ಪನವರ ಭೇಟಿ ಮಾಡಲಾಯಿತು. ಅಲ್ಲಿಗೇನೇನಾಗಬೇಕೋ ಅದನ್ನೆಲ್ಲಾ ತಪಶೀಲಾಗಿ ನೋಡಿ ತಕ್ಕ ರಿಪೇರಿ ಕೆಲಸ ಮಾಡಬೇಕೆಂದು ತಿಳಿಸಿದೆ. ಅದಾದರೆ ಚೆನ್ನಾಗಿ ಬೆಳೆಯಾಗಬಹುದು. ಕೆರೆಗಳಿಗೆ ಫೀಡರನ್ನು ಎಲ್ಲಿ ಸರಿಪಡಿಸಬೇಕು. ಎಲ್ಲಿ ಅಣೆ ಹಾಕಿದರೆ ನೀರು ಬರಬಹುದು. ಎಂಬುದನ್ನು ಪರಿಶೀಲಿಸಿ, ಎರಡು ದೊಡ್ಡ ಹಳ್ಳಗಳಿಗೆ ಅಣೆ ಹಾಕಿ ಹೆಚ್ಚು ಪ್ರದೇಶಕ್ಕೆ ನೀರು ಸರಬರಾಯಿ ಮಾಡುವಂತೆಯೂ ತಿಳಿಸಿದೆ. ಆದರೆ ಮಾನ್ಯ ಸದಸ್ಯರು ಹೇಳಿದ ಹಾಗೆ ಪಬ್ಲಿಕ್ ವರ್ಕ್ಸ್ ಇಲಾಖೆಯವರೇ ಎಲ್ಲವನ್ನೂ ಜೀರ್ಣೋದ್ಧಾರ ಮಾಡುವುದಕ್ಕೆ ಸಾಧ್ಯವಿಲ್ಲ. ಕಾನೂನು ಪ್ರಕಾರ ಮೈನರ್ ಕೆರೆಗಳ ಜೀರ್ಣೋದ್ಧಾರಕ್ಕೆ ತಗಲುವ ವೆಚ್ಚದ ಅರ್ಧ ಭಾಗ ಕಾಂಟ್ರಿಬ್ಯೂಷನ್ ಕೊಡುತ್ತೇವೆಂದು ಆ ಪ್ರದೇಶದವರು ಬರೆದು ಕೊಡಬೇಕು. ಹಾಗೆ ಅವರಿಂದ ವಸೂಲು ಮಾಡುವುದಕ್ಕೆ ಕನಿಷ್ಟ ಪಕ್ಷ ಅರ್ಧ ಭಾಗದ ರೈತರಾದರೂ ಒಪ್ಪಿಗೆ ಕೊಟ್ಟರೆ ಪರವಾಗಿಲ್ಲ. ಇದು ಕೆಲವು ಕಡೆ ನಿಧಾನವಾಗಬಹುದು. ಈ ಕಾನೂನು ನಿರ್ಬಂಧವನ್ನು ಸಡಿಲ ಮಾಡಬೇಕೆಂಬ ಯೋಚನೆಯಿದೆಯೆಂದು ಸಭೆಯ ಮುಂದೆ ಹೇಳುತ್ತೇನೆ. ಅಲ್ಲದೆ ನಮಗೆ ಪೆಟ್ರೋಲ್, ಲಾರಿ ಮುಂತಾದುವುಗಳ ಕೊರತೆಯಿದ್ದರೂ ತರೀಕೆರೆಯಲ್ಲಿ ವಿಶೇಷ ಸನ್ನಿವೇಶವಿದೆ. ಅದು ಸಹಾಯಕವಾಗುತ್ತದೆ. ಅಲ್ಲಿ ಮಳೆ ಚೆನ್ನಾಗಿದೆ. ಆದ್ದರಿಂದ ಸಾಕಷ್ಟು ನೀರನ್ನು ಶೇಖರಣೆ ಮಾಡಿ ತರೀ ಬೆಳೆ ಮಾಡುವುದಕ್ಕೆ ಅವಕಾಶವಿದೆ. ಹೆಚ್ಚು ನಿಗಾ ಕೊಟ್ಟರೆ ಸೌಲಭ್ಯವಿದೆ, ಅದನ್ನು ಉಪಯೋಗಿಸಿಕೊಂಡು ಹೆಚ್ಚು ಆಹಾರ ಬೆಳೆಯಬಹುದು. ಆದ್ದರಿಂದ ಇದನ್ನು ಮಾಡಲೇಬೇಕಾಗಿದೆ.

ತರೀಕೆರೆಯಲ್ಲಿ ಸಂಪತ್ತು ಸಮೃದ್ಧಿಯಾಗಿದ್ದರೂ ಜನರ ಕೊರತೆಯಿದೆ, ಕೂಲಿಯಾಳುಗಳು ಸಿಕ್ಕುವುದು ಕಷ್ಟ. ಲಿಂಗದಹಳ್ಳಿ ಮತ್ತು ಇತರ ಕಡೆಗಳಲ್ಲಿ ಹತ್ತು ಸಾವಿರ ರೂಪಾಯಿ ಖರ್ಚು ಮಾಡಿದರೆ 400 ಎಕರೆ ತರಿಯಾಗುತ್ತದೆ. ಆದರೆ ಅಲ್ಲಿಗೆ ಜನರು ಹೋಗುವುದಕ್ಕೆ ಆಸೆಪಡುವುದಿಲ್ಲ. ಆದ್ದರಿಂದ ಜನ ಹೆಚ್ಚಾಗಿರುವ ಕಡೆಗೆ ಮೊದಲು ಗಮನ ಕೊಟ್ಟು ಜನರು ಅಲ್ಲಿಗೆ ಹೋಗಲು ಅವಕಾಶ ಮಾಡಬೇಕು. ಆದ್ದರಿಂದ ಎಲ್ಲಿಗೆ ಮೊದಲು ಗಮನ ಕೊಡಬೇಕೆಂಬುದನ್ನು ನೋಡಿ ಮೊದಲು ಅದನ್ನು ಮಾಡುತ್ತಾರೆಂದೂ, ಭರವಸೆಯಿರುವ ಕಡೆ ಮೊದಲು ಪ್ರಾಶಸ್ತ್ಯಕೊಟ್ಟು ಕೆಲಸ ಪ್ರಾರಂಭಿಸುವರೆಂದೂ, ಆ ಬಗ್ಗೆ ಸೂಕ್ತ ತಿಳಿವಳಿಕೆ ಇತ್ತಿದೆಯೆಂದೂ ಹೇಳುತ್ತೇನೆ. ಈ ಭರವಸೆಯ ಮೇಲೆ ಸೂಚಕರು ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಬೇಕು. ರೆವೆನ್ಯೂ ಇಲಾಖೆಯಲ್ಲೂ ಇದಕ್ಕೆ ಪ್ರಯತ್ನ ನಡೆಯುತ್ತಿದೆಯೆಂಬುದನ್ನು ಮಾನ್ಯ ಮಂತ್ರಿಗಳು ಆಮೇಲೆ ತಿಳಿಸಬಹುದು. ಇದಕ್ಕೇ ಒಬ್ಬ ಅಸಿಸ್ಟೆಂಟ್ ಇಂಜಿನಿಯರೂ ಸಹಾ ಇದ್ದಾರೆ.

ಶ್ರೀ ಮಲ್ಲಿಕಾರ್ಜುನಪ್ಪನವರು.—ಮಾನ್ಯ ಮಂತ್ರಿಗಳು ಕೊಟ್ಟ ಭರವಸೆಯ ಮೇಲೆ ನನ್ನ ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಸಿದ್ಧನಾಗಿದ್ದೇನೆ.

ಅಧ್ಯಕ್ಷರು.—ಸೂಚಕರು ನಿರ್ಣಯವನ್ನು ವಾಪಸ್ಸು ತೆಗೆದುಕೊಳ್ಳಲು ಸಭೆಯ ಅನುಮತಿಯಿದೆಯೇ ?

The resolution was, by leave of the Assembly, withdraw.

ಅಧ್ಯಕ್ಷರು.—ಸಭೆಯು ಪುನಃ ನಾಳೆ ಒಂದು ಗಂಟೆಗೆ ಸೇರುತ್ತದೆ.

The Assembly adjourned at Six of the Clock to meet again at One of the Clock on Thursday, 23rd March 1950.

WD—1429—GPB—400—27-3-50